# ಅಪರಂಜಿ



ತಿಳಿನಗೆಯ ಕಾರಂಜಿ

ಸೆಪ್ಟಂಬರ್ 2022



ಉಪಾಧ್ಯಾಯರ ವಿಶೇಷಾಂಕ




ಶ್ರೀಗುರುಭ್ಯೋನ್ನಮಃ

ಬಿಡಿ ಪ್ರತಿ: ರೂ. 10/-



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 39
ಸಂಚಿಕೆ - 12
ಸೆಪ್ಟಂಬರ್ - 2022

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಹೈಸ್ಕೂಲ್ ದಿನಗಳು | ಶಿವು | 4 |
| ಮೇಷ್ಟ್ರು ಕಂಡ ಮೇಷ್ಟ್ರು | ಬೇಲೂರು ರಾಮಮೂರ್ತಿ | 7 |
| ಮೇಷ್ಟ್ರ ವೃತ್ತಿಯ ಭಾಗ್ಯ | ಭುವನೇಶ್ವರಿ ಹೆಗಡೆ | 10 |
| ಜೋಗಿಲ ಸಿದ್ಧ ಜವರಯ್ಯ | ದೊಡ್ಡರಂಗೇ ಗೌಡ | 15 |
| ಹನಿಗಳು | ಜಿ.ಪಿ.ರಾಜರತ್ನಂ | 17 |
| ಟೀಚರ್ಸ್ ಡೇ - ವ್ಯಂಗ್ಯ ಚಿತ್ರಗಳು | | 19 |
| ವೃತ್ತಿ ಜೀವನದ ವಿನೋದ ಪ್ರಸಂಗಗಳು | ಪ್ರಭುಪ್ರಸಾದ್ | 21 |
| ಮೆಲುಕು | ಸಂಪಟೂರು ವಿಶ್ವನಾಥ | 24 |
| ಶಿಕ್ಷಕನ ಗುರುತರ ಕರ್ತವ್ಯ | ಗಾಯತ್ರಿ ಮೂರ್ತಿ | 27 |
| ತುಂತುರು | ದಂನಆ | 32 |
| ಹಾಸ್ಯರಸ ಈ ವೃತ್ತಿಯಲ್ಲಿ | ಕವಿತಾ ಹೆಗಡೆ ಅಭಯಂ | 33 |
| ಅನುಭವಗಳ ನೆನಪಿನಲ್ಲಿ | ಡಾ. ಶ್ಯಾಮಲಾ ರವಿಶಂಕರ್ | 36 |
| ಟೀಚರ್ | ಪಾಲಹಳ್ಳಿ ವಿಶ್ವನಾಥ್ | 39 |

**ವ್ಯಂಗ್ಯ ಚಿತ್ರಗಳು:** ಶೃಂಗೇರಿ ಸತೀಶ್, ಇಂಟರ್ನೆಟ್ ಕೃಪೆ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

" ನಾಗರಹೊಳೆಯಲ್ಲಿ ಸುರಂಗ ರೈಲು ಮಾರ್ಗ"

–ಪತ್ರಿಕೆ

**ಹುಲಿಗಳೆಲ್ಲ "ಬೇಡ" ಎಂದ ಘರ್ಜಿಸಿದವಂತೆ !!**

**೦೦೦**

" ನಾಮ ಬಲವೇ ಆಸ್ತಿ ; ಕಾಯಕ ನಾಸ್ತಿ" – ಪತ್ರಿಕೆ

**ಆಹಾ ! ಶೀರ್ಷಿಕೆ ಅಂದರೆ ಹೀಗಿರಬೇಕು !!**

**೦೦೦**

" ವಿಶ್ವಗುರು ಭಾರತ" ನೂರನೆಯ ಸಂಚಿಕೆಯ ಬಿಡುಗಡೆ

– ದಿನ ಪತ್ರಿಕೆ

**ಸರಿ, ಕೂಸು ಹುಟ್ಟುಕ್ಕೆ ಮುಂಚೆಯೇ ........ !!**

**೦೦೦**

ಪ್ರಧಾನಿ ಪಟ್ಟಕ್ಕೆ ಇಂಗ್ಲೆಂಡಿನಲ್ಲಿ ರಿಷಿ– ಟ್ರಸ್ ಸ್ಪರ್ಧೆ

– ಸುದ್ದಿ

**ಅಂತೂ ಇಂತೂ ಕುಂತಿಯ.......!!**

**೦೦೦**

" ಎ. ಸಿ. ಬಿ. ರದ್ದು ; ಲೋಕಾಯುಕ್ತ ಸಿಂಧು" – ಶೀರ್ಷಿಕೆ

**ನಿದ್ದೆಗೆಡಿಸುವ ತೀರ್ಮಾನ , ಅಂತ ಅಪರಂಜಿ ನಕ್ಕಳಂತೆ.**

**೦೦೦**

**ಸುಗಮ ಸಂಗೀತದ ಚಕ್ರವರ್ತಿ ಹಾಗೂ ಅಪರಂಜಿಯ**

**ಹಿತೈಷಿ ಶಿವಮೊಗ್ಗ ಸುಬ್ಬಣ್ಣ ನವರ ಆತ್ಮಕ್ಕೆ ಚಿರಶಾಂತಿ ಸಿಗಲಿ.**

**೦೦೦**

**ಉಚಿತ ಕೊಡುಗೆಗಳನ್ನು ಕೊಡುವುದು ಅನುಚಿತ ಎಂಬುದೇ**

**ನಮ್ಮ ಸದಭಿಪ್ರಾಯ !!**

**೦೦೦**

# ನಮ್ಮ ನಿಮ್ಮಲ್ಲಿ

**● ಶಿವಕುಮಾರ್**

ನನ್ನ ಪಾಡಿಗೆ ನಾನು ಮನೆಯಲ್ಲಿ ಆಟ ಆಡಿಕೊಂಡಿದ್ದಾಗ ಒಂದು ದಿನ ನಮ್ಮಮ್ಮ "ಇವತ್ತಿಂದ ನೀನು ಸ್ಕೂಲಿಗೆ ಹೋಗಬೇಕು. ಸ್ಕೂಲಿನ ಜವಾನ ಮಲ್ಲಯ್ಯ ಬಂದಿದಾನೆ" ಅಂತ ಹೇಳಿದರು. "ನಾನು ಸ್ಕೂಲಿಗೆ ಹೋಗಲ್ಲ" ಎಂಬ ನನ್ನ ಹೇಳಿಕೆಗೆ ಕವಡೆ ಕಾಸಿನ ಕಿಮ್ಮತ್ತನ್ನೂ ಕೊಡದೇ ಮಲ್ಲಯ್ಯ ನನ್ನನ್ನ ದಾರಿಯುದ್ದಕ್ಕೂ ದರದರನೆ ಸ್ಕೂಲಿಗೆ ಎಳೆದುಕೊಂಡು ಹೋಗಿದ್ದು, ನಾನು ಕಂಡ ಕಂಡವರನ್ನೆಲ್ಲಾ "ನನ್ನನ್ನ ಬಿಡಿಸಿ" ಅಂತ ಅಳುತ್ತಾ ಗೋಗರೆಯುತ್ತಿದ್ದ ದೃಶ್ಯವನ್ನಂತೂ ಮರೆಯುವಂತೆಯೇ ಇಲ್ಲ. ನನ್ನ ವಿದ್ಯಾಭ್ಯಾಸ ಹಾಗೆ ಶುರುವಾದರೂ ಮುಂದುವರಿದಂತೆ ಅನೇಕ ಉಪಾಧ್ಯಾಯರುಗಳು ನನ್ನ ಕಲಿಕೆಯ ಬಗ್ಗೆ ತೋರಿದ ಕಾಳಜಿಯನ್ನು ನೆನಪಿಸಿಕೊಂಡರೆ ಮನ ತುಂಬಿಬರುತ್ತದೆ.

ನಮ್ಮ ವಿದ್ಯಾಭ್ಯಾಸದ ಯಾತ್ರೆಯಲ್ಲಿ ಹತ್ತು ಹಲವಾರು ಉಪಾಧ್ಯಾಯರುಗಳೊಂದಿಗೆ ಸಂಪರ್ಕ ದೊರೆತಿದ್ದರೂ, ಹಲವು ಹೆಸರುಗಳು ಮಾತ್ರ ನಮ್ಮ ಮನಗಳಲ್ಲಿ ಅಚ್ಚೊತ್ತಿದಂತೆ ಉಳಿದುಬಿಡುತ್ತವೆ. ಗ್ಯಾಸ್ ಕಾಲೇಜಿನಲ್ಲಿ ಓದುತ್ತಿದ್ದಾಗ ಎಂ.ವಿ, ಸೀತಾರಾಮಯ್ಯ ನಮಗೆ ಕನ್ನಡ ಕಲಿಸುತ್ತಿದ್ದರು.

ಗಣಿತದ ಟೀಚರ್ ಭಾನುಮೂರ್ತಿಯವರ ಉಪನ್ಯಾಸವೆಂದರೆ ಬೇರೇ ಕ್ಲಾಸುಗಳ ವಿದ್ಯಾರ್ಥಿಗಳೂ ಗುಂಪುಗೂಡುತ್ತಿದ್ದರು. ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾಗ ಸುಬ್ರಮಣ್ಯ ಶಿವ ಎಂಬ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಲೆಕ್ಚರರ್, "ಒನ್ ಫೈನ್ ಮಾರ್ನಿಂಗ್ ಯು ವಿಲ್ ಫೈಂಡ್ ದ ಮೋಟರ್ ಬರ್ನ್ಟ್ ಟು ಆ್ಯಷಸ್" ಅಂತ ಹೇಳಿದಾಗ ಎಲೆಕ್ಟ್ರಿಕಲ್ ಷಾಕ್ ಹೊಡೆದ ಅನುಭವವೇ ಆಗಿತ್ತೆನ್ನಿ.

ಈ ಸಂಚಿಕೆಯನ್ನು ಉಪಾಧ್ಯಾಯರುಗಳ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ವಿದ್ಯಾದಾನದಲ್ಲಿ ಖ್ಯಾತನಾಮರುಗಳಾದ ಶ್ರೀಯುತ ದೊಡ್ಡ ರಂಗೇಗೌಡ, ಶ್ರೀಮತಿ ಭುವನೇಶ್ವರಿ, ಶ್ರೀಯುತ ಪ್ರಭುಪ್ರಸಾದ್ ಮತ್ತು ಇತರ ಅನೇಕರು ಈ ಕ್ಷೇತ್ರದಲ್ಲಿನ ತಮ್ಮ ಶ್ರೀಮಂತ ಅನುಭವಗಳನ್ನು ತಮ್ಮ ಲೇಖನಗಳಲ್ಲಿ ಹಂಚಿಕೊಂಡಿದ್ದಾರೆ. ಈ ವೃತ್ತಿಗೆ ಹೊಂದುವಂತಹ ಅನೇಕ ವ್ಯಂಗ್ಯ ಚಿತ್ರಗಳು ಈ ಸಂಚಿಕೆಯಲ್ಲಿ ಅಡಕವಾಗಿವೆ.

**ಹ್ಯಾಪಿ ರೀಡಿಂಗ್.**

# ಹೈಸ್ಕೂಲ್ ದಿನಗಳು

**● ಶಿವು**

ವರ್ಣಾಶ್ರಮ ಧರ್ಮದೊಂದಿಗೆ ನನ್ನ ಪ್ರಥಮ ಸಮಾಗಮ ಹೈಸ್ಕೂಲಿನಲ್ಲಿ, ಅಂದಿನ ವಿದ್ಯಾರ್ಥಿ ವೃಂದದಲ್ಲಿ ನಾಲ್ಕು ಜಾತಿಗಳು. (1) ಮಹಾಕುಡುಮಿಗಳು 2) ಕವಿಗಳು 3) ಹಿಂದಿನ ಬೆಂಚಿನವರು ಮತ್ತು 4) ಇತರರು. ಅಧಿಕಾರ ಚಲಾವಣೆಯಲ್ಲಿ ಅಗ್ರ ಸ್ಥಾನ ಹಿಂದಿನ ಬೆಂಚಿನವರಿಗೆ. ಕವಿಗಳೆಲ್ಲಾ ಮಾತುಗಾರರು. ಮಹಾ ಕುಡುಮಿಗಳದ್ದೇ ಒಂದು ಬೇರೆ ಪಂಗಡ. ಇತರ ಪಾಮರರೊಡನೆ ಬೆರೆಯುತ್ತಿರಲಿಲ್ಲ. ಎಲ್ಲರಿಗೂ ಸೊಪ್ಪು ಹಾಕುವ ನಾವು ಸೈಲೆಂಟ್ ಮೆಜಾರಿಟಿ.

ಒಮ್ಮೆ ರೆಸಿಟೇಷನ್ ಸ್ಪರ್ಧೆ. ಮಹಾ ಕುಡುಮಿ ರಾಮ ಪ್ರಿಯ. `MEN! Who boast it is that ye, Sons of fathers bold & free..." ಎಂದು ಪ್ರಾರಂಭವಾಗುವ ಇಂಗ್ಲೀಷ್ ಕವನವೊಂದನ್ನು ಮೂರುದಿನಗಳಿಂದ ಹಗಲೂ ರಾತ್ರಿ ಬಾಯಿ ಪಾಠ ಮಾಡಿಕೊಂಡಿದ್ದ. ಸ್ಪರ್ಧೆ ಮಧ್ಯಾಹ್ನ ಎರಡು ಘಂಟೆಗೆ ಮಹಡಿಯ ಮೇಲಿನ ಸಭಾಂಗಣದಲ್ಲಿ ಸೈಲಂಟ್ ಮೆಜಾರಿಟಿಯನ್ನು ದಬ್ಬಿ ತುಂಬಿದ್ದರು. ಸ್ಪರ್ಧೆಯಲ್ಲಿ ಬಹುಮಾನ ಪಡೆಯಬೇಕಾದರೆ ಜೋರಾಗಿ, ಭಾವಪೂರ್ಣತೆಯಿಂದ ಹೇಳಿದರೆ ಮಾತ್ರ ಸಾಧ್ಯ ಅಂತ ರಾಮ ಪ್ರಿಯನಿಗೆ ಯಾರೋ ಊದಿ ಬಿಟ್ಟಿದ್ದರು. ಅಂದು ಅವನದ್ದೇ ಮೊದಲ ರೆಸಿಟೇಶನ್. ಹಾಲಿನಲ್ಲಿ ಹುಡುಗರ ಗಿಜಿಗಿಜಿ. ಒಮ್ಮೆಲೇ ರಾಮಪ್ರಿಯ ವೇದಿಕೆಯ ಮೇಲಕ್ಕೆ ಓಡಿ ಬಂದ. ಆವೇಶ ಬಂದವನಂತೆ `MEN' ಅಂತ ಸೂರು ಕಿತ್ತು ಹೋಗುವ ಹಾಗೆ ಕೂಗಿದ. ಥಟ್ಟನೆ ಸ್ವಿಚ್ ಆರಿಸಿದಂತೆ ಗಿಜಿಗಿಜಿ ನಿಂತಿತು. ರಾಮಪ್ರಿಯನ ಎಲ್ಲ ಶಕ್ತಿಯೂ ಮೊದಲ ಸಂಬೋಧನೆಯಲ್ಲೇ ಕರಗಿ ಹೋಯಿತೋ? ಏನೋ? ಅವನ ಬಾಯಿಂದ ಮುಂದಿನ ಪದಗಳು ಹೊರಹೊಮ್ಮಲೇ ಇಲ್ಲ. ಜ್ಞಾಪಿಸಿಕೊಳ್ಳಲು ಮಾಡಿದ ಯತ್ನವೆಲ್ಲಾ ವ್ಯರ್ಥ. ಪುನಃ ಮೊದಲಿನಿಂದ ಹೇಳಿದರೆ ಜ್ಞಾಪಕ ಬರಬಹುದೆಂಬ ಆಸೆಯಿಂದ ಮತ್ತೊಮ್ಮೆ `MEN' ಎಂದು ಕೂಗಿದ. ಆದರೂ ಆ ಕೂಗಿನಲ್ಲಿ ಹಿಂದಿನ ಆವೇಶವಿರಲಿಲ್ಲ. ಸಭೆಯಲ್ಲಿ ನೀರವತೆ. ಅಲ್ಲಿದ್ದ ವಿ ಆರ್ ಡಿ ಮೇಷ್ಟರು, ಕನಿಕರದಿಂದ `who boast' ಅಂತ ಪ್ರಾಂಪ್ಟ್ ಮಾಡಿದರು. ಅಷ್ಟು ಹೊತ್ತಿಗಾಗಲೇ ರಾಮಪ್ರಿಯನ ಉತ್ಸಾಹವೆಲ್ಲಾ ತಣ್ಣಗಾಗಿದ್ದರಿಂದ, ಕವನ ಮುಗಿಸದೇ ವೇದಿಕೆ ಇಳಿದು ಬಂದ. ಮಹಾ ಕುಡುಮಿಗೆ ಆದ ತೇಜೋವಧೆ ಕಂಡು ನಮಗೆಲ್ಲಾ ಖುಷಿಯೋ ಖುಷಿ. ನನ್ನ ಸಹಪಾಠಿ ಚೆಲುವ ಮಾತ್ರ ಅವತ್ತೆಲ್ಲಾ "ಅವನ್ಯಾಕಂಗ್ ಕೂಗ್ದ" ಅಂತ ಕೇಳ್ತಾನೇ ಇದ್ದ.

ಬಂಗಾರ ಸ್ವಾಮಿ ಕವಿ. ಒಮ್ಮೆ ಮಧ್ಯಾಹ್ನ ಸ್ಕೂಲಿನ ಕಾಂಪೌಂಡ್ ಹೊರಗೆ ಸ್ವಲ್ಪ ದೂರದಲ್ಲಿ ಇದ್ದ ಹೋಟಲಿನ ಮುಂದೆ ನಾವೆಲ್ಲಾ ಮುಖ ಒಣಗಿಸುತ್ತಾ ನಿಂತಿದ್ದೆವು. ಕಾರಣ, ಹೋಟಲಿನ ರೇಡಿಯೋದಿಂದ ಹೊರ ಹೊಮ್ಮುತ್ತಿದ್ದ ಕ್ರಿಕೆಟ್ ಕಾಮೆಂಟ್ರಿ. ಅಧಿಕಾರಿ, ಫಡ್ಕರ್, ಮಂಕಡ್‌ಗಳ ಕಾಲ. ಅರ್ಥವಾಗಲಿ ಬಿಡಲಿ, ಕಾಮೆಂಟ್ರಿ ಕೇಳೋರ ಗುಂಪಿನಲ್ಲಿ ನಿಲ್ಲೋದೆ ಒಂದು ಹೆಗ್ಗಳಿಕೆ. ಯಾರಾದ್ರೂ ದೊಡ್ಡೋರು ಅಲ್ಲಿ ನಿಂತ್ರೆ ಅವರ್ನ ಮೆತ್ಗೆ ಸ್ಕೋರೆಷ್ಟ್ರಿ? ಅಂತ ಕೇಳಿ ತಿಳಿದು ನಮ್ಮ ಕ್ರಿಕೆಟ್ ಕುತೂಹಲ ತಣಿಯಬೇಕಾಗಿತ್ತು. ಅಂದು ಮಧ್ಯಾಹ್ನ ನಿಂತಿದ್ದ ಗುಂಪಿನಲ್ಲಿ ಬಂಗಾರಸ್ವಾಮಿಯೂ ಇದ್ದ. ಸ್ಟೇಷನ್ ಬದಲಿಸಿದ್ದರಿಂದಲೋ ಏನೋ ರೇಡಿಯೋದಿಂದ ಕಾಮೆಂಟ್ರಿ ಬದಲು

“ಓ,ಓ,ಓ,ಓ ... ವಸಂತ ಮಾಸ ಓಡಿ ಬಂದಿದೆ.......ಅಂತ ಜನಪ್ರಿಯ ಹಾಡೊಂದು ತೇಲಿ ಬಂತು. ಬಂಗಾರಸ್ವಾಮಿ ಒಮ್ಮೆಲೆ ನನ್ನನ್ನು ಗುಂಪಿನ ಗೊಂಚಲಿನಿಂದ ಬಿಡಿಸಿ ದೂರಕ್ಕೆ ಎಳೆದುಕೊಂಡು ಹೋದ. ಎಳೆದ ರಭಸವನ್ನು ನೋಡಿಯೇ ನನಗೆ ಸ್ವಲ್ಪ ಗಾಭರಿ ಆಯಿತು. “ಬಿಟ್ಬಿಡೋ .. ಅಂತ ಅಂಗಲಾಚಿದೆ. ಅವ “ಓಓಓಓ..... ಸ್ವತಂತ್ರ ಮಾತೆ.... ಓಡಿ ಬನ್ನಿರಿ!.... ” ಅಂದು “ಹೇಗಿದೆ ಕವನ?” ಅಂತ ಕೇಳಿದ. ‘ಚೆನ್ನಾಗಿದೆ’ ಅಂದು ಕ್ಲಾಸಿಗೆ ಓಡಿದೆ ಅನ್ನಿ.

ಇನ್ನೊಬ್ಬ ಚೂಟಿ ಕವಿ ಸಂತಾನಂ. ಕೆಮಿಸ್ಟ್ರಿ ಪ್ರಾಕ್ಟಿಕಲ್ ಹಾಲಿನಲ್ಲಿ ಇವ್ನು ಒಮ್ಮೆ ದರ್ಬಾರು ನಡೆಸಿದ್ದ. ಅಂದು ಕೆಮಿಸ್ಟ್ರಿ ಮೇಷ್ಟ್ರು ಬಿ.ಟಿ.ಕೆ. (ಬಿ.ಟಿ. ಕೃಷ್ಣಮಾಚಾರ್ – ಅಣುಬಾಂಬ್ ಖ್ಯಾತಿ!) ಬಂದಿರಲಿಲ್ಲ. ಮಾನಿಟರ್ ರಾಮಪ್ರಿಯ ಸಹಾ ರಜಾ. ನಾವೆಲ್ಲಾ ಸಂತಾನಂ ಸುತ್ತ. ಮೇಷ್ಟ್ರುಗಳನ್ನೆಲ್ಲ ಅವರ ಇನಿಷಿಯಲ್‌ನಿಂದ ಕರೆಯೋದು ಅಂದಿನ ಪರಿಪಾಠ. ಬಿ.ಟಿ.ಕೆ, ಎನ್.ಎನ್ (ಎನ್. ನಾಗರಾಜ್) ಸಿ.ಕೆ.ಎಸ್. (ಸಿ.ಕೆ. ಶೇಷಾದ್ರಿ) ಎಸ್. ಎನ್. (ಎಸ್. ನಾರಾಯಣ ರಾವ್), ಬಿ.ಎಸ್.ಎನ್. (ಬಿ.ಎಸ್. ನರಸಿಂಹನ್), ಕೆ.ಕೆ. (ಕೆ. ಕೃಷ್ಣ ರಾವ್) ಇವರೆಲ್ಲಾ ನಮ್ಮ ಗುರುಸಮೂಹ.

ನಮ್ಮ ಮಾತುಕತೆ ಮೇಷ್ಟ್ರುಗಳ ಕಡೆ ಹೊರಳಿತು. ಯಾರೋ ಬಿ.ಟಿ.ಕೆ ಒಂದು ವಾರ ಬರೋಲ್ಲವಂತೆ ಅಂದರು. ಸಂತಾನಂ ‘ಬಿ.ಟಿ.ಕೆ ಅಂದ್ರೆ ಏನು ಗೊತ್ತೇನ್ರೊ?’ ಅಂತ ಕೇಳಿದ. ನಾವೆಲ್ಲಾ ಒಕ್ಕೊರಲಿನಿಂದ ‘ಇಲ್ಲ’ ಅಂದೆವು. ಸಂತಾನಂ ‘ಬೋಳು ತಲೆ ಕುಳ್ಳ’ ಅಂತ ಹೇಳಿ ಜೋರಾಗಿ ನಕ್ಕ. ಎಲ್ಲರಿಗೂ ಖುಷಿ. ಬಿರುದು ಅನ್ವರ್ಥವಾಗಿದ್ದು ಹೆಚ್ಚಿನ ಸಂತಸ ತಂದಿತ್ತು.

‘ವಿ.ಆರ್.ಡಿ. ಅಂದ್ರೇನೋ!’ ಇನ್ನೊಂದು ಧ್ವನಿ.

‘ವದ್ದರೆ ರಗಳೆ ಮಾಡೋ ದೊಣ್ಣೆ!’ ಸಂತಾನಂ ಒಳ್ಳೆ ಫಾರಂನಲ್ಲಿದ್ದ.

‘ಎನ್.ಎನ್. ‘ನ್ಯಾಯವಿಲ್ಲದ ನಾಯಿ’’ (ನಗು)

‘ಎಸ್. ಎನ್. ‘ಸ್ನೇಹವಿಲ್ಲದ ನಾಯಿ’’ (ಯಾಕೋ ನಾಯಿ ಥೀಮ್ ರಿಪೀಟ್ ಆಗ್ತಾ ಇತ್ತು)

ಬಿ.ಎಸ್.ಎನ್. ‘ಬಿಳೀ ಸುಳ್ಳು ಹೇಳೋ ನೀಚ’

ಬಿಲ್ಲಿನಿಂದ ಹೊರಟ ಬಾಣಗಳಂತೆ ಸಂತಾನಂನ ಉತ್ತರಗಳು ಪಟಪಟನೆ ಉದುರುತ್ತಿದ್ದವು.

‘ಕೆ.ಕೆ.’ ಕೋಳಿ ಕಳ್ಳ ಅಥವಾ ಕರೀ ಕುಳ್ಳ – ಯಾವುದು ಬೇಕಾದ್ರೂ ಆರಿಸಿಕೊಳ್ಳಿ’ ಈ ಉತ್ತರಕ್ಕೆ ಯಾವ ವಿಧವಾದ ಪ್ರತಿಕ್ರಿಯೆ ಬರಲಿಲ್ಲ. ಏಕೆಂದರೆ ಸಾಕ್ಷಾತ್ ಕೆ.ಕೆ. ಅಲ್ಲಿ ಪ್ರತ್ಯಕ್ಷವಾಗಿದ್ದರು. ‘ಕೆ.ಕೆ.?’ ಅಂತ ಕೇಳ್ದೋರು ಅವರೇ. ಸಂತಾನಂ ಅದೃಷ್ಟಕ್ಕೆ ಅವರು ಹಾಸ್ಯಪ್ರಿಯರಾಗಿದ್ದರಿಂದ ಅನಾಹುತವೇನೂ ಆಗಲಿಲ್ಲ.

ನಮ್ಮ ಸ್ಕೂಲಿನಲ್ಲಿ ತಿಂಗಳ ಕೊನೆಯ ಶುಕ್ರವಾರದಂದು ಮಧ್ಯಾಹ್ನ ಮೂರು ಘಂಟೆಗೆ ಕ್ಲಾಸೆಲ್ಲಾ ಲೆಟ್–ಆಫ್. ಆದ್ರೆ ಮನೆಗೆ ಹೋಗೋ ಹಾಗಿಲ್ಲ. ಮೂರರಿಂದ ನಾಲ್ಕರವರೆಗೂ ಧರ್ಮ ಗುರುಗಳೊಬ್ಬರಿಂದ, ವಿವಿಧ ಧರ್ಮಗಳ ಬಗ್ಗೆ ಉಪನ್ಯಾಸ. ಬೆಳಗಿನಿಂದ ಪಾಠ ಕೇಳಿ ದಣಿದಿದ್ದ ಹುಡುಗರಿಗೆ, ಸಂಜೆ ಆಟಕ್ಕೆ ಹೋಗುವ

ಆತುರ. ಧರ್ಮ ಶ್ರದ್ಧೆ ಎಲ್ಲಿಂದ ಬರಬೇಕು? ಹೀಗಾಗಿ ಈ ಉಪನ್ಯಾಸಗಳಿಗೆ ಮೇಷ್ಟರುಗಳನ್ನು ಬಿಟ್ಟರೆ ಬೇರೆ ಸಭಿಕರೇ ಇರುತ್ತಿರಲಿಲ್ಲ. ನಮ್ಮ ಹೆಡ್ ಮಾಸ್ಟರ್ ಈ ಖಾಲಿ ಸಭಾಂಗಣಗಳ ಬಗ್ಗೆ ಒಮ್ಮೆ ತೀವ್ರವಾಗಿ ಟೀಕಿಸಿದ್ದರಂತೆ.


ಆ ಶುಕ್ರವಾರ ಭಗವಾನ್ ಗೌತಮ ಬುದ್ಧನ ಬಗ್ಗೆ ಭೌದ್ಧ ಗುರುಗಳೊಬ್ಬರಿಂದ ಉಪನ್ಯಾಸ. ವಿಷಯ 'ಅಹಿಂಸೆ'. ಮೂರು ಘಂಟೆಗೆ ಬೆಲ್ಲಾದ ತಕ್ಷಣ ನಾವೆಲ್ಲಾ ಮನೆಗಳಿಗೆ ಓಡಲು ಉದ್ಯುಕ್ತರಾದೆವು. ನಮ್ಮ ಕ್ಲಾಸ್ ಮಹಡಿಯ ಮೇಲಿದ್ದುದರಿಂದ ಒಬ್ಬರನ್ನೊಬ್ಬರು ನೂಕುತ್ತಾ ಮೆಟ್ಟಲಿಳಿಯುತ್ತಿದ್ದ ಹುಡುಗ ಸ್ತೋಮದ ಹಿಂದೆ ನಾನಿದ್ದೆ. ಇನ್ನೂ ಮೇಲೇ ಇದ್ದುದರಿಂದ ಕೆಳಗೆ ನಡೆಯುತ್ತಿದ್ದ ವಿದ್ಯಮಾನಗಳೆಲ್ಲದರ ವಿಹಂಗಮ ನೋಟ ನನಗೆ ಲಭ್ಯವಾಗಿತ್ತು.

ಶಾಲೆಯ ಕಾರಿಡಾರಿನಿಂದ ಬಲಕ್ಕೆ ತಿರುಗಿದರೆ ಶಾಲೆಯ ಹೊರ ಬಾಗಿಲು. ಬಾಗಿಲಿನ ಬಳಿ ಎಸ್.ಎನ್. ಮತ್ತು ವಿ.ಆರ್.ಡಿ. ಒಂದೊಂದು ಬೆತ್ತ ಹಿಡಿದು ಯಮದೂತರಂತೆ ನಿಂತಿದ್ದರು. ಓಡುತ್ತಾ ಮೊದಲು ಬಾಗಿಲನ್ನು ಸೇರಿದ ಹುಡುಗ ಶಾಂತರಾಜು. ಈ ಗುರುದ್ವಯ ಉದ್ದೇಶಗಳ ಬಗ್ಗೆ ದಿವ್ಯ ಅಜ್ಞಾನದಿಂದ ಬಾಗಿಲಿನಾಚೆ ಹೊರಟ. 'ರಪ್' ಎಂದು ಬೆನ್ನ ಮೇಲೆ ಬಿದ್ದ ಏಟಿನಿಂದ ಚೇತರಿಸಿಕೊಳ್ಳುತ್ತಾ ಸ್ವಲ್ಪ ದೂರದಲ್ಲಿ ನಿಂತಿದ್ದ ಡ್ರಿಲ್ ಮೇಷ್ಟರ ಆಜ್ಞೆಯಂತೆ ಶಾಲೆಯನ್ನು ಬಳಸಿ ಮುಂಭಾಗದಲ್ಲಿನ ಸಭಾಂಗಣಕ್ಕೆ ಹಿಂತಿರುಗಿ ಬಂದ. ಹೊರ ಬಾಗಿಲು ತಿರುವಿನಲ್ಲಿದ್ದುದರಿಂದ ಹಿಂದೆ ನುಗ್ಗುತ್ತಿದ್ದ ಹುಡುಗರು ಮುಂದೆ ಕಾದಿದ್ದ ಆಪತ್ತಿನ ಅರಿವಿಲ್ಲದೆಯೇ ಮುನ್ನುಗ್ಗುತ್ತಿದ್ದರು.

ಅತ್ತ ಶಾಲೆಯ ಮುಂದಿನ ಸಭಾಂಗಣದಲ್ಲಿ ಶಾಕ್ಯ ಮುನಿ ಉಪದೇಶ ಮಾಡಿದ ಅಹಿಂಸೆಯ ತತ್ವಗಳ ನಿರರ್ಗಳ ಪ್ರತಿಪಾದನೆ. ಅಂದಿನ ಹೊರ ಬಾಗಿಲಿನಲ್ಲಿ ಒನಕೆ ಓಬವ್ವನ ಕಿಂಡಿಯ ಕಡೆ ನುಗ್ಗುತ್ತಿದ್ದ ಯೋಧರಂತೆ ಶಾಲಾ ಹುಡುಗರ ನುಗ್ಗಾಟ – ಬಾಗಿಲಿನಾಚೆ ಓಬಣ್ಣಗಳಿಂದ ಏಟುಗಳ ಸುರಿಮಳೆ.

ನೆನಪಿನ ದೋಣಿ, ಸರಿದು ಹೋದ ಅನೇಕ ದಶಕಗಳ ಮಬ್ಬಿನಲ್ಲಿ ಸಾಗಿದ್ದರೂ, ಅಂದು ಕಂಡ ಪಕ್ಷಿ ನೋಟ ಇಂದಿಗೂ ಹಸಿರಾಗಿದೆ.

■



# ಮೇಷ್ಟ್ರು ಕಂಡ ಮೇಷ್ಟ್ರು

(ಬೆಳಗೆರೆ ಕೃಷ್ಣಶಾಸ್ತ್ರಿಗಳು ಅವರ ಗುರುಗಳನ್ನು ಕಂಡ ರೀತಿ )

ಸಂಗ್ರಹ● **ಬೇಲೂರು ರಾಮಮೂರ್ತಿ**

ಚಳ್ಳಕೆರೆ ತಾಲ್ಲೂಕು ಹೆಗ್ಗೆರೆಯಲ್ಲಿ ನಾನು ಉಪಾಧ್ಯಾಯ ವೃತ್ತಿಗಾಗಿ ಸೇರಿಕೊಂಡೆ. ಆಗ ನನಗೆ ವಯಸ್ಸು 25, ಆ ದಿನ ಬೆಳಗ್ಗೆಯೇ ನಾನು ಸ್ಕೂಲಿಗೆ ಹೋಗಿ ನನಗೆ ಬಂದಿದ್ದ ಆರ್ಡರ್ ಕಾಪಿಯನ್ನು ಹೆಡ್ ಮಾಸ್ಟರ್ ಮುಂದಿಟ್ಟೆ. ಅವರು ಅದನ್ನು ಓದಿ ಆಗಲಿ ಡ್ಯೂಟಿ ರಿಪೋರ್ಟ್ ಬರೆದುಕೊಡಿ ಎಂದು ಒಂದು ಪೇಪರ್ ಪೆನ್ನನ್ನು ನನ್ನ ಮುಂದಿಟ್ಟರು. ನಾನು ನಿಂತೇ ಇಂಗ್ಲಿಷಿನಲ್ಲಿ ಡ್ಯೂಟಿ ರಿಪೋರ್ಟ್ ಬರೆದು ಕೊಟ್ಟೆ ( ಇಂಗ್ಲಿಷ್ ಟೀಚರ್ ಆದ್ದರಿಂದ ) ಆದರೆ ಆ ಹೆಡ್ ಮಾಸ್ಟರ್‌ಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಅವರ ಹೆಸರು ಸಿದ್ಧಯ್ಯ. ಆ ಲೆಟರ್ ನೋಡಿ ತಲೆ ಅಲ್ಲಾಡಿಸಿ ನನ್ನ ಕಡೆ ತಿರುಗಿ ಆಹಾ, ಬೇರೆಯವರ ನೆರವಿಲ್ಲದೆಯೇ ಡ್ಯೂಟಿ ರಿಪೋರ್ಟ್ ಬರೆಯಲಿಕ್ಕೆ ಬರುತ್ತೆ ಎಂದಾಯ್ತು ಅಂದರು. ಅವರ ಈ ತೀರ್ಮಾನದಲ್ಲಿ ವ್ಯಕ್ತಿಯ ಯೋಗ್ಯತೆಯನ್ನು ಕಟ್ಟುವುದು ಕಾಣುತ್ತಿತ್ತು. ಯಾರೇ ಆಗಿರಲಿ ಅವರ ವರ್ತನೆಯಲ್ಲಿಯೇ ಆ ಯೋಗ್ಯತೆಯನ್ನು ಗುರುತಿಸುವುದು ಸಿದ್ದಯ್ಯನವರ ವ್ಯಕ್ತಿತ್ವದಲ್ಲಿತ್ತು. ಅವರು ಮುಂದುವರಿದು ಸಂಬಳ ಎಷ್ಟು ಗೊತ್ತೋ ಎಂದು ಕೇಳಿದರು. ಸುಮ್ಮನಿದ್ದೆ. ತಿಂಗಳಿಗೆ ಇಪ್ಪತ್ತು ರೂಪಾಯಿ ಎಂದರು. ಆಗಲೂ ಸುಮ್ಮನಿದ್ದೆ. ಸುಮಾರು ಐವತ್ತು ಅಡಿ ಅಗಲ, ಐವತ್ತು ಅಡಿ ಉದ್ದದ ಮಾಳಿಗೆಯಂತಿರುವ ದೊಡ್ಡ ಹಾಲು. ಅದೇ ಕ್ಲಾಸು ರೂಮು. ಅದನ್ನು ತೋರಿಸಿ ನೋಡಿ ಆ ಮೂಲೆಯಲ್ಲಿ ಕುಳಿತು ಪಾಠ ಮಾಡಬೇಕು (ಎಂಟು ಕ್ಲಾಸುಗಳು ಆರು ಜನ ಟೀಚರ್ಸ್, ಅವರಲ್ಲಿ ನಾನೂ ಒಬ್ಬ) ನಂತರ ಅವರು ಇಪ್ಪತ್ತು ರೂಪಾಯಿ ಕೂಳು, ಪಾಠ ಮಾಡೋ ಬಾಳು ಇವೆರಡೂ ಒಪ್ಪಿಗೆಯೋ ಅಂತ ಕೇಳಿದರು. ಈ ಕೂಳು ಈ ಬಾಳು ಒಪ್ಪಿಗೆ ಇದ್ದರೆ ಕ್ಲಾಸ್ ಕೊಡ್ತೀನಿ. ಇಲ್ಲದಿದ್ದರೆ ನಿಮ್ಮ ಡ್ಯೂಟಿ ರಿಪೋರ್ಟ್ ತಗೊಂಡು ಹೋಗಬಹುದು ಅಂದು ನಾನು ಬರೆದುಕೊಟ್ಟಿರುವ ಡ್ಯೂಟಿ ರಿಪೋರ್ಟ್ ಮತ್ತು ಆರ್ಡರ್ ಕಾಪಿಯನ್ನು ವಾಪಸ್ ಕೊಟ್ಟರು. ಒಬ್ಬ ಮೇಲಧಿಕಾರಿ ಕೊಟ್ಟ ಆದೇಶವನ್ನು ಹಿಂದಿರುಗಿಸುವಂತಹ ಸಿದ್ದಯ್ಯನವರ ದಿಟ್ಟತನ ನನಗೆ ಆಗಲೇ ಅರಿವಾಯಿತು. ಆ ವೇಳೆಗೆ ಅವರಿಗೆ ಸುಮಾರು 20 ವರ್ಷ ಸರ್ವಿಸ್ ಆಗಿತ್ತು. ಇಲಾಖೆಯಲ್ಲಿ ಒಳ್ಳೆಯ ಹೆಸರೂ ಇತ್ತು. ಕ್ಲೋಸ್ ಕಾಲರ್ ಕೋಟು ಕಚ್ಚೆ ಪಂಚೆ, ಹಳ್ಳಿ ಮೆಟ್ಟು, ಮೈಸೂರು ಪೇಟ ( ಜರಿ ಇಲ್ಲದ್ದು ) ಎರಡೂ ಕಡೆ ಭುಜದ ಮೇಲೆ ಇಳಿಬಿಟ್ಟಿದ್ದ ವಸ್ತ್ರ – ಶಲ್ಯ.

ಪ್ರತಿದಿನ ಸಂಜೆ ಸಿದ್ದಯ್ಯನವರು ಆ ಹಳ್ಳಿಯಿಂದ ಅರ್ಧ ಮೈಲು ವಾಕಿಂಗ್ ಕರೆದುಕೊಂಡು ಹೋಗುತ್ತಿದ್ದರು. ಅಲ್ಲೊಂದು ಮರದ ಕೆಳಗೆ ಕೂತು ನಾವು ಕ್ಲಾಸ್ ರೂಮಿನಲ್ಲಿ ಆರೂ ಜನರ ಪಾಠದ ಕ್ರಮಗಳನ್ನು ಗಮನಿಸುತ್ತಾ, ತಾವೂ ಪಾಠ ಮಾಡುತ್ತಾ, ನಾವು ಮಾಡಿದ ಪಾಠದ ತಪ್ಪು ಒಪ್ಪುಗಳ ಕುರಿತು ಸಿದ್ದಯ್ಯನವರು ವಿವರಿಸುತ್ತಿದ್ದರು ಮತ್ತು ತಿದ್ದುತ್ತಿದ್ದರು. ಒಂದು ದಿನ ಹೀಗಾಯ್ತು. ದ್ರೌಪದಿ ವಸ್ತ್ರಾಪಹರಣ ಪ್ರಸಂಗವನ್ನು ನಾನು ಆ ದಿನ ಗದುಗಿನ ಭಾರತದಲ್ಲಿ ಪಾಠ ಮಾಡುತ್ತಾ ಒಬ್ಬ ಹುಡುಗನನ್ನು ದ್ರೌಪದಿಯ ವಸ್ತ್ರವನ್ನು ಸೆಳೆದವನು ಯಾರು ಎಂದು ಕೇಳಿದ್ದೇನೆ. ಆತ ದುಶ್ಶಾಸ ಸರ್ ಎಂದಿದ್ದಾನೆ. ನಾನು ಸರಿ ಎಂದು ಮುಂದೆ ಹೋಗಿದ್ದೇನೆ.

ಸಂಜೆ ಆ ಮರದ ಕೆಳಗೆ ಕುಳಿತಾಗ ಸಿದ್ದಯ್ಯನವರು ಶಾಸ್ತ್ರಿಗಳೇ ದ್ರೌಪದಿ ವಸ್ತ್ರಾಪಹರಣ ಮಾಡಿದವರು ಯಾರು ಅಂತ ಕೇಳಿದರು. ನಾನು ದುಶ್ಯಾಸನ ಎಂದೆ. ಹೌದು ದುಶ್ಯಾಸನ. ದುಶ್ಯಾಸನ ಎಂದು ಗಟ್ಟಿಯಾಗಿ ನಾಲ್ಕು ಬಾರಿ ಹೇಳಿದೆ. ಬೆಳಗ್ಗೆ ನೀವು ಆ ಹುಡುಗನನ್ನು ಕೇಳಿದಾಗ ಆತ ಏನು ಹೇಳಿದ ಎಂದು ಕೇಳಿದರು. ಅದನ್ನೇ ಹೇಳಿದ ಸರ್ ಎಂದೆ. ಅದಕ್ಕೆ ಅವರು ಇಲ್ಲ ನೀವು ಸರಿಯಾಗಿ ಗಮನಿಸಿಲ್ಲ. ಅವನು ದುಶ್ಯಾಸ ಎಂದ. ನೀವು ಸರಿ ಎಂದು ಮುಂದೆ ಹೋದಿರಿ. ಆದರೆ ಅವನು ಉತ್ತರ ಸರಿ ಇತ್ತೋ ದುಶ್ವಾಸ ಎನ್ನುವ ಹೆಸರು ಸರಿಯೋ. ಈಗ ನೀವು ಹೇಳುತ್ತಿದ್ದೀರಿ ದುಶ್ಯಾಸನ ಎಂದು. ಆತ ದುಶ್ಯಾಸ ಹೇಗಾದ. ನೀವು ವಿಚಾರ ತಿಳಿಸುವುದಷ್ಟೇ ಅಲ್ಲ ಭಾಷೆಯನ್ನೂ ಕಲಿಸುತ್ತಿದ್ದೀರಿ. ವಿದ್ಯಾರ್ಥಿಗಳಿಗೆ ಮೇಷ್ಟ್ರು ಎಂದರೆ ಪರಬ್ರಹ್ಮನಿಗಿಂತ ದೊಡ್ಡವನು. ಈಗ ಅವನಿಗೆ ದುಶ್ಯಾಸ ಎಂದು ಹೇಳಿಕೊಟ್ಟು ನಾಳೆ ಯಾರಾದರೂ ದುಶ್ಯಾಸನ ಎಂದರೆ ಇಲ್ಲ ಕಣ್ರೀ ನಮ್ಮ ಮೇಷ್ಟ್ರು ಹೇಳಿಕೊಟ್ಟಿರುವುದೇ ಹೀಗೆ, ನಮ್ಮ ಮೇಷ್ಟ್ರಿಗಿಂತ ನಿನಗೆ ಗೊತ್ತೇ ಎನ್ನುತ್ತಾನೆ. ಯಾಕೆಂದರೆ ಅವನ ಪಾಲಿಗೆ ಮೇಷ್ಟ್ರು ಎಂದರೆ ಸರ್ವಜ್ಞ, ಆತನಿಗೆ ಗೊತ್ತಿಲ್ಲ ಎನ್ನುವ ವಿಚಾರವೇ ಇಲ್ಲ. ಆತ ಹೇಳಿದ್ದೇ ಸರಿ. ಹೀಗಿರುವಾಗ ಹುಡುಗನನ್ನು ತಿದ್ದಿದೆಲ್ಲಿ. ಹೀಗೆ ಹೇಳುವುದರ ಮೂಲಕ ನನ್ನ ಜೀವನದುದ್ದಕ್ಕೂ ವಿಚಾರವನ್ನು ಭಾಷೆಯನ್ನು ಗಮನಿಸುವಂಥಾದ್ದು ಸಿದ್ದಯ್ಯನವರ ಮೂಲಕ ಬಂತು. ಇಂಥಾ ಅನೇಕ ನಿದರ್ಶನಗಳು ಅವರಿಂದ ಬರುತ್ತಿತ್ತು.

ಸಿದ್ದಯ್ಯನವರು ಉಪಾಧ್ಯಾಯನಾಗಿರುವವನು ಬಡವನಾಗಿರಬೇಕು ಕಣಯ್ಯ. ಐಶ್ವರ್ಯ ಬಂದರೆ ಯಾರಿಗೆ ಕೊಡಲಿ ? ಇದರಿಂದ ಎಷ್ಟು ಬಡ್ಡಿ ಬರುತ್ತೆ ? ಮತ್ತೆಲ್ಲಿ ತೊಡಗಿಸಲಿ ? ಅದರಿಂದೇನು ಬರುತ್ತೆ ? ಹೀಗೆ ಯೋಚಿಸುವುದರಿಂದ ಶಾಲೆಯ ಕಡೆಗೆ ಗಮನ ಕೊಡದೇ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತೆ. ಉಪಾಧ್ಯಾಯನಾದವನು ತದೇಕವೃತ್ತಿ ಎನ್ನುವಂತೆ ಕೆಲಸ ಮಾಡಬೇಕು ಎನ್ನುವ ಮಾತುಗಳನ್ನೂ ಹೇಳುತ್ತಿದ್ದರು. ವಿಶೇಷವೆಂದರೆ ಸಿದ್ದಯ್ಯನವರು ಹಾಗೇ ಇದ್ದರು.

ಮುಂದೆ ಸಿದ್ದಯ್ಯನವರಿಗೆ ಗೋಪನಹಳ್ಳಿಗೆ ವರ್ಗವಾಯಿತು. ಆ ವರ್ಷ ಅವರ ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಫೇಲು. ನನ್ನ ಶಾಲೆಯಲ್ಲಿ ಎಲ್ಲರೂ ಪಾಸು. ಇನ್ಸ್‌ಪೆಕ್ಟರು ಚಂದ್ರಶೇಖರಯ್ಯ ಇದ್ಯಾಕ್ರೀ ಅಂತ ಕೇಳಿದ್ದಕ್ಕೆ ಅವೆರಡೂ ಹುಡುಗರು ತೀರಾ ಕಳಪೆಯಾಗಿದ್ದರು. ಪರೀಕ್ಷೆಗೆ ಕಟ್ಟಿಸುವುದು ಬೇಡ ಎಂದೆ. ಆದರೆ ಆ ಗೌಡ ಹಠ ಹಿಡಿದ. ಕಡೆಗೆ ಹೀಗಾಯಿತು ಅಂದರು. ಸಿದ್ದಯ್ಯನವರು ಇನ್ಸ್‌ಪೆಕ್ಟರ್ ಬಳಿ ಮಾತಾಡುವಾಗ ನಾವು ಹೊರಗಡೆಯೇ ನಿಂತಿದ್ದೆವು. ನನ್ನ ಶಾಲೆಯಲ್ಲಿ ಎಲ್ಲರೂ ಪಾಸು ಅಂತ ಗೊತ್ತಾದ ಸಿದ್ದಯ್ಯ ಅಲ್ಲಿದ್ದ ಒಬ್ಬ ಜವಾನನನ್ನು ಕರೆದು ಓಬಯ್ಯ ಹೊರಗಡೆ ಕೃಷ್ಣಶಾಸ್ತ್ರಿ ಅಂತ ಬದಲೀ ಮೇಷ್ಟ್ರು ಇದಾರೆ ಅವರನ್ನು ಕರಿ ಅಂದರು. ನಾನು ಒಳಕ್ಕೆ ಹೋದೆ. ತಕ್ಷಣ ಸಿದ್ದಯ್ಯನವರು ನನ್ನ ಜುಟ್ಟು ಹಿಡಿದು ನನ್ನನ್ನು ಬಗ್ಗಿಸಿ ಏನಾಗುತ್ತಿದೆ ಎಂದು ಅರಿವಾಗುವ ಮುಂಚೆ ನನ್ನ ಬೆನ್ನಿನ ಮೇಲೆ ದಭ ದಭ ಅಂತ ಮೂರ್‍ನಾಲ್ಕು ಸಾರಿ ಗುದ್ದಿದರು. ನಂತರ ನಿಂತ್ಕೊ ನೆಟ್ಗೆ. ನೆನ್ನೆ ಮೊನ್ನೆ ಬಂದಿದೀಯ ಇನ್ನೂ ಎರಡು ಕಾಲು ಊರಿಲ್ಲ. ಡಿಪಾರ್ಟ್‌ಮೆಂಟಲ್ಲಿ ( ಏಕೆಂದರೆ ಸಿದ್ದಯ್ಯನವರು ಇದ್ದ ಶಾಲೆಯಲ್ಲಿ ನಾನಿನ್ನೂ ಬದಲೀ ಮೇಷ್ಟ್ರು ಎನಿಸಿಕೊಂಡಿದ್ದೆ ) 22 ವರ್ಷ ಸರ್ವಿಸ್ ಆದವರ ಮೇಲೆ

ಹಾರ್ತೀಯಲ್ಲ. ನಿನ್ನಲ್ಲಿ ಎಲ್ಲಾ ಪಾಸಾಗಿವೆ. ನನ್ನಲ್ಲಿ ಎರಡು ಫೇಲಾಗಿವೆ ನನ್ನ ತಲೆ ಮೇಲೆ ಹಾರ್ತಿದೀಯಲ್ಲ ಎಂದು ಇನ್ಸ್‌ಪೆಕ್ಟರ್ ಕಡೆ ತಿರುಗಿ ಏನ್ ಮಾಡ್ಲಿ ಸರ್ ಇವರಿಗೆ ಅಂದರು. ಅವರು ನಕ್ಕು ಕಾಫಿ ಕೊಡಿಸಿಬಿಡಿ ಅಂದರು. ಸಿದ್ದಯ್ಯನವರೂ ನಕ್ಕು ಕಾಫಿ ಕೊಡಿಸಿದರೆ ಯಾರು ನೋಡ್ತಾರೆ ಸರ್, ನಾವು ನೋಡಬಹುದು, ನೀವು ನೋಡಬಹುದು, ಬಾರಯ್ಯಾ ಆ ಸರ್ಕಲ್‌ಗೆ ನಿನ್ನ ಕಾಲ ಕೆಳಗೆ ನುಸೀತೀನಿ. ಜನ ಎಲ್ಲಾ ನೋಡಲಿ. 20 ವರ್ಷ ಸರ್ವಿಸ್ ಆದ ಮೇಷ್ಟ್ರು ಬದಲಿ ಮೇಷ್ಟ್ರ ಕಾಲ ಕೆಳಗೆ ನುಸೀತಿದಾರೆ ಎಂಬುದು ಜನಕ್ಕೆ ಗೊತ್ತಾಗಲಿ ಎಂದರು. ಹೀಗನ್ನುವಾಗ ಸಿದ್ದಯ್ಯನವರಿಗೆ ಇದ್ದ ಅಭಿಮಾನ ಎಂಥದು ಎಂಬುದು ಜನಕ್ಕೆ ಗೊತ್ತಾಗುತ್ತದೆ ಎಂದರು. ಯಾರಾದರೂ ನಿಷ್ಠೆಯಿಂದ ಕೆಲಸ ಮಾಡಿದರೆ ಅವರಿಗೆ ಕೊಡಬೇಕಾದ ಗೌರವ ಯಾವ ತರದ್ದು ಎಂಬುದು ಸಿದ್ದಯ್ಯನವರಿಗೆ ಗೊತ್ತಿತ್ತು. ನಂತರ ನನಗೆ ಕೆಲಸ ಖಾಯಂ ಆಯ್ತು. ಮೇಷ್ಟ್ರ ಕೆಲಸ ಮಾಡಿದೆ ಜನ ಮೆಚ್ಚಿಕೊಂಡರು ಎನ್ನುವ ಮಾತು ಬೇರೆ. ಆದರೆ ಹಾಗೇನಾದರೂ ನಾನು ಉಪಾಧ್ಯಾಯನಾಗಿ ಒಂದಷ್ಟು ಒಳ್ಳೆಯ ಕೆಲಸ ಮಾಡಿದೀನಿ ಎಂದರೆ ಅದು ಸಿದ್ದಯ್ಯನವರ ಪ್ರೇರಣೆ. ಅವರು ಹಾಕಿಕೊಟ್ಟ ಬುನಾದಿ ಹಾಗಿತ್ತು ಎಂಬುದೇ ನನ್ನ ನಂಬಿಕೆ. ಈ ಹೊತ್ತಿಗೂ ಉಪಾಧ್ಯಾಯ ವೃತ್ತಿ ಎಂದರೆ ಸಿದ್ದಯ್ಯನವರು ಕಣ್ಣು ಮುಂದೆ ನಿಂತ ಹಾಗಾಗುತ್ತದೆ.

ನಾನು ಚಳ್ಳಕೆರೆಯಲ್ಲಿ ಅವರಿಗೆ ಸಿಕ್ಕಾಗಲೆಲ್ಲಾ ನನಗೆ ವಿವಿಧ ಬಗೆಯ ಸಿಹಿ ತಿಂಡಿಗಳನ್ನು ಕೊಡಿಸುತ್ತಿದ್ದರು. ಸರ್. ನೀವು ತಿನ್ನುವುದಿಲ್ಲ ನನಗ್ಯಾಕೆ ಇಷ್ಟೊಂದು ಕೊಡಿಸುತ್ತೀರ ಅಂತ ಕೇಳಿದರೆ ತಿನ್ನು ತಿನ್ನು ನೀನು ತಿಂದರೆ ನನಗೆ ಸಮಾಧಾನ ಎಂದರು. ಒಮ್ಮೆ ಅವರ ಮನೆಗೆ ಹೇಳಿಕಳಿಸಿ ಹೋಳಿಗೆ ಊಟ ಮಾಡಿಸಿದ್ದರು. ಯಥೇಚ್ಛವಾಗಿ ಬಡಿಸಲು ಹೇಳಿದರು. ಅವರ ಸೊಸೆ ಚಮಚದಲ್ಲಿ ತುಪ್ಪ ಬಡಿಸಲು ಬಂದಾಗ ಹಂಗಲ್ಲವ್ವ ಅವರು ತುಪ್ಪ ತಿಂದು ಬೆಳೆದವರು ಎಂದು ತುಪ್ಪದ ಬಟ್ಟಲನ್ನೇ ನನ್ನ ಎಲೆಗೆ ಸುರಿದರು. ನಾನು ಕಣ್ಣುಬಿಟ್ಟಾಗ ಅವರು ನೀನು ತಿನ್ನಯ್ಯ ಆಗ ನನಗೆ ತೃಪ್ತಿ ಆಗುತ್ತೆ ಅಂದರು.

ಇನ್ನೊಂದು ಸಾರಿ ನನಗೆ ಹೇಳಿಕಳಿಸಿ ಭಗವದ್ಗೀತೆಯ ಸಾರಾಂಶವನ್ನೆಲ್ಲಾ ಒಂದೇ ವಾಕ್ಯದಲ್ಲಿ ಹೇಳಬೇಕಂತೆ ದೊಡ್ಡ ಸಾಹೇಬರು ಕೇಳುತ್ತಿದ್ದಾರೆ ಅಂದರು. ಅದಕ್ಕೆ ನಾನು ಸರ್ ಭಗವದ್ಗೀತೆಯನ್ನು ಓದಿಕೊಂಡಿದ್ದೀನಿ ಆದರೆ ಒಂದೇ ವಾಕ್ಯದಲ್ಲಿ ಹೇಳೋದು ಕಷ್ಟವಾಗುತ್ತೆ ಅಂದೆ. ಅದೆಲ್ಲ ನನಗೆ ಗೊತ್ತಿಲ್ಲ ಹೇಳಲೇಬೇಕು ಎಂದರು. ನಾನು ಯಾವುದೇ ಕರ್ತವ್ಯವನ್ನು ನಿಷ್ಠೆಯಿಂದ ಅಹಂಕಾರವಿಲ್ಲದೇ ಮಾಡಬೇಕು ಎಂದೆ. ಅವರು ಹೌದಲ್ಲವೇ ಹಾಗಿದ್ದರೆ ಈಗ ನಿನಗೆ ಬಂದಿರುವ ರಾಜ್ಯ ಪ್ರಶಸ್ತಿಯನ್ನೂ ಅಹಂಕಾರವಿಲ್ಲದೇ ಸ್ವೀಕರಿಸು ಎಂದರು. ಆಗ ನನಗೆ ನಾನು ರಾಜ್ಯಪ್ರಶಸ್ತಿಯನ್ನು ತೆಗೆದುಕೊಳ್ಳಲು ಮುಜುಗರ ಪಟ್ಟಿದ್ದಕ್ಕಾಗಿ ಈ ಮಾತುಗಳು ಎನಿಸಿ ಅವರ ಮೇಲೆ ಇನ್ನಷ್ಟು ಅಭಿಮಾನ ಉಕ್ಕಿತು.

ಸಿದ್ದಯ್ಯನವರ ಮಾತುಗಳು:

ಉಪಾಧ್ಯಾಯ ವೃತ್ತಿ ಸಿಗಬೇಕಾದರೆ ಏಳೇಳು ಜನ್ಮಗಳ ಪುಣ್ಯ ಪಡೆದಿರಬೇಕು. ಉಪಾಧ್ಯಾಯನು ವಿದ್ಯಾರ್ಥಿಗಳಿಗೆ ಬೋಧಿಸುವುದೆಂದರೆ ಅದೊಂದು ಆಧ್ಯಾತ್ಮಿಕ ಕ್ರಿಯೆ.

ಗ್ರಂಥ ಋಣ – ಅಭಿನವ ಪ್ರಕಟಿಸಿರುವ ಬೆಳಗೆರೆ ಕೃಷ್ಣಶಾಸ್ತ್ರಿಗಳ ನೆನಪಿನ ಗ್ರಂಥ ಮರೆಯಾಲಾದೀತೇ ) ■

# ಮೇಷ್ಟ್ರ ವೃತ್ತಿಯ ಭಾಗ್ಯ

**● ಭುವನೇಶ್ವರಿ ಹೆಗಡೆ**

ನಾನು ಅರ್ಥಶಾಸ್ತ್ರದ ಎಂ.ಎ. ಡಿಗ್ರಿ ಹಿಡಿದು ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದಿಂದ ಹೊರಬಂದಾಗ ಅದಕ್ಕೆ ಲಗತ್ತಾಗಿರುವ ಉಪನ್ಯಾಸಕ ಹುದ್ದೆಗೆ ಎಲ್ಲಿಗೆ ಬೇಕಾದರೂ ಹೋಗಲು ಸಿದ್ಧಳಿದ್ದು ಅಷ್ಟ ದಿಕ್ಕುಗಳಿಗೂ ಅರ್ಜಿ ಗುಜರಾಯಿಸಿದ್ದೆ. ದಿಢೀರನೆ ಬಯಲು ಸೀಮೆಯ ಹಳ್ಳಿಯೊಂದರಿಂದ ಉಪನ್ಯಾಸಕ ಹುದ್ದೆಗೆ ಕರೆ ಬಂತು. ಸಂದರ್ಶನದ ದಿನ ಸಂಭ್ರಮದಿಂದ ಆ ಹಳ್ಳಿಗೆ ತಮ್ಮನೊಂದಿಗೆ ಹೋಗಿ ಇಳಿದೆ.

ಆ ಹಳ್ಳಿಯ ಚೇರ್ಮನ್ನರ ಪರಿಶ್ರಮದಿಂದ ಅಲ್ಲಿಗೊಂದು ಜ್ಯೂನಿಯರ್ ಕಾಲೇಜು ಹೇಗೋ ದೊರಕಿತ್ತು. ಊರ ಹೊರಗಿದ್ದ ಚೇರ್ಮನ್ನರ ಅಂಗಡಿಯನ್ನೇ ತೆರವುಗೊಳಿಸಿ ಕಾಲೇಜು ಬೋರ್ಡು ತೂಗಿಸಿದ್ದರು. ಬೇರೆ ಬೇರೆ ವಿಷಯಗಳಿಗೆ ನನ್ನಂತೆ ಈಗಿನ್ನೂ ಹೊಸದಾಗಿ ಸ್ನಾತಕೋತ್ತರ ಪದವಿ ಮುಗಿಸಿದ ಅನೇಕ 'ಉಮೇದು' ವಾರರು ಬಂದಿದ್ದರು. ಸಂದರ್ಶನದಲ್ಲಿ ನನಗೆ ಕೇಳಲಾದ ಪ್ರಶ್ನೆಗಳು,

* **ಅಡಿಕೆಗೆ ಈಗ ರೇಟು ಎಷ್ಟಿದೆ?**
* **ಗೋಕರ್ಣ ನಿಮ್ಮೂರಿಂದ ಎಷ್ಟು ದೂರ?**
* **ಸಿರಸಿ ಕಡೆ ಮಾಡುವ ತೊಡದೇವು ಎಂಬ ಸಿಹಿತಿಂಡಿ ಮಾಡುವುದು ಹೇಗೆ?**
* **ಹೆಗಡೆಗೂ ಪಗಡೆಗೂ ಏನಾದರೂ ಸಂಬಂಧವಿದೆಯೆ?**

ನನ್ನ ಉತ್ತರ ಸರಿಯಿತ್ತು ಎನಿಸುತ್ತದೆ. ಹುದ್ದೆ ನನಗೇ ದೊರಕಿತ್ತು! ನಾನು ಮೇಷ್ಟ್ರ ವೃತ್ತಿಯನ್ನು ವರಿಸಿ ಆಗಿತ್ತು.

ನನಗೆ ಉದ್ಯೋಗ ಭಾಗ್ಯ ನೀಡಿದ ಆ ಹಳ್ಳಿಯ ಹೆಸರು ಕಾಕತಾಳೀಯವೆಂಬಂತೆ 'ಭುವನಹಳ್ಳಿ' ಎಂಬುದಾಗಿತ್ತು. ಮರುದಿನ ನಮ್ಮ ಉದ್ಯೋಗದಾತರಾದ ಚೇರ್ಮನ್ನರು ಎಲ್ಲ ಹೊಸ ಉಪನ್ಯಾಸಕರಿಗೂ ಒಂದು ಕ್ಲಾಸ್ ತೆಗೆದುಕೊಂಡರು.

"ನೋಡ್ರಿ ನೀವೆಲ್ಲ ಇನ್ನೂ ಹೊಸ ಉಮೇದಿನ ಗ್ರ್ಯಾಜ್ಯುವೇಟ್ಸ್ ಇದ್ದೀರಿ ಹೌದಲ್ಲೋ ? ಹೊಸದಾಗಿ ಶುರುವಾಗಿರೋ ನಮ್ಹಳ್ಳಿ ಕಾಲೇಜ್ನಾಗ ಛಲೋತ್ನಾಗಿ ಪಾಠ ಮಾಡಿ ಕಾಲೇಜಿಗೆ ಒಳ್ಳೇ ಹೆಸರು ಬಂತಂದ್ರ ನಿಮಗೆಲ್ಲ ಮುಂದ ಸಂಬಳಾ ಜಾಸ್ತೀ ಮಾಡೋಣು ?ಈಗ ಸದ್ಯಕ್ಕೆ ಇಷ್ಟು ಮಾತ್ರ ಕೊಡಲು ಸಾಧ್ಯ ಎಂದು ತುಂಬಾ ಕಡಿಮೆ ಮೊತ್ತದ ಆಫರ್ ನೀಡಿದರು ಉಳಿದವರೆಲ್ಲ ಮುಖ ಚಿಕ್ಕದು ಮಾಡಿದರೂ ಕನ್ನಡ ಪತ್ರಿಕೆಗಳಲ್ಲಿ ಬರೆದು ಹತ್ತು ರೂಪಾಯಿ ಸಂಭಾವನೆ ಪಡೆಯುತ್ತಿದ್ದ ನನಗೆ ಅದೇನು ಅಷ್ಟು ಕನಿಷ್ಠ ಎನ್ನಿಸಲಿಲ್ಲ " – ಮುಂದೆ ಸಂಬಳ ಹೆಚ್ಚಿಸೋಣ ಎಂದು ಚೇರ್ಮನ್ನರು ಆಸೆ ಬೇರೆ ತೋರಿಸಿದ್ದರಲ್ಲ. ಎಲ್ಲರೂ ಜೈ ಎಂದು ಬಿಟ್ಟೆವು . ನನಗೆ ಉಳಿಯಲು ಗಂಗವ್ವನೆಂಬ ಪಂಚಾಯ್ತಿ ಸದಸ್ಯೆಯ ಮನೆಯಲ್ಲಿ ಒಂದು ಖೋಲಿ ಕೊಡಿಸಿದರು. ಮಲೆನಾಡಿನ ಹಳ್ಳಿಯ ದೊಡ್ಡ ಮನೆಗಳ ವ್ಯವಸ್ಥೆಗೂ ಬಯಲುಸೀಮೆಯ ಹಳ್ಳಿಗಳ ಮನೆಗಳ ವ್ಯವಸ್ಥೆಗೂ ಅಂತರ ತಿಳಿದಾಗ ನನ್ನ ನೌಕರಿಯ ಉಮೇದು ಜರ್ ಅಂತ ಇಳಿದದ್ದು ಸತ್ಯವಾದರೂ ಜೀವನದ ಪರಮ ಗುರಿಯಾದ ಕಾಲೇಜು ಉಪನ್ಯಾಸಕಿಯಾಗಬೇಕೆಂಬ ನಿರ್ಧಾರ ಅದರಿಂದ ವಿಚಲಿತವಾಗಲು ಬಿಡಲಿಲ್ಲ.

ಒಂದು ದಿನ ಕಾಲೇಜು ಕಟ್ಟಡದ ಹೊಸ್ತಿಲಿಗೆ ಕಾಯಿ ಒಡೆದು ಕ್ಲಾಸು ಶುರು ಮಾಡುವುದೆಂದಾಯ್ತು. ಕಾಲೇಜೆಂದರೆ ಒಂದು ಉದ್ದದ ಹಾಲ್ ಅಷ್ಟೆ. ಅದರ ಒಂದು ಮೂಲೆಯಲ್ಲಿ ಗೋಡೆಗಾನಿಸಿಟ್ಟ ಒಂದು ಬೋರ್ಡು, ಒಂದು ಕುರ್ಚಿ ನಾಲ್ಕಾರು ಬೆಂಚುಗಳು ಇದ್ದವು. ಹಾಲಿನ ಇನ್ನೊಂದು ಮೂಲೆಯಲ್ಲಿ ಪ್ರಿನ್ಸಿಪಾಲರ ಕುರ್ಚಿ ಟೇಬಲ್ ಇಡಲ್ಪಟ್ಟಿತ್ತು. ವಿದ್ಯಾರ್ಥಿಗಳನ್ನು ಎದುರಿಟ್ಟುಕೊಂಡು ಪಾಠ ಮಾಡುವಾಗ ತೀರಾ ಪ್ರಿನ್ಸಿಪಾಲರ ಮುಖವೂ ಅನತಿ ದೂರದಲ್ಲಿಯೇ ಕಾಣುತ್ತಿದ್ದರೆ ಚೆನ್ನಾಗಿರೋದಿಲ್ಲವೆಂದು ಚೇರ್ಮನ್ನರ ಬಳಿ ನಾವು ಮೇಷ್ಟ್ರುಗಳೆಲ್ಲ ಅಹವಾಲು ಕೊಟ್ಟೆವು.

ಮರುದಿನ ಕಾಲೇಜಿಗೆ ಹೋಗುವಷ್ಟರಲ್ಲಿ ಒಂದು ಅದ್ಭುತ ಯೋಜನೆ ಜಾರಿಯಲ್ಲಿ ಬಂದಿತ್ತು. ಪ್ರಿನ್ಸಿಪಾಲರ ಟೇಬಲ್ಲಿನ ಎದುರು ಯಕ್ಷಗಾನದ ಪ್ರಮುಖ ಪಾತ್ರಧಾರಿಗಳಿಗೆ ತೆರೆ ಹಿಡಿಯುವಂತೆ ಒಂದು ಕಂಬಳಿಯ ತೆರೆ ಕಟ್ಟಲಾಗಿದೆ. ಅದರ ಕೆಳಭಾಗದಲ್ಲಿ ಪ್ರಿನ್ಸಿಪಾಲರ ಕಾಲು, ಬೂಟು ಅವುಗಳ ಅಲುಗಾಟ ಎಲ್ಲ ಕಾಣುತ್ತಿದೆ. "ಕಾಲ್ಪನಿಕ ತೆರೆಯಾಚೆ ವಾಸ್ತವದ ಮೇಲಧಿಕಾರಿ!" ವಿದ್ಯಾರ್ಥಿಗಳ ಮುಂದೆ ನಗು ನಿಯಂತ್ರಿಸಿಕೊಂಡು ಪಾಠ ಮಾಡುವುದೇ ಕಷ್ಟವಾಗಿತ್ತು. ತಾನು ಕುಳಿತ ಟೇಬಲ್ಲಿಗೇ ಹೀಗೆ ತೆರೆ ಕಟ್ಟಿದರೆ ಅದರೊಳಗೆ ಕೂತವರಾದರೂ ಪಾಪ ಹೇಗಿದ್ದಾರು? ಮರುದಿನ ಪ್ರಿನ್ಸಿಪಾಲರ ಉಸ್ತುವಾರಿಯಲ್ಲಿ ಆ ಹಾಲಿಗೆ ತಾಗಿದ್ದ ಚೂರು ಜಾಗದಲ್ಲಿ ಶೆಡ್ ತಡಿಕೆಗಳ ಚೇಂಬರ್ ಒಂದು ರೆಡಿ ಆಯ್ತು. ಉಪನ್ಯಾಸಕರು ಕ್ಲಾಸಿಲ್ಲದಾಗ ಕೂತಿರಲು ಒಂದು ಬೆಂಚು ಅಲ್ಲೇ ಹಾಕಿದ್ದರು.

ಹೊಸದಾಗಿ ಪ್ರಾರಂಭವಾದ ಕಾಲೇಜಿಗೆ ದಿನಾ ಎರಡು ಮೂರು ವಿದ್ಯಾರ್ಥಿಗಳು ಬಂದು ಸೇರುತ್ತಿದ್ದರು. ನೇರವಾಗಿ ಹೊಲದಿಂದ, ಮಿಲ್ಲುಗಳಿಂದ, ಕೆಲಸಗಳಿಂದ ಬಿಟ್ಟು ಬಂದ ಹುಡುಗರು ವಿದ್ಯಾರ್ಥಿಗಳ ಹಾಗೆ ಕಾಣುತ್ತಿರಲಿಲ್ಲ. ಸಿಲೇಬಸ್ಸ್, ಪಠ್ಯಪುಸ್ತಕ ಯಾವುದೂ ಬಂದಿರಲಿಲ್ಲ. ವಾರಗಟ್ಟಲೆ ಪೀಠಿಕೆ ಹಾಕಿಯೇ ಹಾಕಿದೆವು. ರಿಟೈರ್ಡ್ ಹೈಸ್ಕೂಲ್ ಹೆಡ್ಮಾಸ್ಟ್ರೊಬ್ಬರಿಗೆ ಪ್ರಿನ್ಸಿಪಾಲ ಪದವಿ ಕೊಟ್ಟಿದ್ದರಾದರೂ ಅವರು ಒಂದೆರಡು ಕ್ಲಾಸು ತೆಗೆಯಬೇಕಿತ್ತು. ಆದರೆ ಅವರಿಗೆ ವಿಷಯ ಯಾವುದೆಂದು ಹಂಚಿಕೆ ಇರಲಿಲ್ಲ. ಇದ್ದ ಇಪ್ಪತ್ತು ಮಕ್ಕಳಿಗೆ ದಿನಾ ಅರ್ಧಗಂಟೆ ಅವರು ಹೀಗೆ ಪಾಠ ಮಾಡುತ್ತಿದ್ದರು.

"ನೋಡ್ರಪ್ಪಾ ಮಕ್ಕಳು ದಿನಾ ಸೂರ್ಯ ಮೂಡುವುದರೊಳಗೆ ಎದ್ದುಬಿಡಬೇಕು ಯಾಕಪ್ಪಾ ಎದ್ದುಬಿಡಬೇಕು ಅಂದ್ರೆ ಆ ಕಾಲ ಬಲು ಪ್ರಶಸ್ತವಾದ ನಸುಕಿನ್ನೂ ಹರಿಯದ ಸುಂದರ ಕಾಲ. ವಾತಾವರಣದಲ್ಲಿ ಆಕ್ಸಿಜನ್ ತುಂಬಿರುವ ಸಮಯ. ದಿನಾ ಬೆಳಗ್ಗೆದ್ದು ಬಾಯಿ ಮುಕ್ಕಳಿಸಿ ಹಲ್ಲುಜ್ಜಬೇಕು. ಹಲ್ಲುಜ್ಜುದು ಯಾಕಪ್ಪಾಂದ್ರೆ ಬಾಯಿ ಹಲ್ಲು ಸ್ವಚ್ಛವಾಗಿರ್ಬೇಕು. ಬಾಯಿ ಹಲ್ಲು ಯಾಕಪಾ ಸ್ವಚ್ಛವಾಗಿರ್ಬೇಕು ಅಂದ್ರ ಮುಂದ ಹಲ್ಲು ಹುಳಕ ಆಗ್ತಾವ ಕಾಯಿಲೆ ಬರ್ತಾವ. ಕಾಯಿಲೆ ಬಂದ್ರ ಏನಪಾ ಆಗ್ತದ ಅಂದ್ರ.... ದಿನವೂ ಈ ಪಾಠ ಕೇಳಿಸಿಕೊಳ್ಳುತ್ತಿದ್ದ ನನಗೆ ನಾನೂ ಒಂದು ದಿನ ಅರ್ಥಶಾಸ್ತ್ರ ಬಿಟ್ಟು 'ಸ್ವಚ್ಛತಾ ಶಾಸ್ತ್ರ'ದ ಕುರಿತು ಪಾಠ ಮಾಡಬೇಕೆಂಬ ಆಸೆ ಹುಟ್ಟಿಬಿಟ್ಟಿತು. ಹಚ್ಕೊಂಡೆ.

"ನೋಡ್ರಪ್ಪಾ ದಿನಾಲು ನಾವು ಸ್ನಾನ ಮಾಡಲೇ ಬೇಕು. ಈ ಸ್ನಾನ ಯಾಕಪಾಂದ್ರ ನಮ್ಮ ಮೈ ನಮ್ಗ ವಾಸ್ನಿ ಬರ್ಬಾರ್ದು. ವಾಸನೆ ಬಂದ್ರ ಏನಪಾ ಆಗ್ತದಂದ್ರೆ..." ಎಂದು ಶುರು ಮಾಡಿದ್ದೆ. ಹುಡುಗರ ಮುಖ ಯಾಕೋ ಹುಳ್ಳ ಹುಳ್ಳಗೆ ಕಾಣಿಸ್ಲಿಕ್ಕೆ

ಶುರುವಾಯ್ತು. ಪಾಠ ನಿಲ್ಲಿಸಿ ಕಾರಣ ಕೇಳಿದೆ. ಮೊದಲು ಸಂಕೋಚಪಟ್ಟರೂ ನಿಧಾನಕ್ಕೆ ಅವುಗಳು ಹೇಳಿದ್ದೇನೆಂದರೆ –

"ನಮ್ಮನೀ ಒಳ್ಗ ದಿನಾ ಜಳಕ ಮಾಡೂದಿಲ್ರಿ. ವಾರದಾಗ ಒಂದು ಎರಡು ಸಲ ಮಾಡ್ತೇವೆ" – ನನಗೆ ಶಾಕ್ ಆದರೂ ತೋರಿಸಿಕೊಳ್ಳದೇ ಸ್ನಾನದ ಮಹತ್ವದ ಕುರಿತು ನಿಜವಾಗಿಯೂ ತಿಳಿಸಿ ಹೇಳಿ, "ಕಾಲೇಜು ಮಕ್ಕಳು ನೀವೀಗ. ಸ್ಕೂಲ್ ಮಕ್ಕಳಲ್ಲ. ನಿಮ್ಮ ಹಿರಿಯರಿಗೂ ಹೇಳಿ ಸ್ನಾನ ಮಾಡಿಸಿ...." ಎಂದು ಹೇಳಿ ಬೆವರೊರೆಸಿಕೊಂಡೆ.

ನಿತ್ಯವೂ ಕ್ಲಾಸ್ ರೂಮಿನ ಬಾಗಿಲು ತೆರೆದಿಟ್ಟು ಪಾಠ ಮಾಡುತ್ತಿದ್ದರೆ ಅಭ್ಯಾಸ ಬಲದಿಂದ ದನ, ಕುರಿ, ಕೋಳಿಗಳೆಲ್ಲ ಎಗ್ಗಿಲ್ಲದೆ ನುಗ್ಗುತ್ತಿದ್ದವಾದ್ದರಿಂದ ಬಾಗಿಲು ಮುಚ್ಚಿ, ಮಕ್ಕಳೇ ಅರ್ಥಶಾಸ್ತ್ರವೆಂದರೆ... ಎಂದು ಪಾಠ ಮಾಡುತ್ತಿದ್ದೆ. ವಿಷಯವನ್ನು ಗ್ರಾಮೀಣ ಪ್ರದೇಶದ ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳ ತಲೆಯೊಳಗೆ ತೂರಿಸಬೇಕೆಂಬ ಉಪಾಯ ನನ್ನದು. ಅದಕ್ಕೇ, "ಬೆಟ್ಟೇಗೌಡರು ಚೊಟ್ಟೇಗೌಡರ ಜೋಳವನ್ನು ಖರೀದಿಸುವಾಗ ಅದಕ್ಕೆ ಪ್ರತಿಯಾಗಿ ವಿನಿಮಯ ಮಾಡಲು ಉಪಯೋಗಿಸುವ ವಸ್ತು ಹಣ ಎನ್ನಿಸಿಕೊಳ್ಳುತ್ತದೆ" – ಹೀಗೆಲ್ಲ ಅಲ್ಲಿಯವರದ್ದೇ ಹೆಸರು ಹೇಳಿ ಉದಾಹರಣೆ ನೀಡುತ್ತಿದ್ದೆ.

ಒಂದು ದಿನ ಪಾಠ ನಡೆದಿದ್ದಂತೆ ಬಾಗಿಲು ಟಕ ಟಕ ಎಂದಿತು. ಬಾಗಿಲು ತೆರೆದರೆ ಚೇರ್ಮನ್ನರ ಸೊಸೆ! ತನ್ನ ಐದು ವರ್ಷದ ಮಗನ ಕೈ ಹಿಡಿದು ನಿಂತಿದ್ದಾಳೆ. ತಲೆ ಮೇಲೆ ಸೆರಗು.

"ಈ ಖೋಡೀನ್ನ ನೋಡ್ರಿ ಸಾಲಿಗ್ಹೋಗು ಅಂದ್ರ ಒಲ್ಲ್ಯಂತಾನ. ಜುಲ್ಮಿ ಮಾಡಿದ್ರೆ ಒದರಾಡ್ತಾನೆ. ಹಂಗಾರ ಕಾಲೇಜಿಗೆ ಹೊಕ್ಕೀಯೇನೋ ಅಂದ್ರ ಹೂಂ ಅಂದ. ಸ್ವಲ್ಪ ಹೊತ್ತು ನಿಮ್ ಈ ಖೋಲೀ ಒಳಗ ಕ್ಲಾಸ್ನಾಗ ಕುಂದರ್ಲೇಳ್ರಿ...." ಎಂದಳು. ಖೋಡಿಯ ಕಡೆ ನೋಡಿದೆ. ಪಿಳಿ ಪಿಳಿ ಕಣ್ಣು ಪಿಳುಕಿಸುತ್ತಿದೆ. ನನ್ನ ಶಿಷ್ಯ ಸಮೂಹದ ಕಡೆ ಅನುಮತಿಗೆಂಬಂತೆ ನೋಡಿದೆ – "ಬಾರೋ ಬಸ್ಯಾ ಇಲ್ಲೇ ಕುಂದರು" ಎನ್ನುತ್ತಿದ್ದಾರೆ. ಅನ್ನ ನೀಡುವ ಧಣಿಯ ಮೊಮ್ಮಗ. ಇಲ್ಲವೆನ್ನಲಿ ಹೇಗೆ? ಎಲ್ಕೇಜಿ ಮಗುವಿಗೆ ಅರ್ಥಶಾಸ್ತ್ರ ಬೋಧಿಸಿದ ಕೀರ್ತಿಗೆ ಪಾತ್ರಳಾಗುವ ಅದೃಷ್ಟ ಆವತ್ತು ನನಗೊದಗಿ ಬಂತು.

ನಮ್ಮ ಸಹೋದ್ಯೋಗಿ ಕನ್ನಡದ ಮೇಷ್ಟ್ರು ಬಾಗಿಲು ಹಾಕಿಕೊಂಡು ಪಾಠ ಮಾಡುತ್ತಿದ್ದರೆ ಆಗಾಗ ಧಬ ಧಬ ಸಪ್ಪಳ ಕೇಳಿ ಬರುತ್ತಿತ್ತು. ವಿದ್ಯಾರ್ಥಿಗಳಿಗೆ ಬಾರಿಸಿ ದಂಡಿಸುತ್ತಿದ್ದಾರೇನೋ ಎನ್ನಲೂ ಪುರಾವೆಯಿಲ್ಲ! ಆಗಾಗ ಹಾಡು ಸಹ ಜತೆಗೇ ಕೇಳಿ ಬರುತ್ತಿತ್ತು. ಮೇಷ್ಟ್ರನ್ನು ಕೇಳಿದರೆ ಮುಗುಳ್ನಗು ಮಾತ್ರ ಉತ್ತರ. ಕೊನೆಗೆ ವಿದ್ಯಾರ್ಥಿಗಳನ್ನೇ ಏನ್ರಪ್ಪಾ ವಿಷಯ ಎಂದು ಕೇಳಿದೆ – "ಪಾಠ ಮುಗಿಸಿ ಸ್ವಲ್ಪ ಹೊತ್ತು ಯಕ್ಷಗಾನ ಕಲಿಸ್ತಾರ್ರೀ. ಭಾರೀ ಛಲೋ ಅನಸ್ತದ. ಕುಣಿಯೂ ಹಂಗ ಆಗ್ತದ" ಎನ್ನುತ್ತಾ,

"ಕೋಮಲಾಂಗಿ ಕೇಳೇ ಮದಗಜಗಾಮಿನಿ ಪಾಂಚಾಲಿ...." ಎಂದು ಭಾಗವತಿಕೆಯ ಒಂದು ಪದ್ಯ ಹಾಡಿಯೂ ತೋರಿಸಿದರು. ಕರಾವಳಿಯ ಆ ಉಪನ್ಯಾಸಕರ ಉತ್ಸಾಹ ಹಾಗಿತ್ತು. ಎಷ್ಟು ಕಲಿಸಿದರೂ ಕಲಿಯುವ ಹುಮ್ಮಸ್ಸು

ಅಲ್ಲಿಯ ವಿದ್ಯಾರ್ಥಿಗಳಲ್ಲಿತ್ತು. ನಾವೂ ಅಷ್ಟೆ. ಏನು ಕಲಿತರೂ ಕಲಿಯಬಹುದಾದ ಸಮಯ ನಮಗಿತ್ತು. ಸಂಜೆ ಊರ ಹೆಂಗಸರ ಜತೆ ಆಗಾಗ ನಾನೂ ಜೋಳದ ಹೊಲದ ಕಡೆ ಹೋಗುತ್ತಿದ್ದೆ. ಯಲ್ಲವ್ವ, ಮಲ್ಲವ್ವ.... ಅವರ ಕುಟುಂಬದ ಕಲಹಗಳು, ಪಾರವ್ವನ ಮಗಳ ಮದುವೆ ಕಥೆ... ಎಲ್ಲವನ್ನೂ ಹಳ್ಳಿಯ ಹೆಂಗಸರು ನನ್ನ ಬಳಿ ಹೇಳಿಕೊಳ್ಳುತ್ತಿದ್ದರು.  ಯಾರ ಕಥೆ ಬಿಚ್ಚಿಕೊಂಡರೂ ಅಲ್ಲೊಂದು ಕರುಣ ಕಥೆ ಇದ್ದೇ ಇರುತ್ತಿತ್ತು .ಕುಡುಕ ಗಂಡ ಸೋಮಾರಿ ಮಗ  ಹೇಳಿದ್ದು ಕೇಳದ ಮಗಳು ಇವುಗಳ ನಡುವೆಯೂ ಮುಖದಲ್ಲಿ ಸೋಲಿನ ಕಳೆ ಇಟ್ಟುಕೊಳ್ಳದೆ ಛಲದಿಂದ ದುಡಿಯುವ ಮಹಿಳಾ ವರ್ಗ. ಮಲೆನಾಡಿಗೆ ತೀರಾ ವಿರುದ್ಧವಾದ ವಿಭಿನ್ನ ರುಚಿಯ ಬಯಲುಸೀಮೆಯ ರೊಟ್ಟಿ ಪಲ್ಯ ಗಳ ಊಟ  ಮೊದಮೊದಲು ವಿಚಿತ್ರ ಎನಿಸಿದರೂ ಅದರದ್ದೇ ಆದ ಒಂದು ಹದ ನನಗೆ  ಸಿಗತೊಡಗಿತು. ನಾನೂ ಅವರಿಂದ ಜೋಳದ ಭಕ್ರಿ, ಪುಂಡಿಪಲ್ಲೆ, ಗುರೆಳ್ಳು ಚಟ್ನಿಪುಡಿ ಮಾಡುವುದನ್ನು ಕಲಿತೆ. ಸ್ವಚ್ಛತೆ, ಸ್ವಾವಲಂಬನೆ, ಶಿಕ್ಷಣ... ಅಂತ ಆಗಾಗ ಕಲಿಸಿಯೂ ಕಲಿಸಿದೆ. ಕೆಲವು ದೊಡ್ಡಾಟದ ಪದಗಳನ್ನೂ ಗೀಗೀ ಪದಗಳನ್ನೂ ಅವರು ನನಗೆ ಕಲಿಸಿದರು. ಅದರಲ್ಲಿ ಮಲ್ಲವ್ವನೆಂಬ ಕುಂಕುಮಧಾರಿಣಿ ಭಕ್ತೆಯೊಬ್ಬಳು ಮುಕ್ತ ಕಂಠದಲ್ಲಿ,

**“ಏಳು ಕೊಳ್ಳದಲಿ ಇರುವ ಯಲ್ಲಮ್ಮನ**
**ಜಾತ್ರೀಯ ನೋಡೋಣು ಬಾ.**
**ಶಕ್ತಿ ಪಾದ ಪೂಜೆಯ ಮಾಡೋಣು ಬಾ**
**ಉಘೇ ಉಘೇ ಅನ್ನುತ್ತ ಹಾಡೋಣು ಬಾ......”**

ಎಂದು ಹಾಡುತ್ತ ಹೊಲದಲ್ಲಿ ನರ್ತಿಸುತ್ತಿದ್ದಾಗ ನನಗೂ ತಡೆದುಕೊಳ್ಳುವುದಾಗುತ್ತಿರಲಿಲ್ಲ. ನಾಲ್ಕು ಹೆಜ್ಜೆ ಹಾಕಿಯೇ ಹೋಗುತ್ತಿತ್ತು. ಆಗಿನ್ನೂ ನಮ್ಮೂರಲ್ಲಿ ಮಹಿಳಾ ಯಕ್ಷಗಾನದ ಪರಿಕಲ್ಪನೆ ಪ್ರಚಲಿತವಾಗಿರಲಿಲ್ಲ ನಮ್ಮ ಯಕ್ಷಗಾನ ಕುಣಿತದ ಹುಚ್ಚನ್ನು  ನಮ್ಮ ನಮ್ಮ ಮನೆಗಳಲ್ಲಿ ಹಿರಿಯರ ಕಣ್ತಪ್ಪಿಸಿ ಬಲ್ಲವರಿಂದ ಕಲಿಯುತ್ತಿದ್ದೆವು. ಭಾಗವತಿಕೆ ಆದರೂ  ಆದೀತು ಕುಣಿತ ಕೂಡದು ಎಂಬಂತಿದ್ದ ಹಿರಿಯರು  ಮನೆಮನೆಯಲ್ಲೂ ಇದ್ದರು. ಆದರಿಲ್ಲಿ ಬಯಲುಸೀಮೆಯ ತೆರೆದ ಗದ್ದೆಯ ಬಯಲಿನಲ್ಲಿ ಹಳ್ಳಿಯ ಮಹಿಳೆಯರ ಜತೆ ಹೆಜ್ಜೆ ಹಾಕಿ ಕುಣಿಯುವುದು ಬೊಬ್ಬೆಯಿಡುವುದು ನನಗಂತೂ ಆಪ್ಯಾಯಮಾನ  ದಿನಚರಿಯಾಗಿ ಹೋಗಿತ್ತು. ನಾನವರಿಗೆ ಕಲಿಸುವುದಕ್ಕಿಂತ ಅವರಿಂದ ನಾನು ಕಲಿತದ್ದು ಹೆಚ್ಚು ಅನಿಸತೊಡಗಿತ್ತು .ಎಲ್ಲಮ್ಮ ಮಲ್ಲಮ್ಮರಿಗೆ ನಾನು ಇಂಗ್ಲೀಷ್ ಕಲಿಸಿದ್ದೆ.  ಒಂದು ದಿನ  ಮಲ್ಲಮ್ಮ ತನ್ನ ಗಂಡನ ಬಳಿ "ಹಂಗ್ಯಾಕ ಮಂಗ್ಯಾನ್ಹಂಗ ಮಾಡಾಕತ್ತಿ ಸ್ವಲ್ಪ ಡೀಸೆಂಟ್ರ ಜೆಂಟ್ಲ್ ಮ್ಯಾನ್  ಆಗಿ ನೆಡ್ಕೋ ನೋಡೋಣು" ಎಂದು  ಪ್ರಯೋಗ ಮಾಡಿದ್ದು ಕಿವಿಮೇಲೆ ಬಿದ್ದು  ಹುಳ್ಳ ಹುಳ್ಳಗೆ ಆಗಿತ್ತು. ಚೇರ್ಮನ್ನರ ಗದ್ದೆಯಲ್ಲಿ ಕಾಲು ಸೆಂಟು ಜಾಗ ಬಾಡಿಗೆಗೆ ಪಡೆದು ನಾನು ಟೊಮೆಟೋ ಹಸಿಮೆಣಸು ಬೆಳೆಸತೊಡಗಿದೆ. ಮಲೆನಾಡಿನ ನನ್ನ ಅಡಿಕೆ ತೋಟದ ಯಾಲಕ್ಕಿ ಕರಿಮೆಣಸುಗಳ ನೆನಪು ಸೆಳೆದಾಗೆಲ್ಲ ಹಸಿ ಮೆಣಸಿನ ಗಿಡ ಸವರಿ ತೃಪ್ತಿಪಟ್ಟುಕೊಳ್ಳುತ್ತಿದ್ದೆ.ಶನಿವಾರ ಭಾನುವಾರ ನನ್ನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೇಡವೆಂದರೂ ನನ್ನೊಂದಿಗೆ ಗದ್ದೆಗೆ ಬರುತ್ತಿದ್ದು ಆಚೀಚೆ ನೆಗೆದಾಡುವ ಮಕ್ಕಳು ಕ್ಷಣಮಾತ್ರದಲ್ಲಿ ಗಿಡ ನೆಡಲು ಅನುಕೂಲವಾಗುವ ಬದು ನಿರ್ಮಾಣ ಮಾಡುವುದು ಹುಲ್ಲು ಕತ್ತರಿಸಿ ಹೊರೆ ಕಟ್ಟುವುದು ಮೊದಲಾದ

ಕೆಲಸಗಳನ್ನು ಲೀಲಾಜಾಲವಾಗಿ ಮಾಡಿ ಬಿಡುತ್ತಿದ್ದರು. ಅವುಗಳನ್ನು ಚೇರ್ಮನ್‌ರ ಮನೆಯ ಕೊಟ್ಟಿಗೆಗೆ ಸಾಗಿಸಿ ಕೃತಾರ್ಥಳಾಗುತ್ತಿದ್ದೆ. ಆ ಹೆಣ್ಣು ಮಗಳಿಗೆ ಕೊಡುವ ಹಾಲಿಗೆ ರೊಕ್ಕಾ ತಗೋಳ್ಬೋ ಹಂಗಿಲ್ಲ" ಎಂದು ಚೇರ್ಮನ್ನರು ಅಪ್ಪಣೆ ಮಾಡಿದ್ದರೆಂದು ಸೊಸೆ ಹೇಳಿದ್ದಳು.ಜೋಳದ ದಂಟನ್ನು ತಿಂದು ನೀರು ಕುಡಿಯುತ್ತಿದ್ದ ಎಮ್ಮೆಗಳು ನೀಡುತ್ತಿದ್ದ ಗಟ್ಟಿ ಹಾಲಿನಲ್ಲಿ ಮಾಡಿ ಕುಡಿಯುತ್ತಿದ್ದ ಕಾಫಿ ಇಂದಿಗೂ ನನ್ನ ಸ್ಮೃತಿ ಕೋಶದಲ್ಲಿ ಭದ್ರವಾಗಿ ಹಬೆಯಾಡುತ್ತಿದೆ. ಹೊಲದಲ್ಲಿಯೇ ಬೆಂಕಿ ಹಾಕಿ ಜೋಳದ ಕುಂಡಿಗೆಗಳನ್ನು ಕೆಂಡದಲ್ಲಿ ಸುಟ್ಟು ಅಲ್ಲೇ ಕೂತು ತಿನ್ನುವುದು ಅಭ್ಯಾಸವಾಗಿ ಹೋಯ್ತು. ಇನ್ನೂ ಕೆಲ ವರ್ಷ ಅದೇ ಹಳ್ಳಿಯಲ್ಲಿ ನಾನು ಅರ್ಥಶಾಸ್ತ್ರ ಬೋಧಿಸಿಕೊಂಡು ಇದ್ದಿದ್ದರೆ ಅಲ್ಲೇ ಪುಟ್ಟ ಜಮೀನು ಖರೀದಿಸಿ ಜೋಳ ಬೆಳೆಯಲು ಪ್ರಾರಂಭಿಸಿದರೂ ಆಶ್ಚರ್ಯವಿರಲಿಲ್ಲ. ದಿನಗಳು ಓಡಿದ್ದೇ ತಿಳಿಯುತ್ತಿರಲಿಲ್ಲ.

ಮಧ್ಯಾವಧಿ ಪರೀಕ್ಷೆ ಮಾಡಿ ನಮ್ಮ ಕಲಿಸುವಿಕೆಯ ಸತ್ತ್ವ ಪರೀಕ್ಷೆ ಮಾಡುವುದೆಂದಾಯ್ತು. ಉತ್ತರಗಳು ನಮ್ಮ ಎದೆಗೇ ಬಂದು ಒದ್ದಂತೆ ಬರೆಯಲ್ಪಟ್ಟಿದ್ದವು.

ಅರ್ಥಶಾಸ್ತ್ರವೆಂದರೇನು? ಅದರಲ್ಲಿ ಪ್ರಕಾರಗಳೆಷ್ಟು? ಎಂಬ ಪ್ರಶ್ನೆಗೆ ವಿದ್ಯಾರ್ಥಿಯೊಬ್ಬನ ಉತ್ತರ ಹೀಗಿತ್ತು.

ಪ್ರತಿಯೊಂದು ಪದಕ್ಕೂ ಒಂದೊಂದು ಅರ್ಥವಿರುತ್ತದೆ. ಅ ಅರ್ಥವನ್ನು ತಿಳಿಸುವ ಶಾಸ್ತ್ರವೇ ಅರ್ಥಶಾಸ್ತ್ರ. ಇದರಲ್ಲಿ ಎರಡು ಪ್ರಕಾರ. ಅಪಾರ್ಥಶಾಸ್ತ್ರ ಹಾಗೂ ಅನರ್ಥ ಶಾಸ್ತ್ರ.

ಶಬ್ದಗಳಿಗೆ ತಪ್ಪು ಅರ್ಥಗಳು ಹುಟ್ಟಿ ತಪ್ಪು ಅಭಿಪ್ರಾಯಗಳು ಉಂಟಾದರೆ ಅಪಾರ್ಥ ಶಾಸ್ತ್ರವೆಂದು ಹೇಳುತ್ತಾರೆ. ಈ ಅಪಾರ್ಥದಿಂದ ವಿರಸ ಜಾಸ್ತಿಯಾಗಿ ಮಾರಾಮಾರಿಯಾದರೆ ಅದನ್ನ ಅನರ್ಥ ಶಾಸ್ತ್ರವೆನ್ನುತ್ತಾರೆ.

ಹಣವೆಂದರೇನು? ಎಂಬ ಪ್ರಶ್ನೆಗೆ ಹೆಚ್ಚಿನವರು, – 'ಬೆಟ್ಟೇಗೌಡರು ಚೊಟ್ಟೇಗೌಡರ ಬಳಿ ಜೋಳ ಖರೀದಿಸುವಾಗ ಪ್ರತಿಯಾಗಿ ಕೊಡುವ ಪದಾರ್ಥ' ಎಂದು ಬರೆದಿದ್ದರೆ ಒಬ್ಬ ವಿದ್ಯಾರ್ಥಿ ಮಾತ್ರ "ಹಣವೆಂದರೆ ಹೆಣ್ಣು ಕೊಟ್ಟ ಮಾವನನ್ನು ಹೆದರಿಸಿ ಅಲುಗಾಡಿಸಿದಾಗ ಉದುರುವ ಪದಾರ್ಥ" ಎಂದು ಬರೆದು, ನನ್ನ ಮುಖಕ್ಕೆ ಮಂಗಳಾರತಿ ಹಿಡಿದಿದ್ದ.

ಇಂಥ ನಿಸರ್ಗದತ್ತ ಕಿರಿಯ ಕಾಲೇಜನ್ನು ಬಿಟ್ಟುಬಿಡಬೇಕಾದ ಸಂದರ್ಭ ಬಂದಾಗ ನನಗೇ ತುಂಬ ದುಃಖವಾಯಿತು. ನಗರವೊಂದರ ಪ್ರಥಮ ದರ್ಜೆ ಕಾಲೇಜಿಗೆ ನೇಮಕವಾಗಿದೆ. ನಾನಿನ್ನು ಇಲ್ಲಿರೋ ಹಂಗಿಲ್ಲ ಎಂದು ಎಲ್ಲಮ್ಮ, ಮಲ್ಲಮ್ಮರಲ್ಲಿ ಹೇಳಿದೆನಷ್ಟೆ. ಹೆಂಗಸರ ದಂಡೇ ಚೇರ್ಮನ್ನರ ಮನೆಗೆ ದಂಡು ಹೋಗಿ "ಆ ಹೆಣ್ಮಗಳಿಗೆ ಇನ್ನ ಸ್ವಲ್ಪ ಜಾಸ್ತಿ ಸಂಬಳಾ ಕೊಟ್ಟು ಇಲ್ಲೆ ಇಟ್ಕೊ ಬಾರ್ದೇನ. ಆಕಿ ಸಂಬಳಾ ಸಾಲದ್ದಕ್ಕ ಬಿಟ್ಟು ಹೊಂಟಾಳ" – ಎಂದು ಜಬ್ಬರದಸ್ತ್ ಮಾಡಿದರಂತೆ. ಆ ಹಳ್ಳಿಯಲ್ಲಿ ಸಿಕ್ಕ ಮುಗ್ಧ ಪ್ರೀತಿ ಮತ್ತೆ ನನಗೆ ಯಾವ ಸಂಬಳದಲ್ಲೂ ಪ್ರಮೋಶನಲ್ಲೂ ಸಿಕ್ಕಿಲ್ಲ.

■

# ಜೋಗಿಲ ಸಿದ್ಧ ಜವರಯ್ಯ

**● ದೊಡ್ಡರಂಗೇಗೌಡ**

ನಾನು ಎಸ್. ಎಲ್. ಎನ್. ಕಾಲೇಜಿನಲ್ಲಿ ಪ್ರಾಂಶುಪಾಲನಾಗಿದ್ದೆ. ಅಲ್ಲಿ ಸಾಮಾನ್ಯವಾಗಿ ನಾವು ಸಾಂಸ್ಕೃತಿಕ ಸಂಜೆ ನಡೆಸುತ್ತಿದ್ದೆವು. ಇದರಲ್ಲಿ ಅನೇಕ ಗ್ರಾಮೀಣ ಸೊಗಡಿನ ಪ್ರತಿಭೆಗಳಿಗೆ ಅವಕಾಶ ಕೊಟ್ಟಿದ್ದೆವು. ಒಂದು ದಿನ ಮಧ್ಯಾನ್ಹ ಮೂರು ಗಂಟೆ ವೇಳೆಗೆ ಒಬ್ಬ ವ್ಯಕ್ತಿ ನನ್ನ ಛೇಂಬರಿಗೆ ಬಂದು ಕೂತ್ಕೊಬಹುದಾ ಸ್ವಾಮಿ ಅಂತ ಕೇಳಿದ. ನಾನು ಪ್ರತಿಕ್ರಿಯೆ ನೀಡುವ ಮೊದಲೇ ಅವನು ಕೂತಿದ್ದಾಗಿತ್ತು. ಸರಿ ಏನು ವಿಷಯ ಅಂತ ಕೇಳಿದೆ. ಹಾಗೆ ಕೇಳಿದ್ದೇ ತಡ ಅವನು ತನ್ನ ಪ್ರವರ ಷುರು ಮಾಡಿಕೊಂಡ. ನನ್ನ ಹೆಸರು ಜೋಗಿಲಸಿದ್ದ ಜವರಯ್ಯ ಅಂತ. ಎಲ್ಲರೂ ನನ್ನನ್ನು ಜೋಗಿಲಸಿದ್ಧ ಎಂದೇ ಕರೆಯುತ್ತಾರೆ. ನಾನು ತುಮಕೂರು ಜಿಲ್ಲೆಯವನು ಬೆಲ್ಲದ ಮಡುವಿನವನು ಎಂದು ಪೀಠಿಕೆ ಹಾಕಿದ್ದ. ನನಗೆ ಖುಷಿಯಾಗಿ ನಮ್ಮೂರೂ ಅಲ್ಲೇರಿ, ನಿಮ್ಮೂರಿಗೆ ಹತ್ತಿರ ಅಂದೆ. ಯಾವುದು ಸ್ವಾಮಿ ಅಂತ ಕೇಳಿದ. ಕುರುಬರ ಹಳ್ಳಿಯವನು. ಮಧುಗಿರಿಗೆ 15 ಕಿಲೋಮೀಟರು ದೂರ, ದೊಡ್ಡೇರಿ ಹೋಬಳಿಯವನು ಅಂದೆ. ಜೋಗಿನ ಸಿದ್ಧನ ಕಣ್ಣಲ್ಲಿ ಮಿಂಚು, ಮಿನುಗು. ನಾವೀಗ ಒಂದೇ ಕಡೆಯವರಾದೆವು ಅಂದ ಮೇಲೆ ನನ್ನ ಕೆಲಸ ಈಗ ಸುಲಭವಾಯಿತು ಎಂದ ಜೋಗಿಲ ಸಿದ್ಧಯ್ಯ. ನಾನು ಜಾನಪದ ಗೀತೆಗಳನ್ನು ಹಾಡುತ್ತೇನೆ. ನಿಮ್ಮ ಶಾಲೆಯಲ್ಲಿ ಹಾಡಲು ಒಂದು ಅವಕಾಶ ಮಾಡಿಕೊಡಿ ಸರ್ ಅಂದ. ಎಷ್ಟೋ ಪ್ರತಿಭೆಗಳಿಗೆ ಅವಕಾಶ ಕೊಟ್ಟಿರುವಾಗ ಇವನಿಗೆ ಯಾಕೆ ಕೊಡಬಾರದು ಎನಿಸಿ ಆಯ್ತು ಎಂದೆ. ನಮ್ಮ ಕಾಲೇಜಿನಲ್ಲಿ 4 ಗಂಟೆಯಿಂದ 5 ಗಂಟೆಯ ಅವಧಿಯನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಿಟ್ಟಿದ್ದೆವು. ಅಂದೇ ಎಲ್ಲ ತರಗತಿಗಳಿಗೂ ಸುತ್ತೋಲೆ ಕಳಿಸಿದೆ. ನಾಲ್ಕು ಗಂಟೆಗೆ ಜೋಗಿಲ ಸಿದ್ಧಯ್ಯ ಹಾಡಲು ಸಿದ್ಧವಾದ.

ಅದಕ್ಕೆ ಮುಂಚೆ ಸ್ವಲ್ಪ ಉಪಾಹಾರಕ್ಕೆ ವ್ಯವಸ್ಥೆ ಮಾಡಿದ್ದಾಗ ಮೊದಲು ಸಂಕೋಚ ಪಟ್ಟಾಗ ನಾನು ನೀವು ನಮ್ಮ ಅತಿಥಿಗಳು. ಅತಿಥಿ ಸತ್ಕಾರಕ್ಕೆ ಹೆಸರಾದ ದೇಶ ನಮ್ಮದು ತಿನ್ನಿ ಪರವಾಗಿಲ್ಲ ಅಂದೆ. ತಿಂಡಿ ತಿಂದು ಅಣಿಯಾದರು ಜವರಯ್ಯ

**ಬೆಳಗಾಗ ನಾನೆದ್ದು ಯಾರ್ಯಾರ ನೆನಯಲಿ**

**ಎಳ್ಳು ಜೀರಿಗೆ ಬೆಳೆವಂಥಾ ಎಳ್ಳು ಜೀರಿಗೆ ಬೆಳೆವಂಥಾ**

**ಭೂಮಿ ತಾಯಿಯ ಎದ್ದೊಂದು ಗಳಗೆ ನೆನೆದೇನ**

**ಎದ್ದೊಂದು ಗಳಿಗೆ ನೆನೆದೇನಾ**

ಅಂತ ಹಾಡಲು ಷುರುಮಾಡಿದ ಜವರಯ್ಯ ಮೊದಲ ಹಾಡಿಗೇ ಸಿಕ್ಸರ್ ಹೊಡೆದೇ ಬಿಟ್ಟರು. ಎರಡನೇ ಹಾಡು

**ಆಲಕ್ಕೆ ಹೂವಿಲ್ಲ, ಸಾಲಕ್ಕೆ ಎಣೆಯಿಲ್ಲ, ಜಾಲಿಯ ಮರಳು ನೆರಳಲ್ಲ ಮಗಳೇ** ಹಾಡಿದರು

**ಇನ್ನೂ ಯಾಕ ಬರಲಿಲ್ಲವಾ ಹುಬ್ಬಳ್ಳಿಯವಾ**

**ವಾರದಾಗೆ ಮೂರು ಸಾರಿ ಬಂದು ಹೋಗವಾ**

ಬೇಂದ್ರೆ ಹಾಡನ್ನು ಜವರಯ್ಯ ರೊಮ್ಯಾಂಟಿಕ್ ಆಗಿಯೇ ಹಾಡಿದಾಗ ಆಗಿನ ತರುಣ ವಿದ್ಯಾರ್ಥಿಗಳೂ ಸ್ಪೆಲ್ ಬೌಂಡ್ ಆಗಿದ್ದರು. ಮುಂದಿನ ಹಾಡು

**ಪಂಚಮಿ ಹಬ್ಬ ಪಂಚಮಿ ಹಬ್ಬ ಉಳಿದಾವು**

**(ಬಂದಾವು ) ದಿನ ನಾಕ**

**ಇನ್ನೂ ಬರಲಿಲ್ಲ ಅಣ್ಣ ಕರಿಯಾಕ**

**ಇನ್ನೂ ಬರಲಿಲ್ಲ ಯಾಕ ಕರಿಯಾಕಾ**

ಜವರಯ್ಯ ಹಾಡುತ್ತಿದ್ದರೆ ಅವನ ಜೊತೆಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳೂ ಹಾಡೋಕೆ ಷುರು ಮಾಡಿದ್ದರು. ನಂತರ ತಲೆಗೆ ಸುತ್ತಿದ್ದ ಪೇಟವನ್ನೇ ಜೋಳಿಗೆ ರೀತಿ ಮಾಡಿಕೊಂಡು ಉದಾರವಾಗಿ ಕೊಡಿರಣ್ಣ ನಾನು ಬದುಕ್ಕೊತೀನಿ ಅಂತ ಅವನು ಹಾಡಿನ ರೂಪದಲ್ಲೇ ಪ್ರಕಟಿಸಿದ್ದರಿಂದ ವಿದ್ಯಾರ್ಥಿಗಳು ಮೆಚ್ಚಿ ತಕ್ಕಮಟ್ಟಿಗೆ ಅವನ ಜೋಳಿಗೆಯನ್ನು ತುಂಬಿಸಿದರು.

ಆಮೇಲೆ ಭಾಗೀರಥಿ ಕಥೆಯನ್ನು ಹಾಡಿನ ರೂಪದಲ್ಲಿ ಹಾಡಿದಾಗ ಅಲ್ಲಿದ್ದ ವಿದ್ಯಾರ್ಥಿನಿಯರು ಕಣ್ಣೀರು ಹಾಕಿದರು. ನಂತರ ಕೆಂಪೇಗೌಡನ ಕಥೆಯನ್ನು ಕಂಜರ ನುಡಿಸುತ್ತಾ ಹಾಡಿದ. ಲಕ್ಷ್ಮವ್ವ ದಿಡ್ಡಿ ಬಾಗಿಲಿಗೆ ಹಾರವಾಗುವ ಸನ್ನಿವೇಶವನ್ನು ಚನ್ನಾಗಿ ಬಣ್ಣಿಸುತ್ತಾ ಕಣ್ಣೀರಧಾರೆ ಹರಿಸುವಲ್ಲಿ ಜವರಯ್ಯ ಯಶಸ್ವಿಯಾಗಿದ್ದ. ನಂತರ ವಿದ್ಯಾರ್ಥಿಗಳನ್ನು ಎಂಗೇಜ್ ಮಾಡಿ ಒಗಟುಗಳನ್ನು ಹೇಳಿ ಅವುಗಳ ಅರ್ಥ ವಿವರಿಸಿ ಅಂತ ಕೇಳಿದ. ವಿದ್ಯಾರ್ಥಿಗಳು ಯಾರೂ ಹೇಳದಿದ್ದಾಗ ತಾನೇ ಅರ್ಥ ವಿವರಿಸಿದ. ನಂತರ ಗಾದೆಗಳನ್ನು ಹೇಳಿದ. ಅವುಗಳ ಅರ್ಥವನ್ನೂ ವಿವರಿಸಿ ಗ್ರಾಮೀಣ ಸೊಗಡಿನ ಕಲೆಯನ್ನು ಬಣ್ಣಿಸಿದ. ಅವನಿಂದಾಗಿ ಅಂದು ನಮ್ಮ ಕಾಲೇಜಿನಲ್ಲಿ ಒಂದು ಸುಂದರ, ಸುಮಧುರ, ಜಾನಪದ ಸಂಗೀತ ಸಂಜೆ ಸಂಪನ್ನಗೊಂಡಿತ್ತು. ಆನಂತರ ಜೋಗಿನ ಸಿದ್ದ ಜವರಯ್ಯನನ್ನು ನಮ್ಮ ಕಾಲೇಜಿನ ಪರಂಪರೆಯಂತೆ ಸೂಕ್ತವಾಗಿ ಸನ್ಮಾನಿಸಿದೆವು. ಜವರಯ್ಯ ಬಹಳ ಸಂತೋಷಪಟ್ಟ.

ಅಂದು ಜೋಗಿನ ಸಿದ್ಧ ಹಾಕಿದ್ದ ವೇಷಭೂಷಣ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಪಟಾಪಟಿ ದೊಗಳೆ ಚಡ್ಡಿ, ಅರ್ಧ ತೋಳಿನ ಐರನ್ ಮಾಡಿರದ ಅಂಗಿ. ಜಟಾಜೂಟಧಾರಿಯಂತೆ ಇದ್ದ ಉದ್ದನೆಯ ಕೂದಲನ್ನು ಮೇಲಕ್ಕೆ ಎತ್ತಿ ಶಿಖೆಯಂತೆ ಎತ್ತಿ ಕಟ್ಟಿದ್ದ. ಎಣ್ಣೆ ಕಾಣದೇ ತಿಂಗಳುಗಳು ಉರುಳಿರಬೇಕು. ಅವನ ನಡೆ ನುಡಿ ಎಲ್ಲವೂ ಗ್ರಾಮೀಣ ಗಂಧ ಗಾಳಿಯಂತೆ.

ತರಗತಿಯ ನಾಲ್ಕು ಗೋಡೆಗಳಿಂದಾಚೆಗೆ ಮಕ್ಕಳನ್ನು ಹೊರತಂದಿದ್ದು ಒಂದು ರೀತಿ ಬಯಲು ಶಿಕ್ಷಣದಂತಿತ್ತು. ಅವನು ಹಾಡಿದ್ದು ಬುಕ್ಕಿಷ್ ಅಲ್ಲ, ಬಾಯಿಪಾಠ ಮಾಡಿದ್ದಲ್ಲ. ಅಪ್ಪಟ ಗ್ರಾಮೀಣ ಕಲೆಗಾರಿಯ ಪರಿಣಾಮವಾಗಿ ನಾಭಿಯಿಂದ ಹೊರಡುತ್ತಿದ್ದ ಮಧುರವಾದ ಧ್ವನಿ. ಅದು ಎಲ್ಲರನ್ನೂ ರಂಜಿಸಿತು. ಇಂಥಾ ಕಾರ್ಯಕ್ರಮಗಳನ್ನು ನಮ್ಮ ಕಾಲೇಜಿನಲ್ಲಿ ಆಗಾಗ ನಡೆಸಿಕೊಂಡು ಬಂದು ನಮ್ಮ ಗ್ರಾಮೀಣ ಕಲೆಗಳಿಗೆ, ಕಲಾವಿದರಿಗೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದು ಇಂದಿಗೂ ಮರೆಯಲಾಗದ ಸಂಗತಿ.

# ಹನಿಗಳು

● ಜಿ.ಪಿ. ರಾಜರತ್ನಂ

## ಕಾಫಿ ಹೋಟೆಲು ನಿಂಗವ್ವ

ಕಾಫಿ ಹೋಟೆಲು ನಿಂಗವ್ವನನ್ನು ನೋಡಬೇಕಾದರೆ ಅವಳು ದೋಸೆ ಹುಯ್ಯುವಾಗ ನೋಡಬೇಕು. ಕರಿಯ ಕಾವಲಿ, ಗುಂಡು ಗುಂಡಗೆ ಬಿಳಿಯ ದೋಸೆ, ರುದ್ರಾಕ್ಷಿ ಹಳದಿ ಅಂಚಿನ ಸೀರೆ, ಹಣೆಗೆ ವಿಭೂತಿ, ಕೊರಳಿಗೆ ಕರಡಿಗೆ. ಊಹೂ. ಹೇಳಿ ಸುಖವಿಲ್ಲ, ನೋಡಬೇಕು.

ಒಂದು ದಿನ ವೀರಭದ್ರಯ್ಯನೆಂಬುವವನು ಆ ಹೋಟೆಲಿಗೆ ಬಂದು ದೋಸೆ ಹುಯ್ಯುತ್ತಿದ್ದ ನಿಂಗವ್ವನನ್ನು ಕಂಡ. ಕಂಡು, ದಿನವೂ ಕಾಣಲು ಬರುತ್ತಿದ್ದ. ಅವನನ್ನು ಕಂಡಾಗ ನಿಂಗವ್ವನ ಕಣ್ಣುಗಳು ಅರಳಿದ ಮಲ್ಲಿಗೆಯಲ್ಲಿ ತಿಂಗಳ ತುಣುಕನ್ನು ಇಟ್ಟಂಗಾಗುತ್ತಿದ್ದವು. ವೀರಭದ್ರಯ್ಯನಿಗೆ ಮೆಟಮಾರ್ಫಾಸಿಸ್ ಎನ್ನುವ ರೂಪ ಪರಿವರ್ತನ ವಕ್ರಿಸಿಕೊಂಡು ಕುಂಬಳಕಾಯಿಯಂತಾಗಿದ್ದವನು ಸೌತೆಯ ಕಾಯಾದ, ಸೌತೆಯ ಕಾಯಿ ಈರನಗೆರೆ ಬದನೇಕಾಯಿಯಾಯಿತು. ಬದನೇಕಾಯಿ ಹೆಂಚಿಕಡ್ಡಿಯಾಗಿ ಕೂದಲೆಳೆಯಾಯಿತು. ಕೂದಲೆಳಗೆ ಬರುಬರುತ್ತಾ ಸುರುಡಿಕೊಂಡು ಸುರುಳಿ ಸುತ್ತಿಕೊಂಡಿತು. ಆ ಸುರುಟಿಕೊಂಡ ಸುರುಳಿಯನ್ನು ಒಂದು ದಿನ ನಾಲ್ಕು ಜನ ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿರುವಾಗಲೂ ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೇ ದೋಸೆ ಹುಯ್ಯುತ್ತಿದ್ದ ನಿಂಗಮ್ಮನನ್ನು ಯಾರೋ ಕೇಳಿದರು. ಏನು ನಿಂಗವ್ವ ನಿನ್ನನ್ನು ಅಷ್ಟೊಂದು ಪ್ರೀತಿಯಿಂದ ನೋಡ್ತಿದ್ದ ವೀರಭದ್ರಯ್ಯ ಹೋಗಿಬಿಟ್ರೂವೆ ಸುಮ್ನೆ ದೋಸೆ ಹುಯ್ತಾ ಇದೀಯಲ್ಲ ಅಂದ ಕೇಳಿದರು. ಅದಕ್ಕೆ ನಿಂಗವ್ವ ದೀಪದತ್ರ ವುಳ ಬಂದು ರೆಕ್ಕೆ ಸುಟುಕೊಂಡು ಸತ್ತರೆ ದೀಪಾನೇನು ಮಾಡಬೇಕೂಂತೀಯ ಅಂದಳು.

## ಕ್ಷಮೆ

ಮೊನ್ನೆ ನಮ್ಮ ಬೆಂಗಳೂರು ರಂಗಯ್ಯೆಂಗಾರರ ಮನೆಯ ವೈದೀಕಕ್ಕೆ ಪುರೋಹಿತರು ಸಿಕ್ಕಲಿಲ್ಲವಂತೆ. ಬೆಳಗ್ಗೆ ಐದು ಗಂಟೆಯ ವೇಳೆಗೆ ಮೈಸೂರಿನಲ್ಲಿರುವ ನನಗೆ ಬೆಳಗ್ಗೆ ಐದು ಗಂಟೆಗೆ ಐದು ರೂಪಾಯಿ ಟೆಲಿಗ್ರಾಂ ಮನಿ ಆರ್ಡರ್ ಮಾಡಿ ತುರ್ತು ಬರಹೇಳಿದರು. ಪಾಪ, ಬ್ರಾಹ್ಮಣ ಕರ್ಮಭ್ರಷ್ಠನಾಗಬಾರದು ಎಂದುಕೊಂಡು ಬೆಳಗ್ಗೆ ಏಳು ಗಂಟೆಯ ರೈಲಿಗೆ ಟಿಕೇಟು ತೆಗೆದುಕೊಂಡು ಟಿಕೇಟು ಚಿಲ್ಲರೆಗಳನ್ನು ಸೊಂಟಕ್ಕೆ ಸಿಕ್ಕಿಸಿ ರೈಲು ಹತ್ತಿದೆ. ರೈಲಿನಲ್ಲಿ ಹೆಚ್ಚು ಜನ ಇರಲಿಲ್ಲ. ದರ್ಭೆಯ ಕಂತೆಯನ್ನು ಕೆಳಗಿರಿಸಿ ಹಾಗೆಯೇ ತಲೆಕೊಟ್ಟೆ. ಪುನ: ತಲೆ ಎತ್ತಿದಾಗ ಬೆಂಗಳೂರು ಬಂದಿತ್ತು.

ಟಿಕೇಟು ಕೊಡಬೇಕೆಂದು ಸೊಂಟಕ್ಕೆ ಕೈ ಹಾಕಿದರೆ ಟಿಕೇಟೇ ಇಲ್ಲ. ಸೊಂಟ, ದರ್ಭೆಯ ಕಂತೆ, ಪಂಚೆಯ ಅಂಚು, ಇರಬಹುದಾದ ಇತರ ಕಡೆಗಳನ್ನೆಲ್ಲಾ ಬೆದಕಿದೆ. ಟಿಕೇಟು ಸಿಗಲಿಲ್ಲ. ಟಿಕೇಟು ಕೇಳುವವನು ರೀ ನೀವು ಟಿಕೇಟು ಇಲ್ಲದೆ ಬಂದಿದ್ದೀರಿ

ಅಂದ. ನಾನು ಇಲ್ಲ ಮಹರಾಯ ಇದೋ ಐದು ರೂಪಾಯಿಯಲ್ಲಿ ಒಂದು ರೂಪಾಯಿ ಏಳಾಣೆ ಒಂಭತ್ತು ಕಾಸು ಜಾತಾ ಬಾಕಿ ಮೂರು ರೂಪಾಯಿ ಎಂಟಾಣೆ ಮೂರು ಕಾಸು ಇದೆ ನೋಡು ಎಂದು ಸೊಂಟದಿಂದ ಚಿಲ್ಲರೆ ತೆಗೆದು ಎಣಿಸಿ ಅಂಗೈಯಲ್ಲಿಟ್ಟು ತೋರಿಸಿದೆ. ಅವನು ಎರಡು ನಿಮಿಷ ನನ್ನನ್ನೇ ದುರದುರನೆ ನೋಡುತ್ತ ಕೈಲಿದ್ದ ದುಡ್ಡನ್ನು ಕೆದಕಿ ಎಣಿಸಿ ಕಡೆಗೆ ನೀವು ಸುಳ್ಳು ಹೇಳುವವರ ಹಾಗೆ ಕಾಣುವುದಿಲ್ಲ. ನೀವು ಹೋಗಬಹುದು ಎಂದು ದುರ್ದಾನ ತೆಗೆದುಕೊಂಡವನ ಹಾಗೆ ಸರಿದುಹೋದ.

ನನ್ನ ಆನಂದಕ್ಕೆ ಪಾರವಿಲ್ಲದೇ ಹೋಯಿತು. ಸತ್ಯಮೇವ ಜಯತೇ ನಾನೃತಂ ಎಂಬ ಸನಾತನ ಸೂಕ್ತಿ ನೆನಪಾಯಿತು. ನನ್ನ ಬ್ರಹ್ಮವರ್ಚಸ್ಸಿಗೆ ಆತ ಡಂಗಾಗಿರಬೇಕು ಎನ್ನಿಸಿತು. ಸಾಧುಗಳನ್ನು ಸತಾಯಿಸಿದವರಿಗೆ ಸ್ವರ್ಗ ಸಿಗುವದಿಲ್ಲವೆಂಬುದು ಅವನಿಗೆ ಗೊತ್ತಿರಬೇಕು ಅನಿಸಿತು. ಅಂತೂ ಮೂರ್ತಿಭವಿಸಿದ ಆ ಕ್ಷಮೆಯನ್ನೇ ಕಣ್ಣು ಮರೆಯಾಗುವವರೆಗೂ ನೋಡುತ್ತಾ ನಿಂತೆ. ಬ್ರಹ್ಮ ತೋಜೋ ಬಲಂ ಬಲಂ ಎಂದು ಒಳಗೊಳಗೆಯೇ ಹಾಡಿಕೊಂಡೆ. ಮಧ್ಯಾಹ್ನ ದ್ವಾದಶ ಪುಂಡ್ರವನ್ನು ಎಂದಿಗಿಂತ ದಪ್ಪನಾಗಿ ಹಾಕಲೇಬೇಕೆಂದು ನಿರ್ಧರಿಸಿಕೊಂಡೆ.

ಕಡೆಗೆ ತೃಪ್ತಿಯ ಉಸಿರೆಳೆದು ಅಂಗೈನಿಂದ ಚಿಲ್ಲರೆಯನ್ನು ಎಣಿಸಿ ಸೊಂಟಕ್ಕೆ ಸಿಕ್ಕಿಸಹೋದರೆ ಎರಡು ರೂಪಾಯಿ ಎಂಟಾಣೆ ಮೂರು ಕಾಸು ಮಾತ್ರ ಇದೆ. ಒಂದು ರೂಪಾಯಿನ ನಾಣ್ಯ.. ಫನ ! ಅದಕ್ಕೇನೇ ಮತ್ತೆ. ! ■



**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



'ನಿಮ್ಮ ತಂದೆ ಮನೇಲಿದ್ದಾರೆಯೇ, ಮಗು?'

'ಇಲ್ಲ – ಹೊರಗೆ ಹೋಗಿದ್ದಾರೆ'

'ಕಛೇರಿಗೆ ಹೋಗಿದ್ದಾರೆಯೇ?

'ಇಲ್ಲ'

'ಅದು ಹೇಗೆ ಗೊತ್ತು?'

'ಓಡಿ, ಓಡಿ ಹೋಗುತ್ತಿದ್ದರು'

# ಟೀಚರ್ಸ್ ಡೇ

ಈ ತಿಂಗಳ ಸಂಚಿಕೆಯನ್ನು ಉಪಾಧ್ಯಾಯರುಗಳಿಗಾಗಿ ಈ ಬಾರಿ ಮೀಸಲಿಟ್ಟಿದ್ದೇವೆ. ಯಾವುದೇ ವ್ಯಕ್ತಿಯ ಜೀವಯಾತ್ರೆಯಲ್ಲಿ ಉಪಾಧ್ಯಾಯರುಗಳ ಪಾತ್ರ ಹಿರಿದು. ಈ ಸಂಚಿಕೆಯ ಎಲ್ಲ ಲೇಖನಗಳೂ ಈ ವೃತ್ತಿಯ ವಿವಿಧ ಆಯಾಮಗಳನ್ನು ಬಿಂಬಿಸುತ್ತವೆ. ಈ ಪುಟಗಳಲ್ಲಿ, ಇಂಟರ್ನೆಟ್‌ನಿಂದ ಆಯ್ದ ಹಲವು ವ್ಯಂಗ್ಯಚಿತ್ರಗಳನ್ನು ಪರಿಚಯಿಸಿದ್ದೇವೆ. ಸಂಚಿಕೆ ನಿಮಗೆ ಮುದ ನೀಡಲೆಂದು ನಮ್ಮ ಹಾರೈಕೆ.





" ಶ್ರೀ ಗೂಗಲ್ ಗುರುಭ್ಯೋನ್ನಮಃ "



" ನಿಮ್ಮ ಮಗು ಕೆಟ್ಟೋನೇನೂ ಅಲ್ಲ.
ದುಷ್ಟತನದ ಮಿತಿನ ಮೀರಿದ್ದಾನೆ ಅಷ್ಟೇ !"



" ನಂಗೊತ್ತಿತ್ತು ಪರಿಸ್ಥಿತಿ ಹೀಗಾಗುತ್ತೇ ಅಂತ !"




" ಮೇಡಂ, ಇದನ್ನ ಇನ್ನೂ ಕಡಿಮೆ
ಮಾಡಿದ್ರೆ ನಿಮಗೆ ಓದೋಕ್ಕೇ ಆಗೋದಿಲ್ಲ "

# ವೃತ್ತಿ ಜೀವನದ ವಿನೋದ ಪ್ರಸಂಗಗಳು

● ಪ್ರಭುಪ್ರಸಾದ್

ಆಗ ತಾನೇ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ್ದೆ. ಆದರೆ ನೋಡಲು ನಾನೂ ಒಬ್ಬ ವಿದ್ಯಾರ್ಥಿಯಂತೆ ಕಾಣುತ್ತಿದ್ದೆ. ವಿದ್ಯಾರ್ಥಿಗಳು ನೋಡಿದ ತಕ್ಷಣ ಹೊಸ ಲೆಕ್ಚರರ್ ಬಂದಿದಾರೆ ಎನಿಸುವ ಹಾಗೆ ಸೂಟು ಬೂಟು ಟೈ ಹಾಕಿಕೊಂಡು ಹೋಗುತ್ತಿದ್ದೆ. ಕೆಲವು ವಿದ್ಯಾರ್ಥಿಗಳು ಮೈ ಕಟ್ಟಿನಲ್ಲಿ ನನಗಿಂತ ಜೋರಾಗಿದ್ದರು. ಹುಡುಗ ಮೇಷ್ಟ್ರು ಎಂದು ಚೇಷ್ಟೆ ಗಲಾಟೆಗೆ ಆಸ್ಪದವಾಗಬಾರದು ಎಂದು ಒಳಗೊಳಗೇ ಭಯವಾಗುತ್ತಿದ್ದರೂ ಗತ್ತು ಗೈರತ್ತು ಮೆರೆಸುತ್ತಿದ್ದೆ. ಹೊಸದಾಗಿ ಕೆಲಸಕ್ಕೆ ಸೇರಿದ ಲೆಕ್ಚರರ್ ಕೆಲಸ ಎಂದರೆ ದಾಂಢಿಗರು ಇರುವ ಕ್ಲಾಸನ್ನು ಹತೋಟಿಗೆ ತಂದುಕೊಳ್ಳುವುದು. ಅದಕ್ಕಾಗಿ ಮೊದಲ ಕ್ಲಾಸಿನಲ್ಲಿಯೇ ಹುಡುಗರು ದಿಗಿಲು ಬೀಳುವಂತಹ ಕ್ಲಿಷ್ಟವಾದ ಇಂಗ್ಲಿಷ್ ಪದಗಳನ್ನು ಬಳಸಿ ಉಪನ್ಯಾಸ ಕೊಟ್ಟೆ. ಸುದ್ದಿ ಕೇಳಿದ ಇತರ ಕ್ಲಾಸುಗಳು ಹದ್ದುಬಸ್ತಿಗೆ ಬಂದವು

ಹಾಗೊಂದು ದಿನ ಪಾಠ ಮಾಡುತ್ತಿರುವಾಗ ಹಿಂದಿನ ಬೆಂಚಿನಲ್ಲಿ ಕೂತಿದ್ದ ವಿದ್ಯಾರ್ಥಿ ನನ್ನ ಪಾಠದ ಕಡೆ ಗಮನ ಕೊಡದೇ ಬೇರೆ ಯಾವುದೂ ಪುಸ್ತಕವನ್ನು ಓದುತ್ತಿರುವ ಅನುಮಾನ ಬಂದಿತು. ನಾನು ಪಾಠ ನಿಲ್ಲಿಸಿ ಅವನ ಹತ್ತಿರ ಹೋದೆ. ಅನುಮಾನ ನಿಜವಾಗಿತ್ತು, ಕೋಪ ಬಂತು. ಅವನನ್ನು ಇಂಗ್ಲಿಷಿನಲ್ಲೇ ಚನ್ನಾಗಿ ಬೈದೆ. ಅವನು ಸುಮ್ಮನೆ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ. ಆಗ ನಾನು ನಿನ್ನ ಸಹಪಾಠಿಗಳೆದುರಿಗೆ ನಾನು ಬೈಯುತ್ತಿದ್ದರೂ ಕೇಳಿಸಿಕೊಳ್ಳುತ್ತಾ ಸುಮ್ಮನೆ ನಿಂತಿದ್ದೀಯಲ್ಲ ಅಂತ ಕನ್ನಡದಲ್ಲಿ ಕೇಳಿದೆ. ಆಗ ಅವನು ಸರ್ ಈಗ ನೀವು ಕನ್ನಡದಲ್ಲಿ ಹೇಳಿದಿರಲ್ಲ ಆಗಲೇ ನನಗೆ ಗೊತ್ತಾಗಿದ್ದು ನೀವು ನನಗೆ ಬೈದಿರಿ ಅಂತ ಆಗಲೇ ನೀವು ಇಂಗ್ಲಿಷಿನಲ್ಲಿ ಅದೇನೋ ಅಂದಿದ್ದು ನನ್ನನ್ನು ಬೈದಿರಿ ಅಂತ ನನಗೆ ತಿಳಿಯಲೇ ಇಲ್ಲ ಅಂದ. ಇಡೀ ಕ್ಲಾಸು ನಗೆಗಡಲಲ್ಲಿ ಮುಳುಗಿತು. ನನಗೂ ನಗು ತಡೆಯಲಾಗಲಿಲ್ಲ. ಅದಕ್ಕೆ ನಾನು ಹೋಗ್ಲಿ ಬಿಡು ಈಗ ಪಾಠವನ್ನು ಗಮನವಿಟ್ಟು ಕೇಳು. ಮುಂದೆ ನಿನ್ನನ್ನು ಬೈಯುವ ಪ್ರಸಂಗ ಬಂದರೆ ಕನ್ನಡದಲ್ಲೇ ಬೈಯುತ್ತೀನಿ ಅಂದೆ. ಮತ್ತೆ ಕ್ಲಾಸಿನಲ್ಲಿ ನಗುವಿನ ಅಬ್ಬರ ಕೇಳಿಸಿತು.

* * * *

ತುಮಕೂರಿನ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಆಗಿದ್ದಾಗ ನಡೆದ ಪ್ರಸಂಗ. ವಿದ್ಯಾರ್ಥಿಗಳು ವರ್ಷದಲ್ಲಿ ಇಂತಿಷ್ಟು ದಿನ ಕಾಲೇಜಿಗೆ ಹಾಜರಾಗಿರಬೇಕು ಎನ್ನುವ ನಿಯಮವಿದೆ. 60% ಹಾಜರಾತಿ ಇದ್ದರೆ ಪ್ರಿನ್ಸಿಪಾಲ್ ಅವನನ್ನು ಮನ್ನಿಸಿದ್ದೇನೆ ಎಂದು ಯೂನಿವರ್ಸಿಟಿಗೆ ಶಿಫಾರಸು ಮಾಡಿದರೆ ಅದನ್ನು ಸಾಮಾನ್ಯವಾಗಿ ಮಂಜೂರು ಮಾಡುತ್ತಾರೆ. ಆಗ ಅಂತಹ ವಿದ್ಯಾರ್ಥಿ ಪರೀಕ್ಷೆಗೆ ಕೂರಬಹುದು. ಈ ರಿಯಾಯಿತಿ ಪಡೆಯಲು ಶುಲ್ಕವಿರುತ್ತದೆ. ಹಾಜರಾತಿ ತುಂಬಾ ಕಡಿಮೆ ಇದ್ದರೆ ಪ್ರಿನ್ಸಿಪಾಲ್ ಮಂಜೂರಾತಿಗೂ ಬೆಲೆಯಿಲ್ಲ. ಶುಲ್ಕ ಕಟ್ಟಿದರೂ ಪರೀಕ್ಷೆ ಬರೆಯಲು ಅನುಮತಿ ಕೊಡುವುದಿಲ್ಲ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ಮೂರು ಮೂರು ತಿಂಗಳಿಗೆ ಹಾಜರಾತಿ ಕಡಿಮೆ

ಬಂದ ವಿದ್ಯಾರ್ಥಿಗಳಿಗೆ ಎಚ್ಚರಿಕೆ ಕೊಟ್ಟು ನೋಟೀಸ್ ಬೋರ್ಡಿನಲ್ಲಿ ಹಾಕಿಸುತ್ತಿದ್ದೆ. ಹಾಜರಾತಿ ಕಡಿಮೆಯ ಅಂಚಿನಲ್ಲಿರುವ ವಿದ್ಯಾರ್ಥಿಗಳು ಸರಿಯಾದ ಹಾಜರಾತಿ ಪಡೆಯಲು ಕ್ಲಾಸಿಗೆ ಚಕ್ಕರ್ ಹಾಕದೇ ಬರಲಿ ಎಂದು.

ವರ್ಷದ ಪಾಠದ ತರಗತಿಗಳು ಮುಗಿದ ಮೇಲೆ ನನ್ನ ಛೇಂಬರ್‌ಗೆ ಒಬ್ಬ ಮಹಾಶಯರು ತಮ್ಮ ಮಗನನ್ನು ( ನಮ್ಮ ಕಾಲೇಜಿನ ವಿದ್ಯಾರ್ಥಿ ) ಕರೆದುಕೊಂಡು ಬಂದರು. ಅವರು ಮಾಡಿದ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಮಾಡಿ ಕೂತ್ಕೊಳ್ಳಿ ಏನು ಬಂದದ್ದು ಅಂತ ಕೇಳಿದೆ. ಅವರ ಮಗ ಮಾಫಿ ಮಾಡಲಾರದಷ್ಟು ಹಾಜರಾತಿ ಕೊರತೆಯಲ್ಲಿದ್ದ. ಆದರೆ ಆ ಮಹಾಶಯರು ಅದೇನೂ ಬಹಳ ದೊಡ್ಡ ಅಪರಾಧವಲ್ಲ ಎನ್ನುವ ಧೋರಣೆಯಲ್ಲಿ ಸರ್ ಇವನು ನನ್ನ ಮಗ, ಇವನ ಹಾಜರಾತಿ ಸ್ವಲ್ಪ ಕಡಿಮೆ ಇದೆ. ಅದನ್ನು ಮನ್ನಿಸಲು ಯೂನಿವರ್ಸಿಟಿಗೆ ನೀವು ಶಿಫಾರಸು ಮಾಡಿ ಎಂದರು. ನಾನು ಆ ವಿದ್ಯಾರ್ಥಿಯನ್ನು ನೀನು ಸ್ವಲ್ಪ ಹೊರಗೆ ಇರಪ್ಪಾ ಎಂದು ಕಳಿಸಿದೆ.

ನಮ್ಮ ಕಾಲೇಜಿನಲ್ಲಿ ಕಾಲಕಾಲಕ್ಕೆ ಹಾಜರಾತಿ ಕೊರತೆಯನ್ನು ತಿದ್ದಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡುತ್ತೇವೆ ಎಂದು ನೋಟೀಸ್ ಬೋರ್ಡಿನಲ್ಲಿ ಎಚ್ಚರಿಕೆ ಕೊಡುತ್ತಿರುವ ವಿಚಾರ ಹೇಳಿದೆ. ಅದಕ್ಕೆ ಅವರು ಹಾಜರಾತಿ ಕೊರತೆ ದೊಡ್ಡ ವಿಷಯವೇ ಅಲ್ಲ ಎನ್ನುವಂತೆ ಸರ್, ನನ್ನ ಮಗ ಎಷ್ಟೋ ವಾಸಿ, ನಾನು ಕಾಲೇಜಿನಲ್ಲಿ ಓದುವಾಗ ಬರೀ 40% ಹಾಜರಾತಿ ಇರುತ್ತಿತ್ತು. ಆದರೂ ನಾನು ಎಂ.ಎ. ಪಾಸು ಮಾಡಿ ಈಗ ಒಳ್ಳೆ ಉದ್ಯೋಗದಲ್ಲಿದ್ದೇನೆ ಅಂದರು. ಆಗ ನಾನು. ಓ ಇದು ವಂಶಪಾರಂಪರ್ಯವಾದ ಕಾಹಿಲೆನಾ ಅಂದರೆ. ಅವರೂ ನಕ್ಕರು ನಾನೂ ನಕ್ಕೆ.

* * * * * *

ಮೈಸೂರು ಇಂಟರ್‌ಮೀಡಿಯಟ್ ಕಾಲೇಜು, ದಾವಣಗರೆ. ಕೋ ಎಜುಕೇಷನ್ ಕಾಲೇಜು. ಒಂದೊಂದು ತರಗತಿಯಲ್ಲಿ 10– 15 ವಿದ್ಯಾರ್ಥಿನಿಯರು ಮಾತ್ರ ಇರುತ್ತಿದ್ದರು. ಉಪಾಧ್ಯಾಯರು ಕ್ಲಾಸಿಗೆ ಬರುವ ತನಕ ವಿದ್ಯಾರ್ಥಿನಿಯರು ಕ್ಲಾಸಿನ ಹೊರಗೇ ಇರುತ್ತಿದ್ದು ಉಪಾಧ್ಯಾಯರ ಜೊತೆಯೇ ಕ್ಲಾಸಿನೊಳಗೆ ಬರುತ್ತಿದ್ದರು. ವಿದ್ಯಾರ್ಥಿನಿಯರ ಪ್ರವೇಶ ಆಗುತ್ತಿದ್ದಂತೆ ವಿದ್ಯಾರ್ಥಿಗಳ ಗಮನವೆಲ್ಲಾ ಅವರ ಕಡೆಗೇನೇ. ಯಾಂತ್ರಿಕವಾಗಿ ಉಪಾಧ್ಯಾಯರಿಗೆ ಗೌರವ ಸೂಚಿಸುವಂತೆ ಎದ್ದು ನಿಲ್ಲುತ್ತಿದ್ದರು. ಆ ನಂತರ ಹಾಜರಾತಿ ತೆಗೆದುಕೊಳ್ಳುವಾಗ ಪ್ರೆಸೆಂಟ್ ಸರ್ ಎಂದು ಹೇಳುತ್ತಿದ್ದರೂ ಗಮನವೆಲ್ಲಾ ಅತ್ತ ಕಡೆಗೇ ಇರುತ್ತಿತ್ತು. ಪಾಠದ ಮಧ್ಯೆಯೂ ಕೆಲವು ವಿದ್ಯಾರ್ಥಿಗಳ ಗಮನ ಪಾಠದ ಕಡೆಗೆ ಇರುತ್ತಿಲ್ಲವಾದ್ದರಿಂದ ನಾನು ಕೂಡಲೇ ಉಪನ್ಯಾಸವನ್ನು ನಿಲ್ಲಿಸಿ ನಿಮ್ಮ ಗಮನವೆಲ್ಲಾ ಪಾಠದ ಕಡೆಗಿರಬೇಕು. ವಿದ್ಯಾರ್ಥಿನಿಯರು ಎಂದರೆ ಅವರೆಲ್ಲಾ ನಿಮ್ಮ ಅಕ್ಕ ತಂಗಿಯರ ಹಾಗೆ ಎಂದೆ. ಅದಕ್ಕೆ ಒಬ್ಬ ಹುಡುಗ ಸರಿ ಸರ್, ನಾನು ಮದುವೆಯಾಗುವ ಹುಡುಗಿಯನ್ನು ಬಿಟ್ಟು ಮಿಕ್ಕವರನ್ನೆಲ್ಲಾ ಅಕ್ಕ ತಂಗಿಯರಂತೆಯೇ ಕಾಣುತ್ತೇನೆ ಎಂದ. ನನಗೆ ಅದು ಸರಿ ಎನಿಸಿತು. ನಾನು ಬಹಳ ಘಾಟಿ ಕಣೋ ನೀನು ಈ ವಯಸ್ಸಿಗೇ ಇಷ್ಟು ತಲೆ ಓಡಿಸುತ್ತೀಯಲ್ಲ. ನಿನ್ನ ಮದುವೆ ಇನ್ನೂ ಬಹಳ ಕಾಲ ಇದೆ ಎಂದದಕ್ಕೆ ಅವನು ಏನಿಲ್ಲ ಸರ್ ಬಿ.ಎ. ಪರೀಕ್ಷೆ ಮುಗಿದೊಡನೇ ನಮ್ಮಮ್ಮ ನನಗೆ ಮದುವೆ ಮಾಡಿಬಿಡ್ತಾರೆ ಅಂದ. ನನಗೆ

ನಗು ತಡೆಯಲಾಗಲಿಲ್ಲ. ನಿನ್ನನ್ನು ನೋಡಿದರೆ ನಿಮ್ಮಮ್ಮ ನಿರ್ಧಾರ ಮಾಡಿರೋದೇ ಸರಿ ಎನಿಸುತ್ತಿದೆ ಎಂದಾಗ ನನಗೂ ನಗು ಬಂತು ಇಡೀ ಕ್ಲಾಸೂ ನಕ್ಕಿತು. 60 ವರ್ಷಗಳ ಆ ಪ್ರಸಂಗ ನೆನೆದರೆ ಇಂದಿಗೂ ನಗು ಬರುತ್ತದೆ. ಆದರೆ ಆ ಕಾಲವೇ ಬೇರೆ ಈ ಕಾಲವೇ ಬೇರೆ.

ಈ ಕಾಲದ ವೈಖರಿಯನ್ನು ವಿವರಿಸಲೇಬೇಕಾಗಿಲ್ಲ. ಯಾವ ಕಾಲೇಜಿನ ಹೊರಗೆ ನೋಡಿದರೂ ಕಿಶೋರ ವಯಸ್ಸಿನ ಹುಡುಗ ಹುಡುಗಿಯರು ಪ್ರಪಂಚ ಮರೆತು ತಮ್ಮ ಲೋಕದಲ್ಲಿ ವಿಹರಿಸುತ್ತಿರುತ್ತಾರೆ. ಕಾಲಾಯ ತಸ್ಮೈ ನಮ: ಎನ್ನಬೇಕಷ್ಟೆ. ■

## ಎ.ಪಿ..ಜೆ ಅಬ್ದುಲ್ ಕಲಾಂ ಅವರ ನುಡಿಮುತ್ತುಗಳು

**ಉಪಾಧ್ಯಾಯ ವೃತ್ತಿ ಒಂದು ಉನ್ನತ ಹುದ್ದೆ. ಅದು ಮಕ್ಕಳ ಬುದ್ಧಿವಂತಿಕೆಯನ್ನು ಅರೆದು, ಅದಕ್ಕೊಂದು ರೂಪ ಕೊಟ್ಟು ಅವರನ್ನು ಭವಿಷ್ಯದ ಸತ್ಪ್ರಜೆಗಳನ್ನಾಗಿ ಮಾಡುವುದು. ನನ್ನನ್ನು ಯಾರಾದರೂ ಒಬ್ಬ ಸಮರ್ಥ ಅಧ್ಯಾಪಕನೆಂದು ನೆನೆಯುವುದಾದರೆ ಅದಕ್ಕಿಂತ ದೊಡ್ಡದಾದ ಉಡುಗೊರೆ ನನಗೆ ಯಾವುದೂ ಇಲ್ಲ**

---

**ವಿದ್ಯಾರ್ಥಿಗಳಿಗೆ ಇರಬೇಕಾದ ಮೂಲಭೂತವಾದ ಗುಣ ಎಂದರೆ ಪ್ರಶ್ನೆ ಮಾಡುವುದು. ವಿದ್ಯಾರ್ಥಿಗಳು ನಿರಂತರವಾಗಿ ಪ್ರಶ್ನೆ ಮಾಡಿ ಅದಕ್ಕೆ ಉತ್ತರ ಪಡೆದು ಜ್ಞಾನವಂತರಾಗಲಿ**

---

**ಯಾವುದೇ ರಾಷ್ಟ್ರ ಲಂಚಮುಕ್ತವಾಗಿ ಉತ್ತಮ ಮನಸುಗಳ ಸಂಗಮ ಎನಿಸಿಕೊಳ್ಳಬೇಕಾದರೆ, ಮೂರು ಜನ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ನನಗನಿಸುತ್ತದೆ. ಅವರು ತಂದೆ, ತಾಯಿ ಮತ್ತು ಉಪಾಧ್ಯಾಯರು**

---

**ಸೃಜನಾತ್ಮಕ ಮನೋಭಾವ ಯಶಸ್ಸಿನ ಸೂತ್ರಗಳಲ್ಲೊಂದು. ಪ್ರೈಮರಿ ಶಾಲೆಯಿಂದಲೇ ಮಕ್ಕಳಲ್ಲಿ ಸೃಜನಾತ್ಮಕ ಮನೋಭಾವ ಬೆಳೆಸುವುದು ಅಧ್ಯಾಪಕರ ಕರ್ತವ್ಯ**

---

**ಕನಸು ಎಂದರೆ ಅದು ನೀವು ನಿದ್ದೆ ಮಾಡುತ್ತಿರುವಾಗ ಕಾಣುವಂಥದಲ್ಲ. ಕನಸು ಎಂದರೆ ಅದು ನಿಮ್ಮನ್ನು ನಿದ್ದೆ ಮಾಡಲು ಬಿಡಬಾರದು**

# ಮೆಲುಕು

● **ಸಂಪಟೂರು ವಿಶ್ವನಾಥ್**

ಆಧ್ಯಾತ್ಮ, ಅಧ್ಯಯನ, ಅಧ್ಯಾಪನೆ ಮತ್ತು ಸರಳ ಜೀವನಗಳನ್ನು ಆಚರಿಸುತ್ತಿದ್ದ ಕುಟುಂಬದಲ್ಲಿ ಹುಟ್ಟಿದ್ದರಿಂದಲೋ ಏನೋ ಪದವಿಗಳನ್ನು ಪಡೆದ ನಂತರ ಶಿಕ್ಷಕರ ತರಪೇತಿ ಪಡೆದು ಶಿಕ್ಷಕನಾಗಿರಲು ನಿರ್ಧರಿಸಿದೆ. ಪ್ರಸಿದ್ಧವಾದ ಅನುದಾನಿತ ಶಾಲೆಯನ್ನು 1960ರಲ್ಲಿ ಸೇರಿಕೊಂಡೆ. ಸುಮಾರು 36 ವರ್ಷ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠ ಹೇಳಿದೆ. ನಾನು ಅಂದು ಕಾರ್ಯಕ್ರಮಕ್ಕೆ ಸಿದ್ಧನಾಗುತ್ತಿದ್ದಾಗ ಮಡದಿ ಕಾಫಿ ತಂದುಕೊಟ್ಟು ಎಲ್ಲಿಗೋ ಸವಾರಿ ಅಂತ ಕೇಳಿದಳು. ನನ್ನ ಹಳೇ ಸ್ಕೂಲಿನಲ್ಲಿ ಶಿಕ್ಷಕರ ದಿನಾಚರಣೆ ಅಂದಾಗ ಅವಳು ಓಹೋ ನೀವೇನಾ ಚೀಪ್ ಗೆಸ್ಟು ಅಂತ ಕೇಳಿದಳು. ಚೀಪ್ ಅಲ್ಲ ಕಣೆ ಚೀಫ್ ಗೆಸ್ಟು ಅಂತ ಕಾಫಿ ಹೀರಲಾರಂಭಿಸಿದಾಗ ನನ್ನ ಮೇಷ್ಟ್ರ ಜೀವನದ ಫ್ಲಾಷ್ ಬ್ಯಾಕ್ ಆರಂಭವಾಯಿತು. ಎಂ.ಇ.ಎಸ್. ಕಾಲೇಜಿನ ಇಬ್ಬರು ಪ್ರಾಧ್ಯಾಪಕರ ಒಂದೊಂದು ಮಾತು ನನ್ನ ಮೇಲೆ ಪರಿಣಾಮ ಬೀರಿತು. ಸೇ ವಾಟ್ ಯೂ ಮೀನ್ ಅಂಡ್ ಮೀನ್ ವಾಟ್ ಯು ಸೇ ಮತ್ತು ಎನ್ ಆವರೇಜ್ ಟೀಚರ್ ಟೀಚಸ್ಸ ದಿ ಟೆಕ್ಸ್ಟ್ ಬುಕ್, ಬಟ್ ಅ ಗುಡ್ ಟೀಚರ್ ಇನ್ಸ್‌ಪೈರ್ಸ್ ಚಿಲ್ಡ್ರನ್. ಈ ಎರಡೂ ಧ್ಯೇಯವಾಕ್ಯಗಳು ನನ್ನ ಮೇಷ್ಟ್ರ ಜೀವನದ ಗುರಿಗಳಾದವು. ನನ್ನ ಮೊದಲನೆಯ ಕ್ಲಾಸಿನಲ್ಲೇ ನನಗೆ ರಸಭಂಗವಾಯಿತು. ಬಹಳ ಬುದ್ಧಿವಂತರ ಕ್ಲಾಸು ಎಂದು ಇತರರು ಹೇಳಿದ್ದ ಕ್ಲಾಸಿಗೆ ನಾನು ಎಂಟರ್ ಆಗುತ್ತಿದ್ದಂತೆ ವಿದ್ಯಾರ್ಥಿಗಳ ಕಡೆ ನೋಡಿ ಗುಡ್ ಮಾರ್ನಿಂಗ್, ಈಗ ಇಂಗ್ಲಿಷ್ ಕವನವೊಂದನ್ನು ಓದೋಣ ಅಂದೆ. ಬೋರ್ಡ್ ಕಡೆ ತಿರುಗಿ ಲೀಡ್ ಕೈಂಡ್ಲೀ ಲೈಟ್ ಅಂತ ಬರೆದೆ. ಮೂರನೇ ಬೆಂಚಿನಲ್ಲಿ ಕೂತಿದ್ದ ವಿದ್ಯಾರ್ಥಿಯೊಬ್ಬ ಪಕ್ಕದಲ್ಲಿದ್ದವನ ಕಡೆ ಬಾಗಿ ಪಿಸಪಿಸ ಅಂತ ಇನ್ನೂ ಹೊಸಬರು., ಚಿಕ್ಕವ್ರು, ಜಾಸ್ತಿ ಏನೂ ಪ್ರಶ್ನೆ ಕೇಳೋದು ಬೇಡ ಪಾಪ ಅಂದ. ಇದನ್ನು ಕೇಳಿಸಿಕೊಂಡ ನನಗೆ ಬದುಕಿದೆಯಾ ಬಡಜೀವವೇ ಅನಿಸಿತು. ತರಗತಿಯ ಇನ್ನೊಂದು ಪಕ್ಕದಲ್ಲಿದ್ದ ವಿದ್ಯಾರ್ಥಿಗಳಲ್ಲೊಬ್ಬ ಕೈ ಎತ್ತಿದ. ಏನು ಬೇಕು ಅಂತ ಕೇಳಿದೆ. ನಿಮ್ಮ ಹೆಸರೇನು ಸರ್ ಅಂತ ಕೇಳಿದ. ನನ್ನ ಹೆಸರನ್ನು ಹೇಳಿದೆ. ಅವರೆಲ್ಲಾ ಎಸ್. ವಿ, ಎಸ್. ವಿ ಅಂದರು. ಅಂದಿನಿಂದ ನಾನು ಎಸ್. ವಿ. ಸರ್ ಆದೆ. ಶಾಲಾ ಕಾಲೇಜುಗಳಲ್ಲಿ ಪಾಠ ಮಾಡುವ ಶಿಕ್ಷಕ ಶಿಕ್ಷಕಿಯರು ಕೇವಲ ಎರಡು ಅಥವಾ ಮೂರು ಅಕ್ಷರಗಳಿಂದಲೇ ಖ್ಯಾತರಾಗಿರುತ್ತಾರೆ.

ಮಾರನೆಯ ದಿನ ಬೆಳಗ್ಗೆ ಪ್ರಾರ್ಥನೆಯ ಸಮಯದಲ್ಲಿ ಎದುರಿಗೆ ಹತ್ತು ಸಾಲುಗಳಲ್ಲಿ ನಿಂತಿದ್ದ ಸುಮಾರು ಐದುನೂರು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ನನ್ನನ್ನು ಪರಿಚಯಿಸುತ್ತಾ ಇವರು ಬೇರೆ ಬೇರೆ ಕ್ಲಾಸುಗಳಿಗೆ ಇಂಗ್ಲಿಷ್, ಕನ್ನಡ, ವಿಜ್ಞಾನ ಮತ್ತು ನಾಟಕ ಶಾಸ್ತ್ರಗಳ ಕ್ಲಾಸು ತೆಗೆದುಕೊಳ್ಳುತ್ತಾರೆ. ನಿಮಗೆ ಏನೇ ಅನುಮಾನ ಬಂದರೂ ಧೈರ್ಯವಾಗಿ ಕೇಳಬಹುದು ಅಂದರು ಹೆಡ್ ಮೇಷ್ಟ್ರು. ಹುಡುಗರ ಮುಖಭಾವದಲ್ಲಿದ್ದ ಭಾವವನ್ನು ನೋಡಿ ನನ್ನಲ್ಲಿದ್ದ ಹೆದರಿಕೆ ಕಡಿಮೆಯಾಯಿತು. ಟೀಚರ್ಸ್ ರೂಮಿನಲ್ಲಿ ನನ್ನ ಟೈಂ ಟೇಬಲ್ ಕೊಟ್ಟರು. ಇತರ ಶಿಕ್ಷಕ ಶಿಕ್ಷಕಿಯರನ್ನು ಮತ್ತು ಕಾರ್ಯಾಲಯದವರನ್ನು ಪರಿಚಯಿಸಿದರು. ನನ್ನ ಅದೃಷ್ಟ ಎನ್ನುವಂತೆ ಒಬ್ಬ ಶಿಕ್ಷಕ ನಮ್ಮ ಮನೆಯ ಸಮೀಪದಲ್ಲೇ ಇದ್ದವರು. ಅವರದು ಹಾಸ್ಯ ಪ್ರವೃತ್ತಿ. ಹುಡುಗರಿಗೆ ಹಾಸ್ಯ ಪ್ರಸಂಗಗಳನ್ನು ಹೇಳಿ, ಹೇಳಿಸಿ

ಜನಪ್ರಿಯರಾಗಿದ್ದರು. ಆ ದಿನ ಸಂಜೆ ಮನೆಗೆ ಬರುವಾಗ ಇಂಗ್ಲಿಷ್ ಚನ್ನಾಗಿ ಬರದೆ ಇದ್ರೆ ತಪ್ಪೇನಿಲ್ಲ. ಆದರೆ ತಪ್ಪು ತಪ್ಪಾಗಿ ಮಾತಾಡಿ ನಗೆಪಾಟಲಾಗಬಾರದು ಅಲ್ವಾ ಸರ್ ಅಂದರು. ಹೌದು ಯಾಕೆ ಇದನ್ನು ಹೇಳುತ್ತಿದ್ದೀರಿ ಅಂತ ಕೇಳಿದೆ. ಅದಕ್ಕೆ ಅವರು ನಿಮಗೆ ಮೊದಲು ಇದ್ದ ಮೇಷ್ಟ್ರು ತರಗತಿಯ ಹೊರಗೆ ನಿಂತಿದ್ದ ಹುಡುಗನನ್ನು ಯೂ ಔಟ್ ಸ್ಟಾಂಡಿಂಗ್ ಬಾಯ್ ಯೂ ಕಮಿನ್ ಅಂದರು. ವಿದ್ಯಾರ್ಥಿಗಳು ಕಿಸಕ್ಕಂತ ನಕ್ಕಿದ್ದು ಗೊತ್ತಾಗಲೇ ಇಲ್ಲ ಪಾಪ. ತಪ್ಪು ಇಂಗ್ಲಿಷ್ ಮಾತಾಡಿದ್ದ ಮೇಷ್ಟ್ರಿಗೆ ಯಾರೋ ವಿದ್ಯಾರ್ಥಿಯ ಮೇಲೆ ಸಿಟ್ಟು ಬಂದಿತ್ತು. ಅವರು ಐ ಸೇ, ಯೂ ಗೆಟ್ ಔಟ್, ಆರ್ ಐ ವಿಲ್ ಗೆಟ್ ಔಟ್. ಹುಡುಗರು ನಕ್ಕು ಸುಮ್ಮನಾದರು.

ಅದೇ ತರಗತಿಗೆ ಪಾಠ ಮಾಡುವಾಗ ನಾನು ಇಂಗ್ಲಿಷ್ ಛಾನಲ್ ಬಗ್ಗೆ ಏನು ಗೊತ್ತು ಅಂತ ಕೇಳಿದೆ. ಕಡೆಯ ಬೆಂಚಿನ ಹುಡುಗ ಸರ್ ಆ ಛಾನಲ್ ನಮ್ಮ ಟಿವಿಯಲ್ಲಿ ಬರಲ್ಲ ಅಂದ. ನಾನು ಕೇಳಿದ್ದು ಇಂಗ್ಲಿಷ್ ಕಡಲ್ಗಾಲುವೆ ಬಗ್ಗೆ ಅಂತ ಇನ್ನಷ್ಟು ವಿವರ ಕೊಟ್ಟೆ. ಮೇಷ್ಟ್ರುಗಳನ್ನು ಪೇಚಿಗೆ ಈಡುಮಾಡಬೇಕೂಂತ ನಿರ್ಧರಿಸಿದಾಗ ವಿದ್ಯಾರ್ಥಿಗಳು ಅಸಾಧಾರಣ ಬಧ್ಧಿವಂತಿಕೆಯನ್ನು ತೋರಿಸುತ್ತಾರೆ. ರಸಾಯನದ ಶಿಕ್ಷಕಿ ಸಾಬೂನು ಮತ್ತು ಮಾರ್ಜಕಗಳ ಪಾಠ ಆರಂಭಿಸಬೇಕಾಗಿತ್ತು. ಹುಡುಗರ ಬಾಯಿಂದ ಸೋಪ್ ಅನ್ನುವ ಪದ ಹೇಳಿಸಲು ಪೀಠಿಕೆ ಹಾಕಿದರು.

ಬೆಳಗಾಗೆದ್ದು ನೀವೆಲ್ಲಾ ಮುಖ ತೊಳೆದುಕೊಳ್ತೀರಿ ಅಲ್ವಾ

ಹೌದು ಮಿಸ್

ನಿಮ್ಮ ಮುಖ ಕ್ಲೀನ್ ಮಾಡಿಕೊಳ್ಳಲು ಏನು ಉಪಯೋಗಿಸುತ್ತೀರಿ

ಐವಲ್ಲು

ಸ್ವಲ್ಪ ನಿರಾಸೆಯಿಂದ ಮತ್ತೆ ಶಿಕ್ಷಕಿ ಸರಿ ನಿಮ್ಮ ಮುಖ ಕ್ಲೀನಾಗಿದೆ ಅಂತ ನಿಮಗೆ ಹೇಗೆ ಗೊತ್ತಾಗುತ್ತೆ ಅಂತ ಕೇಳಿದರು ಟವಲನ್ನು ನೋಡ್ತೀನಿ. ಅದು ಗಲೀಜಾಗಿದ್ದರೆ ಮುಖ ಕ್ಲೀನಾಗಿದೆ ಅಂತ ಅಲ್ವಾ ಮಿಸ್ ಅಂದ

ತಮ್ಮ ಸೋಲನ್ನು ಒಪ್ಪಿಕೊಳ್ಳದೇ ಶಿಕ್ಷಕಿ ಕೆಲವರು ಸಾಬೂನನ್ನು ಉಪಯೋಗಿಸುತ್ತಾರೆ. ಇವತ್ತು ಸಾಬೂನಿನ ಬಗೆಗೆ ತಿಳಿದುಕೊಳ್ಳೋಣ ಅಂತ ಪಾಠ ಆರಂಭಿಸಿದರು.

ಗಣಿತದ ಕ್ಲಾಸಿನಲ್ಲೂ ಇಂಥದೇ ಒಂದು ಪ್ರಸಂಗ ನಡೆಯಿತು. ಯಾರೋ ಲಕ್ಷ್ಮೀಪತಿ ನಿನ್ನ ಹೋಂ ವರ್ಕ್‌ನಲ್ಲಿ 10 ಲೆಕ್ಕದಲ್ಲಿ 9 ತಪ್ಪು. ಆದರೆ ಕ್ಲಾಸ್‌ನಲ್ಲಿ ಸರಿಯಾಗಿ ಮಾಡಿದ್ದೆ ಅಂತ ಕೇಳಿದ್ದಕ್ಕೆ ಅವನು ಸಾರ್ ಈ ಹೋಂ ವರ್ಕು ಮಾಡಿದ್ದು ಅಮ್ಮ ಅಲ, ನನ್ನ ಅಪ್ಪ. ನಾನೇ ಮಾಡಿಕೊಡ್ತೀನಿ ಅಂತ ಹೇಳಿದರು. ನೀವು ಹೇಳಿದ್ದನ್ನು ಅವರಿಗೆ ಹೇಳ್ತೀನಿ ಬಿಡಿ ಸರ್ ಅಂದ.

ಶಾಲಾ ನಾಟಕೋತ್ಸವದಲ್ಲಿ ಒಂದು ರಸಪ್ರಸಂಗ ನಡೆಯಿತು ಶೈಕ್ಷಣಿಕ ನಾಟಕಶಾಸ್ತ್ರದಲ್ಲಿ ನಾನು ತರಪೇತಿ ಪಡೆದಿದ್ದುದರಿಂದ ಪಾಠಕ್ಕೆ ಸಂಬಂಧಿಸಿದ ಘಟನೆಗಳನ್ನೇ ನಾಟಕಕ್ಕೆ ಅಳವಡಿಸುವುದನ್ನು ಹೇಳಿಕೊಡುತ್ತಿದ್ದೆ. ನಾಟಕದಿಂದ

ಸಮಯ ಹಾಳು ಎನ್ನುವ ಮನೋಭಾವದ ಕೆಲವರು ಶಿಕ್ಷಕರು, ಪೋಷಕರು, ಆಸಕ್ತಿ, ಮತ್ತು ಕೌಶಲಗಳಿದ್ದ ವಿದ್ಯಾರ್ಥಿಗಳನ್ನು ಪಠ್ಯೇತರ ವಿಷಯಗಳ ಕಡೆಗೆ ಗಮನ ಹರಿಸುವುದನ್ನು ತಡೆಯುತ್ತಿದ್ದರು. ನಮ್ಮ ಶಾಲೆಯಲ್ಲಿ ಕಲಿತ ಇಬ್ಬರು ವಿದ್ಯಾರ್ಥಿಗಳ ಪೈಕಿ ಇಬ್ಬರು ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರಗಳಲ್ಲಿ ಮುಖ್ಯಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರಲ್ಲದೇ, ಅನೇಕ ಸಂಘ ಸಂಸ್ಥೆಗಳಲ್ಲಿ, ಆಕಾಶವಾಣಿಯಲ್ಲಿ ಬಹುಮಾನ ಗಳಿಸಿದ್ದರು.

ಒಂದು ಸಾರಿ ಬೆಂಗಳೂರಿನಿಂದ ಒಂದು ನೂರು ಮೈಲಿ ದೂರದಲ್ಲಿದ್ದ ಹಳ್ಳಿಯಲ್ಲಿ ಶಿಕ್ಷಣ ಮಂತ್ರಿಗಳು ನೆರೆದಿದ್ದ ಸಭಿಕರಿಗೆ ನೀವೆಲ್ಲಾ ಹೀಗೇ ಇದ್ದ ಕಡೆಯೇ ಇದ್ದರೆ ಏನು ಪ್ರಯೋಜನ, ಮುಂದೆ ಬರಬೇಕು, ಮುಂದೆ ಬರಬೇಕು ಅಂದರು. ಇದನ್ನು ಕೇಳಿಸಿಕೊಂಡ ಇಬ್ಬರು ಮೂವರು ತಾವಿದ್ದ ಜಾಗದಿಂದ ಎದ್ದು ಬಂದು ಮುಂದಿನ ಸಾಲಿನಲ್ಲಿ ಕುಳಿತುಕೊಂಡರು.

ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ನಮ್ಮ ಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಬಹುಮಾನವಾಗಿ ಪುಸ್ತಕಗಳನ್ನೇ ಕೊಡುವ ಪದ್ಧತಿಯಿತ್ತು. ಕೆಲವು ಬಾರಿ ಪ್ರಶಸ್ತಿ ಬಂದವರನ್ನೇ ಪುಸ್ತಕ ಮಳಿಗೆಗಳಿಗೆ ಕರೆದುಕೊಂಡು ಹೋಗಿ ಬೇಕಾದ ಪುಸ್ತಕಗಳನ್ನು ಆರಿಸುವ ಅವಕಾಶಗಳನ್ನು ನೀಡುತ್ತಿದ್ದೆವು. ಸಾಧಾರಣವಾಗಿ ಈ ಕೆಲಸ ನನ್ನದಾಗಿತ್ತು. ಪುಸ್ತಕಗಳನ್ನು ಬಹುಮಾನಕ್ಕೆ ಸಿದ್ಧಪಡಿಸುವ ಕೆಲಸ ನಮ್ಮ ಮನೆಯಲ್ಲೇ ಅನೇಕ ವರ್ಷ ನಡೆಯಿತು.

ಶಿಕ್ಷಕರ ಕಾಲೇಜಿನಲ್ಲಿ ಇಂಗ್ಲಿಷ್ ಬೋಧನೆಯ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ಡಿ. ಎಸ್. ಗೋರ್ಡನ್ ಅವರನ್ನು ಶಿಕ್ಷಣ ತಜ್ಞರೊಬ್ಬರು ಸರ್, ವೆನ್ ಷುಡ್ ಅ ಟೀಚರ್ ರಿಟೈರ್ ಅಂತ ಕೇಳಿದರು. ಅದಕ್ಕೆ ಅವರು ನಾಟ್ ಆಸ್ ಲಾಂಗ್ ಆಸ್ ಹಿ ಕೆನ್ ಸ್ಟಾಂಡ್ ಎರಕ್ಟ್ ಅನದ ರೀಡ್. ನುಡಿದಂತೆ ನಡೆದ ಪ್ರೊಫೆಸರ್ ಗೋರ್ಡನ್ ಬ್ರಿಟಿಷ್ ಲೈಬ್ರರಿಯ ಕಿಟಕಿಯ ಪಕ್ಕದಲ್ಲಿ ನಿಂತುಕೊಂಡು ಗಂಟೆಗಟ್ಟಲೆ ಪುಸ್ತಕವನ್ನು ಹತ್ತಿರ ಇಟ್ಟುಕೊಂಡು ಓದುತ್ತಿದ್ದುದನ್ನು ನಾನೇ ಅನೇಕ ಬಾರಿ ಕಂಡಿದ್ದೆ.

ಇಂತಹ ಹಿರಿಯರ ಮಾರ್ಗದರ್ಶನದಲ್ಲಿ ನಾನು ಮುವತ್ತಾರು ವರ್ಷ ಮೇಷ್ಟ್ರ ಕೆಲಸ ಮಾಡಿದೆ. ಈ ಅವಧಿಯಲ್ಲಿ ನನ್ನಿಂದ ವಿದ್ಯಾರ್ಥಿಗಳು ಕಲಿತರೋ ಅಥವಾ ಅವರಿಂದ ನಾನೇ ಕಲಿತೆನೋ ಎನ್ನುವ ಪ್ರಶ್ನೆ ನನ್ನನ್ನು ಪದೇ ಪದೇ ಕಾಡುತ್ತದೆ. ಒಟ್ಟಿನಲ್ಲಿ ನನಗೆ ಅನಿಸುವ ಪ್ರಕಾರ ಎಲ್ಲ ವೃತ್ತಿಗಳಿಗಿಂತ ಸಂತೃಪ್ತಿ ತಂದುಕೊಡುವ ವೃತ್ತಿ ಶಿಕ್ಷಕ ವೃತ್ತಿ. ಈ ಮಾತನ್ನು ಶಿಕ್ಷಕನಾಗಿ ನನಗೆ ಹೇಳಲು ಬಹಳ ಹೆಮ್ಮೆ ಎನಿಸುತ್ತದೆ. ■

---

**ಒಂದು ಸಾರಿ ಇಬ್ಬರು ನಮ್ಮ ಕಾಲೇಜಿನಲ್ಲಿ ಅವರ ಮಕ್ಕಳ ಸೀಟಿಗಾಗಿ ಬಂದರು. ಅವರ ಹುಡುಗರಿಗೆ ಸೀಟು ಕೊಡಲು ಸಾಧ್ಯವಿಲ್ಲ ಎಂದೆ. ವಿಧವಿಧವಾದ ಬೇಡಿಕೆಗಳನ್ನು ಇಟ್ಟರು. ಆದರೂ ತಕ್ಕಡಿ ಏಳಲಿಲ್ಲ. ಸಾಧ್ಯವೇ ಇಲ್ಲ ಅಂದೆ. ನಾವು ಯಾರು ಅಂತ ನೋಡಿ ಅಂತ ಅವರ ವಿಸಿಟಿಂಗ್ ಕಾರ್ಡು ತೆಗೆದು ನನ್ನ ಮುಂದೆ ಇಟ್ಟರು. ಅದರಲ್ಲಿ ಹಸಿದ ಹುಲಿ ಪತ್ರಿಕೆಯ ಸಂಪಾದಕರು ಅಂತ ಇತ್ತು. ಅದನ್ನು ನೋಡಿ ನಾನು ನಕ್ಕು ನಿಮಗೆ ಗೊತ್ತಾ ಹುಲಿಯ ಮುಂದೆ ಸಿಂಹ ಕೂತಿದೆ ಎಂದೆ. ಇಬ್ಬರೂ ಸುಮ್ಮನೆ ಎದ್ದು ಹೋದರು.**

(ಎಚ್.ಎನ್. ಅವರ ಹೋರಾಟದ ಹಾದಿ ಗ್ರಂಥದಿಂದ )

# ಶಿಕ್ಷಕನ ಗುರುತರ ಕರ್ತವ್ಯ – ಇನ್ವಿಜಿಲೇಶನ್

**● ಗಾಯತ್ರಿ ಮೂರ್ತಿ**

ಶಿಕ್ಷಕರ ಕರ್ತವ್ಯ ವಿದ್ಯಾರ್ಥಿಗಳಿಗೆ ಬೋಧಿಸುವುದಷ್ಟಕ್ಕೇ ಸೀಮಿತವಲ್ಲ. ಪರೀಕ್ಷೆಗಳು ಆರಂಭವಾದೊಡನೆ, ಅಲ್ಲ, ಪರೀಕ್ಷೆಗಳು ಆರಂಭವಾಗುವ ಸುಮಾರು ದಿನಗಳ ಮೊದಲೇ ಪ್ರತಿಯೊಬ್ಬ ಅಧ್ಯಾಪಕನಿಗೂ ಇನ್ವಿಜಿಲೇಶನ್ ಕರ್ತವ್ಯದ ಪಟ್ಟಿಯನ್ನು ನೀಡಲಾಗುತ್ತದೆ. ಇನ್ವಿಜಿಲೇಶನ್ ಅಂದರೆ ಪರೀಕ್ಷೆ ನಡೆಯುವ ಸಮಯದಲ್ಲಿ ವಿದ್ಯಾರ್ಥಿಗಳನ್ನು ಕಾಯುವ ಕೆಲಸ.

ಆಹಾ, ಆಗ ಶುರು ನೋಡಿ, ಅನೇಕ ಅಧ್ಯಾಪಕರು, ಇನ್ವಿಜಿಲೇಶನ್ ಚೀಟಿಯನ್ನು ಹಿಡಿದು, ಪ್ರತಿ ಡಿಪಾರ್ಟ್‌ಮೆಂಟಿಗೂ ಭೇಟಿ ಕೊಟ್ಟು, 'ಇಂತಹ ದಿನ ಇನ್ವಿಜಿಲೇಶನ್ ನನಗಾಗುವುದಿಲ್ಲ. ದಯವಿಟ್ಟು ಈ ದಿನಕ್ಕೆ ಎಕ್ಸ್‌ಚೇಂಜ್ ಕೊಡಿ. ಆ ದಿನ ನಿಮ್ಮ ಡ್ಯೂಟಿ ನಾನು ಮಾಡ್ತೀನಿ,' ಎಂಬ ಅಹವಾಲನ್ನು ಮತ್ತೊಬ್ಬ ಅಧ್ಯಾಪಕ/ಕಿಯ ಮುಂದಿಡುವುದು ಸರ್ವೇ ಸಾಮಾನ್ಯ. ಅವರ ಕೆಲಸವಾದರೋ ಬಹಳ ಸಂತೋಷದಿಂದ ಆ ಮತ್ತೊಬ್ಬ ಅಧ್ಯಾಪಕ/ಕಿಯನ್ನು ಪ್ರಿನ್ಸಿಪಾಲರ ಬಳಿ ಕರೆದೊಯ್ದು, ಡ್ಯೂಟಿ ಎಕ್ಸ್‌ಚೇಂಜ್ ಮಾಡಿಸಿಕೊಂಡು ಧನ್ಯರಾಗಿ, ನಿರಾಳವಾಗಿ ನಿಟ್ಟುಸಿರು ಬಿಡುತ್ತಾರೆ. ಈ ರೀತಿ ಕೆಲವೊಮ್ಮೆ ಒಬ್ಬೊಬ್ಬರೂ ಎರಡು ಮೂರು ದಿನಗಳ ಡ್ಯೂಟಿ ಎಕ್ಸ್‌ಚೇಂಜ್ ಮಾಡಿಸುವುದುಂಟು. ತಮ್ಮ ಅನುಕೂಲದಂತೆ ಆದರೋ ಸಮಾಧಾನ, ಇಲ್ಲವೇ ಅಸಮಾಧಾನದಿಂದ ಒಳಗೊಳಗೇ ಕುದಿಯುತ್ತಾ ಅನಿವಾರ್ಯವಾಗಿ ಮೂರು ಗಂಟೆ ಅವಧಿಯ ಇನ್ವಿಜಿಲೇಶನ್ ಡ್ಯೂಟಿಯನ್ನು ನಿಯತ್ತಾಗಿ ಮಾಡಿ ಮುಗಿಸುತ್ತಾರೆ.

ವರ್ಷಾಂತ್ಯದ ಪರೀಕ್ಷೆ, ಅದರಲ್ಲೂ ಪಬ್ಲಿಕ್ ಪರೀಕ್ಷೆ ಎಂದರೆ ಇನ್ವಿಜಿಲೇಟರ್‌ನ ಜವಾಬ್ದಾರಿ ಬಹಳ ಗುರುತರವಾದುದು ಎಂತಲೇ ಹೇಳಬೇಕು. ಹೌದು, ಶಿಕ್ಷಕ ವೃತ್ತಿ ಎಂದ ಮೇಲೆ ಇದು ಅನಿವಾರ್ಯ ಕರ್ತವ್ಯ. ಮೂರು ಗಂಟೆ ಕಾಲ ಕಳೆಯೋದು ಏನು ಮಹಾ ಅಂತೀರಾ? ಇನ್ವಿಜಿಲೇಶನ್ ಕೆಲಸ ಗುರುತರ ಹೇಗೆ ಅಂತ ಹೇಳ್ತೀನಿ.

ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಪ್ರಶ್ನಪತ್ರಿಕೆ ಕೈಗೆ ಸಿಕ್ಕ ಕೂಡಲೇ ಉತ್ತರ ಬರೆಯಲು ಆರಂಭಿಸುವ ತವಕ. ಅದಕ್ಕೆ ಮೊದಲೇ ಇನ್ವಿಜಿಲೇಟರ್, 'ನೀವು ಉತ್ತರ ಬರೆಯದಿದ್ದರೂ ಪರ್ವಾಗಿಲ್ಲ, ಮೊದಲು ನಿಮ್ಮ ರಿಜಿಸ್ಟರ್ ನಂಬರ್ ತಪ್ಪಿಲ್ಲದಂತೆ ಅದರ ಜಾಗದಲ್ಲಿ ಬರೆಯಿರಿ. ಹೆಸರು ಬರೆಯುವ ಅವಶ್ಯಕತೆಯಿಲ್ಲ,' ಎಂದು ಕೊನೆಯ ಪಕ್ಷ ಎರಡು ಬಾರಿಯಾದರೂ ಹೇಳಿರುತ್ತಾರೆ. ಗಂಟೆ ಬಾರಸಿದ ಕೂಡಲೇ ಪ್ರಶ್ನಪತ್ರಿಕೆಯನ್ನು ಕಾತರದಿಂದ ಕಾಯುತ್ತಿರುವ ವಿದ್ಯಾರ್ಥಿಗಳಿಗೆ ವಿತರಿಸಿದ ಬಳಿಕ, ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ರಿಜಿಸ್ಟರ್ ನಂಬರ್ ಸರಿಯಾಗಿ ಬರೆದಿದ್ದಾನೆಯೇ ಎಂದು ಅವನ ಹಾಲ್ ಟಿಕೆಟ್ ನೋಡಿ ಚೆಕ್ ಮಾಡಿ, ನಂತರ ಇನ್ವಿಜಿಲೇಶನ್ ಡೈರಿಯಲ್ಲಿ ಅವನ/ಳ ಸಹಿ ಪಡೆಯಬೇಕು. ಎಲ್ಲ ವಿದ್ಯಾರ್ಥಿಗಳ ಸಹಿ ಪಡೆಯುವಷ್ಟರಲ್ಲಿ ಅರ್ಧ ಗಂಟೆ ಕಳೆದ ಬೆಲ್ ಬಾರಿಸುತ್ತದೆ. ಆ ನಂತರ ಪರೀಕ್ಷಾ ಕೊಠಡಿಗೆ ತಡವಾಗಿ ಬರುವ ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲ. ಅಂದರೆ, ಪರೀಕ್ಷೆ ಆರಂಭವಾದ ಅರ್ಧ ಗಂಟೆ ಒಳಗೆ, ತಡವಾಗಿ ಬರುವ ವಿದ್ಯಾರ್ಥಿಯನ್ನು ಒಳಗೆ ಬಿಡಬಹುದು. ಅರ್ಧ ಗಂಟೆಯ ನಂತರ ಬರುವ ವಿದ್ಯಾರ್ಥಿಗೆ ಪ್ರವೇಶ ನೀಡುವಂತಿಲ್ಲ. ಪರೀಕ್ಷಾ ಕೊಠಡಿಯಲ್ಲಿ ಕನಿಷ್ಠ ಅರ್ಧ ಗಂಟೆ ಕುಳಿತು ಉತ್ತರ ಬರೆಯುವುದು ಕಡ್ಡಾಯ. ನಂತರ ಉತ್ತರ ಬರೆಯಲು ಬಾರದಿದ್ದರೆ ಅವನು ಉತ್ತರ ಪತ್ರಿಕೆ ಕೊಟ್ಟು

ಹೊರಹೋಗಬಹುದು. ಅರ್ಧ ಗಂಟೆಯ ನಂತರವೂ ತಡವಾಗಿ ಬರುವ ವಿದ್ಯಾರ್ಥಿಯನ್ನು ಪರೀಕ್ಷಾ ಕೊಠಡಿಗೆ ಸೇರಿಸದಿರಲು ಕಾರಣವಿದೆ. ಏಕೆಂದು ಬಹುಶಃ ನೀವೀಗಾಗಲೇ ಊಹಿಸಿರಬಹುದು ಅಲ್ಲಿ!

ಒಮ್ಮೆ ಹೀಗಾಯಿತು ಅರ್ಧ ಗಂಟೆಯ ನಂತರ ಪರೀಕ್ಷಾ ಕೊಠಡಿಯಿಂದ ಹೊರಬಂದ ಎರಡನೆಯ ಪಿಯುಸಿ ವಿದ್ಯಾರ್ಥಿಯೊಬ್ಬ ಅಧ್ಯಾಪಕಿಯೊಬ್ಬರೊಂದಿಗೆ (ಹೊಸದಾಗಿ ಕೆಲಸಕ್ಕೆ ಸೇರಿದವರು) ಮಲ್ಟಿಪಲ್ ಚಾಯ್ಸ್ ಪ್ರಶ್ನೆಗಳಿಗೆ ಉತ್ತರ ಕೇಳಿ ತಿಳಿದುಕೊಂಡ. ತಕ್ಷಣವೇ ಅವನು ಚೀಟಿಯಲ್ಲಿ ಉತ್ತರ ಸೂಚಿಸಿ, ಪರೀಕ್ಷೆ ಬರೆಯುತ್ತಿದ್ದ ಗೆಳೆಯನೊಬ್ಬನಿಗೆ ರವಾನಿಸಿದ್ದು ತಿಳಿಯಿತು. ನೋಡಿದಿರಾ, ವಿದ್ಯಾರ್ಥಿಗಳ ಬುದ್ಧಿ ಇಂತಹ ವಿಷಯಗಳಲ್ಲಿ ಹೇಗೆ ಚುರುಕಾಗಿ ಕೆಲಸ ಮಾಡುತ್ತದೆ ಎಂದು! ಆಹಾ, ಅದೆಂತಹ ಗೆಳೆತನ ನೋಡಿದಿರಾ! ಈಗ ಅರ್ಥವಾಯಿತಲ್ಲವೇ?

ನಾನು ಕೆಲಸಕ್ಕೆ ಸೇರಿದ ಹೊಸತು. ಮೊತ್ತ ಮೊದಲ ಇನ್ವಿಜಿಲೇಶನ್ ಕೆಲಸ. ನನಗೋ ಅತ್ಯುತ್ಸಾಹ. ನನ್ನ ಕೆಲಸ ಉತ್ಸಾಹದಿಂದ ನಿರ್ವಹಿಸುತ್ತಿದ್ದೆ. ಸಾಮಾನ್ಯವಾಗಿ, ಮೊದಲ ಅರ್ಧ ಗಂಟೆಯ ನಂತರ ಇನ್ವಿಜಿಲೇಟರ್ 'ರಿಲೀವರ್' ಕರ್ತವ್ಯ ವಿರುವ ಅಂದರೆ, ಅರ್ಧ ಗಂಟೆಯ ನಂತರ ಪ್ರತಿ ಪರೀಕ್ಷಾ ಕೋಣೆಯ ಇನ್ವಿಜಿಲೇಟರ್‌ಗೆ ಸರತಿಯ ಪ್ರಕಾರ 10–15 ನಿಮಿಷಗಳ ವಿರಾಮ ನೀಡುವುದು. ಹಾಗೆ ನಾನು ವಿರಾಮ ತೆಗೆದುಕೊಂಡು ಕಾಫಿ ಕುಡಿದು 15 ನಿಮಿಷಗಳ ನಂತರ ಕೋಣೆಗೆ ಮತ್ತೆ ಬಂದಾಗ, ಆ ರಿಲೀವರ್ ಮಾಡುತ್ತಿದ್ದುದೇನು? ಆರಾಮವಾಗಿ ಕುರ್ಚಿಯ ಮೇಲೆ ಕುಳಿತು ಯಾವುದೋ ಪುಸ್ತಕ ಓದುತ್ತಿದ್ದರು! ನನಗೋ ಹೀಗೂ ಉಂಟಾ ಎಂದು ಅಚ್ಚರಿಯಾಯಿತು. ಪರೀಕ್ಷೆ ಮುಗಿದ ನಂತರ ಸ್ವಲ್ಪ ಸಮಯದಲ್ಲೇ ನನಗೆ ಪ್ರಿನ್ಸಿಪಾಲರಿಂದ ಕರೆ ಬಂತು. ಏಕಿರಬಹುದು ಎಂದು ಕಾತರದಿಂದಲೇ ಪ್ರಿನ್ಸಿಪಾಲರ ಕೊಠಡಿಗೆ ಹೋದೆ. ಅಲ್ಲಿ ಆ ರಿಲೀವರ್ ಗಮ್ಮತ್ತಾಗಿ ಕುಳಿತಿದ್ದರು. ಒಬ್ಬ ಹುಡುಗ ಅಡಿಶನಲ್ ಶೀಟ್ ತೆಗೆದುಕೊಂಡಿದ್ದ. ಆ ಬಗ್ಗೆ ಇನ್ವಿಜಿಲೇಶನ್ ಡೈರಿಯಲ್ಲಿ ದಾಖಲೆ ಇರಲಿಲ್ಲ! (ಪರೀಕ್ಷಾರ್ಥಿ ಪ್ರತಿ ಅಡಿಶನಲ್ ಶೀಟ್ ತೆಗೆದುಕೊಂಡಾಗಲೂ ಆ ಶೀಟ್ ನಂಬರ್ ಬರೆದ, ಪುಟ್ಟ ಸಹಿ ಹಾಕಬೇಕಾದುದು ಕಡ್ಡಾಯ. ಅದನ್ನು ಇನ್ವಿಜಿಲೇಟರ್ ತಪ್ಪದೆ ಮಾಡಿಸಬೇಕು.) ರಿಲೀವರ್ ಆಗಿ ಬಂದಿದ್ದ ಅಧ್ಯಾಪಕ ಪುಸ್ತಕ ಹಿಡಿದು ಕುಳಿತು, ವಿದ್ಯಾರ್ಥಿಗೆ ಶೀಟ್ ತೆಗೆದುಕೊಂಡು ಹೋಗು ಎಂದು ಹೇಳಿದ್ದು ನಾನು ವಿರಾಮ ಸಮಯ ಮುಗಿಸಿ ಬಂದ ಕೂಡಲೇ ನೋಡಿದೆ. ನಾನು ಆ ಕೂಡಲೇ ಆ ವಿದ್ಯಾರ್ಥಿಯ ಸಹಿ ತೆಗೆದುಕೊಂಡು ನನ್ನ ಕರ್ತವ್ಯ ಮಾಡಿದ್ದೆ. ಈ ಬಗ್ಗೆ ಆ ರಿಲೀವರ್ ಹೊಸದಾಗಿ ಬಂದಿದ್ದ ನಾನೇ ಆ ತಪ್ಪಿಗೆ ಕಾರಣ ಎಂದು ನನ್ನ ಮೇಲೆ ತಪ್ಪು ಹೊರಿಸಿ ತಾವು ಗಮ್ಮತ್ತಾಗಿ ಕುಳಿತಿದ್ದರು. ವಿಷಯ ತಿಳಿದ ನಾನು, ಸುಮ್ಮನಿರದೆ, ನಡೆದಿರಬಹುದಾದುದನ್ನು ವಿವರಿಸಿ ಹೇಳಿ, ತಪ್ಪು ನನ್ನದಲ್ಲ, ಇವರು, ಪುಸ್ತಕ ಓದುತ್ತಾ ಕುಳಿತು, ವಿದ್ಯಾರ್ಥಿಗೆ ಅಡಿಶನಲ್ ಶೀಟ್ ತೆಗೆದುಕೊಳ್ಳಲು ಹೇಳಿದ್ದಾರೆ. ಅವನು ಹಾಗೇ ಮಾಡಿದ್ದಾನೆ. ಸಹಿ ಹಾಕಿಸದಿದ್ದುದು ನನ್ನ ತಪ್ಪಲ್ಲ. ಎಂದು ಧೈರ್ಯವಾಗಿ ಹೇಳಿದೆ. 'ಏನ್ರೀ ಇಷ್ಟು ಎಕ್ಸ್‌ಪೀರಿಯನ್ಸ್ ಇರೋ ನೀವು ಹೀಗೆ ಮಾಡೋದಾ?' ಎಂದಾಗ ಆತ ನನ್ನನ್ನು ದುರುಗುಟ್ಟಿ ನೋಡಿದ್ದ ನೆನಪು. ನಂತರ, ಆ ವಿದ್ಯಾರ್ಥಿ ಪುಣ್ಯವಶಾತ್ ಕಾಲೇಜಿನಲ್ಲೇ ಇದ್ದುದು ತಿಳಿದು ಅವನನ್ನು ಕರೆಸಿ,

ಸಹಿ ಹಾಕಿಸಿದ್ದಾಯಿತೆನ್ನಿ. ಅಂತೂ ಒಂದು ಸಣ್ಣ ತಪ್ಪೂ ಆಗದಂತೆ ಎಚ್ಚರದಿಂದ ಕಾರ್ಯ ನಿರ್ವಹಿಸುವುದು ಅತ್ಯಂತ ಮಹತ್ತರವಾದುದು.

ಇನ್ನು ವಿದ್ಯಾರ್ಥಿಗಳ ಕಾಪಿ ಚಟ. ಎಷ್ಟೋ ವಿದ್ಯಾರ್ಥಿಗಳು ವರ್ಷವೆಲ್ಲಾ ಆರಾಮವಾಗಿ ಕಾಲ ಕಳೆದು ಪರೀಕ್ಷೆಯಲ್ಲಿ ಕಾಪಿ ಹೊಡೆದಾದರೂ ಪಾಸಾಗಲೇಬೇಕೆಂಬ ಹಂಬಲ ಹೊತ್ತು ಬರುತ್ತಾರೆ. ಕಾಪಿ ಮಾಡುವ ವಿಷಯದಲ್ಲಿ ಅವರು ತೋರುವ ಕೌಶಲವನ್ನು ಓದುವುದರಲ್ಲಿ ತೋರಿದ್ದರೆ ಅವರು ಖಂಡಿತಾ ಕಾಪಿ ಚಟಕ್ಕೆ ಬಲಿಯಾಗದೆ ಆರಾಮವಾಗಿ ಪಾಸಾಗಬಹುದಿತ್ತು. ಬದಲಿಗೆ ಅವರು 'ಕಾಪಿ ನಿಮಿತ್ತಂ ಬಹುಕೃತ ರೂಪಂ' ಎಂದು ನಾನಾ ವಿಧದಲ್ಲಿ ಕಾಪಿ ಹೊಡೆಯುವ ಕೈಚಳಕ ತೋರುತ್ತಾರೆ.

ನನ್ನ ಅನುಭವಕ್ಕೆ ಒಂದೆರಡು ಸ್ಯಾಂಪಲ್‌ಗಳು ಮೈಸೂರಿನ ಕಾಲೇಜೊಂದರಲ್ಲಿನ ಅನುಭವ: ಒಬ್ಬ ಹುಡುಗ ಸಣ್ಣ ಡೈರಿಯಲ್ಲಿ ಅತಿ ಸಣ್ಣ ಅಕ್ಷರಗಳಲ್ಲಿ ಉತ್ತರಗಳನ್ನು ಬರೆದು ಕಾಪಿ ಹೊಡೆಯುತ್ತಿದ್ದದು ನನ್ನ ಗಮನಕ್ಕೆ ಬಂತು. ಸರಿ, ಅವನ ಪೇಪರ್ ತೆಗೆದುಕೊಂಡು, 'ಮಾಲ್‌ಪ್ರಾಕ್ಟೀಸ್' ಕೇಸ್ ಬುಕ್ ಮಾಡಿ, ನನ್ನ ಕರ್ತವ್ಯ ನಿಭಾಯಿಸಿದೆ. ಒಬ್ಬ ಹುಡುಗನಿಂದ ಬಂದ ಅಡಿಶನಲ್ ಶೀಟ್ ಬೇಡಿಕೆ ಪೂರೈಸುವಷ್ಟರಲ್ಲಿ 'ದಢ ದಢ' ಸದ್ದು ಕೇಳಿಸಿತು. ಏನು ಎಂದು ಸರ‍್ರನೆ ತಿರುಗಿ ನೋಡಿದರೆ, ಒಬ್ಬ ಹುಡುಗ ತನ್ನ ಉತ್ತರ ಪತ್ರಿಕೆಯನ್ನೂ ತೆಗದುಕೊಂಡು ಪರೀಕ್ಷಾ ಕೊಠಡಿಯಿಂದ ಹೊರಗೋಡಿದ್ದ. ತಕ್ಷಣ ಹೊರಗಡೆ ನಿಂತಿದ್ದ ಅಟೆಂಡರ್‌ನನ್ನು ಕರೆದು, ವಿಷಯ ತಿಳಿಸಿ, ಅವನನ್ನು 'ಎಳೆದುಕೊಂಡು ಬಾ' ಎಂದು ಕಳಿಸಿದೆ. ಅವನು ಓಡುತ್ತಾ ಹೋಗಿ, ಆ ಹುಡುಗನನ್ನು ಎಳೆದು ತಂದ. ಅವನ ಉತ್ತರ ಪತ್ರಿಕೆ ಕಸಿದುಕೊಂಡು ನೋಡಿದರೆ, ಅವನು ತನ್ನ ರಿಜಿಸ್ಟರ್ ನಂಬರ್ ಬದಲಿಸಿದ್ದ! ತಕ್ಷಣ ಪ್ರಿನ್ಸಿಪಾಲರನ್ನು ಕರೆಸಿ, ಮತ್ತೊಂದು ಮಾಲ್ ಪ್ರಾಕ್ಟೀಸ್ ಕೇಸ್ ಬುಕ್ ಮಾಡಿದ್ದಾಯಿತು.

ವಿಷಯ ಅಷ್ಟಕ್ಕೇ ಮುಗಿಯಲಿಲ್ಲ. ರಾತ್ರಿ ಎಂಟು ಗಂಟೆ. ಯಾರೋ ಕರೆಗಂಟೆ ಬಾರಿಸಿದರು. ಬಾಗಿಲು ತೆರೆದರೆ, ಆ ಇಬ್ಬರು ಹುಡುಗರು! ಚಾಕುವಿನಿಂದ ಇರಿಯಬಹುದೇ ಎಂದು ಸ್ವಲ್ಪ ಗಾಭರಿಯಾಯಿತು. ಆದರೂ ಎದೆಗುಂದದೆ ಧೈರ್ಯವಾಗಿ, 'ಮನೆಗೆ ಯಾಕೆ ಬಂದ್ರಿ' ಎಂದೆ. 'ನಮ್ಮ ಮಾಲ್‌ಪ್ರಾಕ್ಟೀಸ್ ವಾಪಸ್ ತೊಗೋಳಿ ಮೇಡಂ', ಎಂದು ಜೋರಾಗಿಯೇ ಕೇಳಿದರು. 'ನೋಡಿಪ್ಪಾ, ಒಮ್ಮೆ ಕೇಸ್ ಬುಕ್ ಆದ ಮೇಲೆ ಮುಗೀತು. ಅದನ್ನು ವಾಪಸ್ ತೊಗೊಳಕ್ಕೆ ಆಗಲ್ಲ. ತಪ್ಪು ಮಾಡಿದ ಮೇಲೆ ಶಿಕ್ಷೆ ಅನುಭವಿಸಲೇ ಬೇಕು. ನೀವಿನ್ನು ಹೊರಡಿ' ಎಂದೆ. ಅಷ್ಟರಲ್ಲಿ ನಮ್ಮ ಹೊರಗೆ ಹೋಗಿದ್ದ ನನ್ನ ತಂದೆ ಬಂದರು. 'ಯಾರಿವರು? ಯಾಕೆ ಬಂದಿದಾರೆ?' ಎಂದು ವಿಚಾರಿಸುತ್ತಿದ್ದಂತೆ, 'ನಾವಿನ್ನು ಬರ್ತೀವಿ ಮೇಡಂ' ಎಂದು ಜಾಗ ಖಾಲಿ ಮಾಡಿದರೂನ್ನಿ. ಅಂತೂ ಒಂದೇ ದಿನ, ಅದೂ ಒಂದೇ ಕೋಣೆಯಲ್ಲಿ ಎರಡು ಮಾಲ್‌ಪ್ರಾಕ್ಟೀಸ್ ಕೇಸ್‌ಗಳು! ಗಿನ್ನೆಸ್ ದಾಖಲೆಯಿರಬಹುದೇ? ಪ್ರಯತ್ನಿಸಿ ನೋಡಿ ಎಂದು ಮರುದಿನ ನನ್ನ ಸಹೋದ್ಯೋಗಿಯೊಬ್ಬರು ಹಾಸ್ಯ ಮಾಡಿದರು.

ವಿದ್ಯಾರ್ಥಿಗಳ ಕಾಪಿ ವೈಖರಿ ಅಚ್ಚರಿ ಪಡುವಂತಹುದು. ಫುಲ್ ಶರ್ಟ್ ಧರಿಸಿ, ಉತ್ತರಗಳನ್ನು ಕೈಮೇಲೆ ಬರೆದುಕೊಂಡು, ಇನ್ವಿಜಿಲೇಟರ್ ಗಮನ ಬೇರೆಡೆ ಇದ್ದಾಗ ಶರ್ಟ್ ತೋಳನ್ನು ಮಡಿಚಿ ಕಾಪಿ ಹೊಡೆಯುವುದು, ಚೀಟಿಗಳನ್ನು ಜೇಬಿನಲ್ಲಿಟ್ಟುಕೊಂಡು, (ಎಷ್ಟೋ ಸಲ, ಚೆಕ್ ಮಾಡಿದರೂ ಅದು ತಿಳಿಯುವುದಿಲ್ಲ, ಹಾಗೆ ಬಚ್ಚಿಟ್ಟಿರುತ್ತಿದ್ದರು!) ಮಧ್ಯೆ ಮಧ್ಯೆ ಚೀಟಿ ತೆಗೆದು ಕಾಪಿ ಮಾಡುವುದು,

ಹೀಗೆ ಅದೆಷ್ಟು ಗಮನಕ್ಕೆ ಬಾರದ ಕಾಪಿ ಕೇಸ್‌ಗಳು ಜರುಗುತ್ತಿದ್ದವೋ ತಿಳಿಯದು. ಅದಕ್ಕೇ ಹೇಳಿದ್ದು, ಇನ್ವಿಜಿಲೇಟರ್ ಕೆಲಸ ಬಹಳ ಗುರುತರವಾದುದು. ಇರಲಿ, ಈ ವಿದ್ಯಾರ್ಥಿಗಳಿಗೆ ಈ ಪ್ರಶ್ನೆಗಳೇ ಬರುತ್ತವೆಂದು ಹೇಗೆ ಗೊತ್ತಿರುತ್ತಿತ್ತು ಅಂತೀರಾ? ಅದು ಹೇಗೋ (ವಕ್ರಮಾರ್ಗಗಳಿಂದ) ಪ್ರಶ್ನಪತ್ರಿಕೆಯ ನಕಲು ಮೊದಲೇ ಪಡೆದು (ಪ್ರಶ್ನೆಗಳನ್ನು ಮಾರಿಯೇ ಹಣ ಮಾಡುವ ವ್ಯಕ್ತಿಗಳೂ ಇದ್ದರೆಂಬುದು ಬಹಿರಂಗ ಗುಟ್ಟು) ಇಲ್ಲವಾದರೆ, ಆ ವಿದ್ಯಾರ್ಥಿಗಳಿಗೆ ಇವೇ ಪ್ರಶ್ನೆಗಳು ಬರುತ್ತವೆ, ಅದಕ್ಕೆ ಉತ್ತರ ಸಿದ್ಧ ಪಡಿಸಬೇಕೆಂಬುದು ಹೇಗೆ ತಿಳಿಯುತ್ತಿತ್ತು ಅಲ್ಲವೇ?

ವಿದ್ಯಾರ್ಥಿಗಳು ಕಾಪಿ ಮಾಡುವುದುನ್ನು ತಡೆಗಟ್ಟಲು ಹುಟ್ಟಿಕೊಂಡಿದ್ದೇ, 'ವಿಜಿಲೆನ್ಸ್ ಕಮಿಟಿ'. ಅವರು ಬಂದರೆ ಸಾಕು, ಅವರ ಹದ್ದಿನ ಕಣ್ಣು ತಕ್ಷಣವೇ ಕಾಪಿ ಹೊಡೆಯುವ ಹುಡುಗನನ್ನು ಕಂಡುಹಿಡಿಯುತ್ತಿದ್ದವು. ಆ ಸಂದರ್ಭದಲ್ಲಿ ಇನ್ವಿಜಿಲೇಟರ್ ಮುಖ ಸಪ್ಪಗಾಗುತ್ತಿದ್ದುದು ನಿಜ. ಏಕೆಂದರೆ, ತನ್ನ ಕಣ್ಣಿಗೆ ಕಾಣದಂತೆ ಇವ ಕಾಪಿ ಹೊಡೆದನಲ್ಲಾ ಎಂದು ಖೇದವಾಗುತ್ತಿತ್ತು. ಆದರೇನು, ಅವನ ಮೇಲೆ ಮಾಲ್‌ಪ್ರಾಕ್ಟೀಸ್ ಕೇಸ್ ಬುಕ್ ಆಗುತ್ತಿತ್ತು.

ಅಂದ ಹಾಗೆ, ಕೆಲವು ಕಾಲೇಜುಗಳಲ್ಲಿ ಕಾಪಿ ಹೊಡೆಯುವುದು ಮಾಮೂಲು. ಅದನ್ನು ಕಂಡೂ ಕಾಣದಂತೆ ಇನ್ವಿಜಿಲೇಟರ್‌ಗಳು ಸುಮ್ಮನಿರುತ್ತಿದ್ದರು ಎಂದೂ ತಿಳಿದುಬರುತ್ತಿತ್ತು. ಆಗ ವಿಜಿಲೆನ್ಸ್ ಕಮಿಟಿ ಬಂದರೆ! ಅವರು ಬಂದರು ಎಂದು ತಿಳಿದ ಕೂಡಲೇ, ಅಲ್ಲಿರುತ್ತಿದ್ದ ಅಟೆಂಡರ್ ವಿಷಲ್ ಹಾಕುತ್ತಿದ್ದ. ಕೂಡಲೇ, ವಿದ್ಯಾರ್ಥಿಗಳು ಹಾಗೂ ಇನ್ವಿಜಿಲೇಟರ್ ಎಚ್ಚರವಹಿಸುತ್ತಿದ್ದರಂತೆ. ಇದನ್ನು ನಾನು ಕೇಳಿದ್ದೇನೆಯೇ ಹೊರತು ಕಂಡಿದ್ದಿಲ್ಲ.

ಮತ್ತೊಂದು ಸ್ವಾರಸ್ಯಕರ ಘಟನೆ. ಕೆಲವು ಕಾಲೇಜುಗಳಲ್ಲಿ ರೌಡಿ ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಗೆ ಚಾಕು ತಂದು ಇನ್ವಿಜಿಲೇಟರ್‌ನನ್ನು ಹೆದರಿಸಿ, ರಾಜಾರೋಷಾಗಿ ಕಾಪಿ ಮಾಡುತ್ತಾರೆ ಎಂದು ಕೇಳಿದ್ದೆ. ಒಮ್ಮೆ ಇನ್ವಿಜಿಲೇಶನ್ ಮಾಡುತ್ತ ಅತ್ತಿತ್ತ ಓಡಾಡುತ್ತಿದ್ದಾಗ. ವಿದ್ಯಾರ್ಥಿಯೊಬ್ಬನ ಪ್ಯಾಂಟಿನ ಹಿಂಬದಿಯ ಜೇಬಿನಲ್ಲಿ ಒಂದು ಹಿಡಿಯಿರುವ ಪದಾರ್ಥ ಕಾಣಿಸಿತು. ಆ ಘಳಿಗೆ ಯಲ್ಲಿ ನನಗೆ ಅದು ಚಾಕು ಇರಬಹುದೇ ಎಂದು ಬಲವಾದ ಅನುಮಾನ ಬಂತು. 'ನಿನ್ನ ಪ್ಯಾಂಟ್ ಜೇಬಿನಲ್ಲಿ ಏನಿದೆ ತೆಗಿ' ಎಂದೆ. ಅವನು ಅದನ್ನು ತೆಗೆದು ತೋರಿಸಿ, 'ಚಾಕೂಂತ ಹೆದರಿದ್ರಾ ಮೇಡಂ? ಬಾಛಣಿಗೆ ಅಷ್ಟೆ'? ಎಂದಾಗ ಮನಸ್ಸಿಗೆ ನಿರಾಳವಾದರೂ ಮುಖ ಮಾತ್ರ 'ಇಂಗು ತಿಂದ ಮಂಗನಂತಾಗಿತ್ತೇನೋ ಎಂದು ಅನುಮಾನ.

ವಿದ್ಯಾರ್ಥಿಗಳ ಕಾಪಿ ಕೌಶಲದ ಬಗ್ಗೆ ಬಹಳಷ್ಟು ಬರೆಯಬಹುದು. ಹಾಂ, ಅಂದ ಹಾಗೆ, ವಿಜಿಲೆನ್ಸ್ ಕಮಿಟಿ ಹೆದರಿಕೆಯಿಂದ ಚೀಟಿಗಳನ್ನು ತರುವುದೇನೋ ಕಡಿಮೆಯಾಯಿತು. ಆದರೆ, ಕಾಪಿ ಹೊಡೆಯುವುದೇನೂ ನಿಲ್ಲಲಿಲ್ಲ. ತನ್ನ ಮುಂದಿನ ವಿದ್ಯಾರ್ಥಿಯ ಉತ್ತರಗಳನ್ನು ಅವನ ಹಿಂದೆ ಕುಳಿತ ವಿದ್ಯಾರ್ಥಿ ಲೀಲಾಜಾಲವಾಗಿ ಕಾಪಿ ಹೊಡೆಯಲನುವಾಗುವಂತೆ ಮುಂದೆ ಕುಳಿತವನು ತನ್ನ ಉತ್ತರ ಪತ್ರಿಕೆಯನ್ನು ಪಕ್ಕಕ್ಕಿರಿಸಿಕೊಂಡು ಬರೆಯುತ್ತಿದ್ದ. ಅದನ್ನು ತಡೆಗಟ್ಟಿದ್ದಾಯ್ತು. ಹೀಗೇ, ವಿವಿಧ ಬಗೆಯಲ್ಲಿ ಕಾಪಿ ಪ್ರಭುಗಳು ತಮ್ಮ ಕೌಶಲ ಮೆರೆಯುವುದಂತೂ ನಿಜ. ಈಗ ಪರಿಸ್ಥಿತಿ ಹೇಗಿದೆಯೋ, ನನಗೆ ತಿಳಿಯದು. ಅಂದ ಹಾಗೆ, ಹಣ ಅಂಕಗಳನ್ನು ಕೊಳ್ಳುತ್ತದೆ ಎಂದು ಕೇಳಿದ್ದೇನೆ. ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತರ ಬರೆಯದಿದ್ದರೂ,

ವಿದ್ಯಾರ್ಥಿಯ ಅಂಕ ಪಟ್ಟಿ ಬೇರೆಯದನ್ನೇ ಹೇಳುತ್ತದೆ. ತನಗೆ ಬೇಕಾದಷ್ಟು ಅಂಕಗಳನ್ನು ಹಣ ಕೊಟ್ಟು ಹಾಕಿಸಿಕೋಳ್ಳುತ್ತಾನೆ ಎನ್ನುವುದೂ ತಿಳಿದು ಬಂತು. ವ್ಯವಸ್ಥೆ ಅಷ್ಟರಮಟ್ಟಿಗೆ ಭ್ರಷ್ಟವಾಗಿದೆ.

ಕಾಪಿ ವೈವಿಧ್ಯದ ಬಗ್ಗೆ ಹೇಳುವುದಂತೂ ಬಹಳಷ್ಟಿದೆ. ಇರಲಿ, ಈ ಮತ್ತೆ ಇನ್ವಿಜಿಲೇಶನ್ ಬಗ್ಗೆ ಬರೋಣ. ಕಾಲದ ಸಾಪೇಕ್ಷತೆ ತಿಳಿಯಲು ಇನ್ವಿಜಿಲೇಶನ್ ಒಂದು ಉತ್ತಮ ಉದಾಹರಣೆ. ಮೊದಲರ್ಧ ಗಂಟೆ ಕಳೆದ ಮೇಲೆ, ಅದರಲ್ಲೂ ಒಂದು ಗಂಟೆಯ ನಂತರ ವಿದ್ಯಾರ್ಥಿಗಳಿಂದ ಅಡಿಶನಲ್ ಶೀಟ್‌ಗೆ ಬೇಡಿಕೆ ಬರುತ್ತದೆ. ಅದರ ಮಾದರಿ ಕೊನೆಯ ಬೆಂಚಿನಲ್ಲಿ ಕುಳಿತ ವಿದ್ಯಾರ್ಥಿಯಿಂದ ಅಡಿಶನಲ್ ಶೀಟ್ ಬೇಡಿಕೆ ಬರುತ್ತದೆನ್ನಿ. ನೀವು ಅವನ/ಳ ಬೇಡಿಕೆ ಪೂರೈಸುವಷ್ಟರಲ್ಲಿ ಮೊದಲ ಬೆಂಚಿನ ವಿದ್ಯಾರ್ಥಿ ಅಡಿಶನಲ್ ಶೀಟ್‌ಗಾಗಿ ಕರೆಯುತ್ತಾನೆ. ಸರಿ, ಅದನ್ನು ಪೂರೈಸುವಷ್ಟರಲ್ಲಿ, ಮತ್ತೆ ಕೋಣೆಯಲ್ಲಿನ ವಿವಿಧ ಬೆಂಚುಗಳಲ್ಲಿ ಕುಳಿತ ವಿದ್ಯಾರ್ಥಿಗಳಿಂದ ಅಡಿಶನಲ್ ಶೀಟ್ ಪೂರೈಕೆ ಮಾಡಿ, ಸಮಯ ನೋಡಿಕೊಂಡರೆ ಹತ್ತು ನಿಮಿಷಗಳೂ ಕಳೆದಿರುವುದಿಲ್ಲ! ವಿದ್ಯಾರ್ಥಿಗಳತ್ತ ಗಮನಿಸಿದರೆ, ಅವರೂ ಮಧ್ಯೆ ಮಧ್ಯೆ ಆತಂಕದಿಂದ ವಾಚ್ ನೋಡುತ್ತ, ತಮ್ಮ ಬರವಣಿಗೆಯ ವೇಗವನ್ನು ಹೆಚ್ಚಿಸುತ್ತಾರೆ. ಅವರ ಪಾಲಿಗೆ ಕಾಲ ಶರವೇಗದಲ್ಲಿ ಕಳೆದುಹೋಗುತ್ತದೆ. ಪರೀಕ್ಷಾ ಕೊಠಡಿಯಲ್ಲಿ ಅವರು ಕಳೆಯುವುದೂ ಮೂರು ಗಂಟೆ, ಇನ್ವಿಜಿಲೇಟರ್ ಕಳೆಯುವುದೂ ಮೂರು ಗಂಟೆ ಮಾತ್ರ. ಆದರೆ, ಕಾಲ ಕಳೆಯುವ ಅವರುಗಳ ಗ್ರಹಿಕೆಯಲ್ಲಿ ವಿದ್ಯಾರ್ಥಿಗಳ ಪಾಲಿಗೆ ಮೂರು ಗಂಟೆ ಬೇಗ ಕಳೆದುಹೋಗುತ್ತದೆ ಎನ್ನಿಸಿದರೆ, ಇನ್ವಜಿಲೇಟರ್‌ಗೆ ಮಾತ್ರ ಗಡಿಯಾರದ ಮುಳ್ಳು ನಿಧಾನವಾಗಿ ಸರಿಯುತ್ತದೇನೋ ಎಂಬ ಭಾವನೆ! ಇದೇ ಅಲ್ಲವೇ ಕಾಲದ ಸಾಪೇಕ್ಷತೆ ಎಂದರೆ!

ಹೀಗೇ ಶಿಕ್ಷಕಿಯ ಅನುಭವದ ವಿವಿಧ ಆಯಾಮಗಳ ಬಗ್ಗೆ ಬರೆಯುತ್ತಾ ಹೋಗಬಹುದು. ಮತ್ತೊಮ್ಮೆ ಖಂಡಿತಾ ಇಂತಹ ಅವಕಾಶ ಸಿಗುತ್ತದೆಂದು ಆಶಿಸುತ್ತೇನೆ.

■

---

## ಅಧ್ಯಾಪಕರ ಬಗೆಗಿನ ನುಡಿಮುತ್ತು ( ಸಂಗ್ರಹ : ಅಂತರ್ಜಾಲ )

ನೆನಪಿಡಿ ಒಂದು ಪುಸ್ತಕ, ಒಂದು ಪೆನ್ನು, ಒಂದು ಮಗು ಮತ್ತು ಒಬ್ಬ ಅಧ್ಯಾಪಕ ಪ್ರಪಂಚವನ್ನು ಸುಂದರವಾಗಿ ಬದಲಾಯಿಸಬಹುದು

ಅವರು ನಿಮ್ಮನ್ನು ಉತ್ತೇಜಿಸುತ್ತಾರೆ, ನಿಮ್ಮನ್ನು ಮನರಂಜಿಸುತ್ತಾರೆ. ಹೇಗೆಂದರೆ ನಿಮಗೆ ತಿಳಿಯದೆಯೇ ಅವರೊಂದಿಗೆ ನೀವು ಬಹಳಷ್ಟು ವಿಷಯಗಳನ್ನು ಕಲಿಯುತ್ತಿರುತ್ತೀರಿ. ಅವರೇ ಶ್ರೇಷ್ಠ ಅಧ್ಯಾಪಕರು.

ಒಬ್ಬ ಒಳ್ಳೆಯ ವಿದ್ಯಾರ್ಥಿ ಒಬ್ಬ ಸಮರ್ಥ ಅಧ್ಯಾಪಕರಿಂದ ರೂಪುಗೊಳ್ಳುತ್ತಾನೆ. ಅವನು ಚನ್ನಾಗಿ ಓದುತ್ತಾನೆ, ಬರೆಯುತ್ತಾನೆ. ಅವನು ಬರೆದ ಉತ್ತಮ ಪುಸ್ತಕ ವಿವಿಧ ಸಂಸ್ಕೃತಿಗಳನ್ನು ಬೆಸೆಯುವುದರಲ್ಲಿ ಯಶಸ್ವಿಯಾಗುತ್ತದೆ. ಹೀಗಾಗಿ ಮೊದಲಿಗೆ ಉತ್ತಮ ವಿದ್ಯಾರ್ಥಿಯಾಗುವುದು ಅವಶ್ಯಕ.

**● ದಂಸಆ**

- ನೀವು ಸತ್ತರೂ ಉದ್ಧಾರ ಆಗೊಲ್ಲ, ನಿಮ್ಮಂಥ ವರ್ಸ್ಟ್ ಬ್ಯಾಚ್ ನೋಡಿಲ್ಲ, ನೀವು ಭೂಮಿಗೆ ಭಾರ ದೇಶಕ್ಕೆ ನಷ್ಟ...

  ...ಹೀಗೆಲ್ಲ ಬೈಯುತ್ತಲೇ ಜೀವನದ ಮೌಲ್ಯಗಳನ್ನು ಕಲಿಸಿದ ಶಿಕ್ಷಕರೂ ಇದ್ದಾರೆ.
- ವ್ಯತ್ಯಾಸ ಕಂಡುಬರುವಂತೆ ಮಾಡುವುದು ತರಗತಿ ಅಲ್ಲ, ಶಿಕ್ಷಕ.
- ಎ ಟೀಚರ್ ಟೇಕ್ಸ್ ಎ ಹ್ಯಾಂಡ್, ಓಪೆನ್ಸ್ ಎ ಮೈಂಡ್ ಅಂಡ್ ಟೀಚಸ್ ಎ ಹಾರ್ಟ್.
- ಕಲಿಸುವುದನ್ನು ಪ್ರೀತಿಸುವ ಶಿಕ್ಷಕ ಮಕ್ಕಳು ಕಲಿಯುವುದನ್ನು ಪ್ರೀತಿಸುವಂತೆ ಮಾಡುತ್ತಾನೆ.
- ಇಟ್ ಟೇಕ್ಸ್ ಎ ಬಿಗ್ ಹಾರ್ಟ್ ಟು ಟೀಚ್ ಲಿಟಲ್ ಮೈಂಡ್ಸ್.
- ಶಿಕ್ಷಕ ಏನು ಬೋಧಿಸುತ್ತಾನೆ ಎನ್ನುವದಕ್ಕಿಂತ ಅವನು ಏನಾಗಿದ್ದಾನೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ.
- ವಿಥೌಟ್ ಟೀಚರ್ ಲೈಫ್ ವುಡ್ ಹ್ಯಾವ್ ನೊ ಕ್ಲಾಸ್.
- ಪ್ರತಿ ದಿನ ಮಕ್ಕಳು ಉತ್ಸಾಹದಿಂದ ಕಲಿಯಲು ಬರುವಂತೆ ಮಾಡುವ ಶಿಕ್ಷಕನಾಗು..
- ದಿ ಬೆಸ್ಟ್ ಟೀಚರ್ಸ್ ಆರ್ ದೋಸ್ ಹು ಶೊ ವೇರ್ ಟು ಲುಕ್ ಬಟ್ ಡೋಂಟ್ ಟೆಲ್ ಯು ವಾಟ್ ಟು ಸೀ.
- ನೀನು ನಿಜವಾಗಿಯೂ ಶಿಕ್ಷಕನಾಗುವುದು ಯಾವಾಗ ಗೊತ್ತೆ? ನಿನ್ನ ವಿದ್ಯಾರ್ಥಿಯೊಬ್ಬ ಕೊಟ್ಟ ಸಲಹೆ ಪುರಸ್ಕರಿಸಿ, ಮಕ್ಕಳ ಜತೆ ಕಲಿಯಲು ಪ್ರಾರಂಭಿಸಿದಾಗ.
- ಟೀಚರ್: ದಿ ಓನ್ಲಿ ಜಾಬ್ ದಟ್ ಮೇಕ್ಸ್ ಯು ರಿಕನ್ಸಿಡರ್ ಆಲ್ ದಿ ನೇಮ್ಸ್ ಫಾರ್ ಯುವರ್ ಓನ್ ಚಿಲ್ಡ್ರನ್.
- ಟೀಚಿಂಗ್: ಎ ಪ್ರೊಫೆಶನ್ ದಟ್ ಓನ್ಲಿ ಅಲೋಸ್ ಯು ಟು ಸೆ ಅಬೌಟ್ 10% ಆಫ್ ವಾಟ್ ಯು ರಿಯಲಿ ವಾಂಟ್ ಟು ಸೆ ಲೌಡ್.
- ನಾನೇನು ಹೊಗಳಿಕೊಳ್ಳುತ್ತಿಲ್ಲ ಆದರೆ ನನ್ನ ಟೀಚರ್ ಧ್ವನಿ ಎಷ್ಟು ಜೋರಿದೆ ಎಂದರೆ ಅದು ಪಕ್ಕದ ತರಗತಿಯ ಸದ್ದನ್ನೂ ಅಡಗಿಸುತ್ತದೆ.
- ಟೀಚರ್ಸ್ ಆರ್ ಲೈಕ್ ದಿ ರೋಡ್ ಸೈನ್ಸ್ ಬಿಕಾಸ್ ಈವೆನ್ ವೆನ್ ದೆ ಟೆಲ್ ಯು ವಾಟ್ ಟು ಡು ಯು ಸ್ಟಿಲ್ ಗೆಟ್ ಲಾಸ್ಟ್.
- ನಿನ್ನ ಅತ್ಯುತ್ತಮ ಟೀಚರ್ರೇ ನಿನ್ನ ಕೊನೆಯ ತಪ್ಪು.

■

# ಹಾಸ್ಯರಸ ಈ ವೃತ್ತಿಯಲ್ಲಿ

**● ಕವಿತಾ ಹೆಗಡೆ ಅಭಯಂ**

ಅಧ್ಯಾಪನ ವೃತ್ತಿ ಅಂದರೆ ಒಂದಿಲ್ಲೊಂದು ರೀತಿಯಲ್ಲಿ ಹಾಸ್ಯರಸದ ಸುರಿಮಳೆ! ಇಡೀ ದಿನವೆಲ್ಲ ಸಾವಿರಾರು ಜೀವಂತ ವ್ಯಕ್ತಿಗಳ ಜೊತೆಗೆ ವ್ಯವಹರಿಸುವ ಕಾರಣಕ್ಕೋ ಏನೋ ಹೆಜ್ಜೆ ಹೆಜ್ಜೆಗೂ ವಿಭಿನ್ನ ರಸಗಳು ನಮ್ಮನ್ನು ಬೆರಗಾಗಿಸುತ್ತವೆ. ಏಕತಾನತೆಗೂ ಬೇಸರಕ್ಕೂ ಜಾಗವಿಲ್ಲದ ಜಾಗವಿದು.

ಅಧ್ಯಾಪನ ವೃತ್ತಿಯಲ್ಲಿ ಹಲವು ರಸಗಳ ಅಭಿಷೇಕ ಆಗುತ್ತಲೇ ಇದ್ದರೂ ಚಿತ್ರ ವಿಚಿತ್ರ ಸ್ವಭಾವದ ವಿದ್ಯಾರ್ಥಿಗಳ ಹಾಗೂ ಸಹೋದ್ಯೋಗಿಗಳ "ಸಹ"ವಾಸದಿಂದ ನಮ್ಮನ್ನು ನಾವು ಜೀವಂತಿಕೆಯಿಂದ ಇಟ್ಟುಕೊಳ್ಳಲು ಅತ್ಯಂತ ಹೆಚ್ಚು ಸಹಾಯಕ್ಕೆ ಬರುವುದು ಹಾಸ್ಯರಸ. ಅದರಲ್ಲೂ ನಾನಂತೂ ಸಣ್ಣ ಸಣ್ಣದರಲ್ಲೂ ವಿನೋದ ಹುಡುಕುವುದಕ್ಕೇ ಖ್ಯಾತವಾದ, ಅದನ್ನು ಆಕರ್ಷಕವಾಗಿ ನಿರೂಪಿಸುವ ಕುಟುಂಬದ ಕೂಸು, ಬಿಡುತ್ತೇನೆಯೇ?

ಒಂದು ಆಷಾಢದ ಬೆಳಿಗ್ಗೆ. ಹಿಡಿದ ಜಡಿಮಳೆ ಬಿಡದೆ ವಾರವಾಗಿದ್ದಿರಬೇಕು. ಆ ಮಳೆಯ ಸದ್ದನ್ನೂ ಗುಂಗನ್ನೂ ಹಿಮ್ಮೆಟ್ಟಿಸುವಂತೆ ನಾವು ಮಾತ್ರ ಪಾಠ ಮಾಡಲೇಬೇಕು ತಾನೆ? ರಾಬರ್ಟ್ ಫ್ರಾಸ್ಟ್ ನನ್ನ ಮೆಚ್ಚಿನ ಕವಿಗಳಲ್ಲೊಬ್ಬ. ಇಂಗ್ಲಿಷ್ ಅಧ್ಯಾಪಕಿಯಾದ ನಾನು ಅವನ "ಸ್ಟಾಪಿಂಗ್ ಬೈ ದ ವುಡ್ಸ್ ಇನ್ ಅ ಸ್ನೋಯಿ ಈವ್ನಿಂಗ್" ಎಂಬ ಕವಿತೆಯನ್ನು ಮೈತುಂಬ ಆವಾಹಿಸಿಕೊಂಡು ಪಾಠ ಮಾಡುತ್ತಿದ್ದ ಕ್ಷಣ. ಇಡೀ ಕ್ಲಾಸು ತನ್ಮಯತೆಯಿಂದ ಮಂಜು ಸುರಿವ ಸಂಜೆಯ ಕಲ್ಪನಾವಿಲಾಸದಲ್ಲಿದ್ದಾಗ ಇದ್ದಕ್ಕಿದ್ದಂತೆ ಹುಡುಗನೊಬ್ಬ ಆವೇಶಭರಿತನಾಗಿ ಎದ್ದು ನಿಂತ. "ಮುಖಮ್ ಪದ್ಮದಾಲಾಕಾರಮ್" ಎಂಬುದನ್ನು ಕೇಳಿದ್ದೆ. ಇವನಾದರೋ ಆತಂಕ, ಕಳವಳಗಳಿಂದ ಮುಖವನ್ನೇ ಪ್ರಶ್ನಾರ್ಥಕ ಚಿಹ್ನೆಯನ್ನಾಗಿಸಿಕೊಂಡು

"ಟೀಚರ್ .ಟೀಚರ್ ನಿಮ್ಮ ಮನೇಲಿ ವಾಷಿಂಗ್ ಮಷಿನ್ ಇದೆಯಾ?" ಅಂದ!

ಎಂಥಾ ರಸಭಂಗ! ಎಂಥಾ ಆಭಾಸ! ಉಕ್ಕಿ ಬರುತ್ತಿದ್ದ ಭಾವತೀವ್ರತೆಯಿಂದ ಹೇಗೋ ಹೊರಬಂದು "ಹೌದು ಯಾಕಪ್ಪ?" ಎಂದೆ.

"ಒಳ್ಳೇದು .ಇಲ್ಲದಿದ್ದರೆ ಬಟ್ಟೆ ಒಣಗ್ತಾ ಇರ್ಲಿಲ್ಲ" ಎಂದು ಹೇಳಿ ಸುಮ್ಮನೆ ಕುಳಿತ! ಇಡೀ ಕ್ಲಾಸಿನೊಳಗೆ ನಗೆಯ ಮಳೆ!

ಇಂಗ್ಲಿಷ್ ಮೀಡಿಯಂ ಶಾಲೆಗಳಲ್ಲಿ ಮಕ್ಕಳಿಗೆ ಇಂಗ್ಲಿಷ್ ಸುಲಭ. ಅಂಥಾ ಫನ್ನಿ ಅನ್ನುವಂಥ ಮಾತುಗಳನ್ನು ಇಂಗ್ಲಿಷ್ನಲ್ಲಿ ಹೇಳುವುದು ಕಡಿಮೆ. ಆದರೆ ಅವರು ಕನ್ನಡದಲ್ಲಿ ಮಾತನಾಡುವುದು ಮತ್ತು ಬರೆಯುವುದು ಮಾತ್ರ ಸಿಕ್ಕಾಪಟ್ಟೆ ಕಿಕ್ ಕೊಡುತ್ತದೆ. ಅದರಲ್ಲೂ ಕನ್ನಡ ಪರೀಕ್ಷೆ ಅಂದರೆ ನನಗೆ ಸುಗ್ರಾಸ ಭೋಜನ! ಆ ನಿರೀಕ್ಷೆಯಲ್ಲೇ "ನಾ ನಡೆವ ಹಾದಿಯಲ್ಲಿ ಕನ್ನಡ ಪರೀಕ್ಷೆಯಿರಲಿ" ಎಂದು ಬೇಡಿಕೊಳ್ಳುತ್ತ ಸ್ಕೂಲಿಗೆ ವಿಶೇಷ ಖುಷಿಯಿಂದ ಹೋಗುತ್ತೇನೆ.

ಮಕ್ಕಳು ಬರೆಯುತ್ತಿರುವಾಗ ಒಂದೇ ಒಂದು ರೌಂಡ್ ಹೋದರೆ ಸಾಕು

ನಗೆಹೂವು ಮುಖದಲ್ಲಿ ಅರಳಿಕೊಳ್ಳುತ್ತದೆ. ಎಂದು ಎರಡನೇ ರೌಂಡಿನಲ್ಲಿ ನಮ್ಮನ್ನು ನೋಡಿದರೆ ತನ್ನಷ್ಟಕ್ಕೆ ತಾನೇ ನಗುವ ಹುಚ್ಚಿಯ ಹಾಗೆ ನನ್ನ ಅವತಾರ ಆಗಿರುತ್ತದೆ. ಅಷ್ಟು "ಹದ್ಭುತ ಭರವನಿಗೆ"ಯನ್ನು ಕಾಣಬಹುದು!

ನಮ್ಮ ಉತ್ತರ ಕುಮಾರನ ಈ ಬರಹ ಮಾತ್ರ ಪ್ರಸಸ್ತಿ ಇಜೇತ!

ಪ್ರಶ್ನೆ 1: ಸಂಕ್ರಾಂತಿ ಹಬ್ಬವನ್ನು ಹೇಗೆ ಆಚರಿಸಲಾಗುತ್ತದೆ?

ಉತ್ತರಕುಮಾರ: "ಸಂಕರತಿ ಅಬ್ಬದ ಧಿನ ಎನ್ನು ಮಕಲು ಬೆಲಿಗೆ ಬೀಗನೇ ಎದು ಮ್ಯಗೆ ಮತು ಥಲೆಗ  ಷ್ನನ ಮಡಿ ಬಚಿ ಉ ಮಡಿದು ಲಿಷ್ಟಫಿಕ್ ಹಚಿ ಕಜಲು ಹಚಿ ತಿಕಲಿ ಹಚಿ ರೆಡ್ಡಿ ಆಗುತರೆ. ಮತೆ ಬಗಿಲಿಗೆ ಮೆಂಗೋ ಥೋರನ ಕಟಿ ಬಗಿಲಿಗೆ ಬನಬನದ ರಂಗೂಲಿ ಹಕ್ಕಿ ಸ್ಯಾಂಗೆ ಪೈಸೆ ಮಡಿ ದೆವ್ವ ನಿಯೂವಿದ್ಯಾ ಮಡಿ ಉಠಾ ಮಡುತರೆ.

ಮಕಲು ಹೆಗಸರು ಹೋಸ ಸಿರಿ ಅನ್ನಗಿ ಹಕ್ಕಿಕೊಂದು ಎಲ್ಲು ಬೆಲ್ಲ ತಿಕ್ಕಂಡು ಮನೆ ಮನೆ ತಿರುಗುತರೆ. ಅಂಚುತಾರೇ. ನನಗ ಇ ಹಬ ಭಾಲ ಇಸಟ. ಅವ್ವ ಬೆಫ ಎಬಿಸಿ ಹಾಕುದು ಕಸಟ."

ಈ ಉತ್ತರದ ಮೇಲೆ ಲವ್ ಅಟ್ ಫಸ್ಟ್ ಸೈಟ್ ಆಗಿ ಹೋಯ್ತು ನನಗೆ! ಬೇಕೆಂತಲೇ ಹತ್ತು ರೌಂಡ್ ಹಾಕಿ ಉತ್ತರ ಕಂಠಪಾಠ ಮಾಡಿಬಿಟ್ಟೆ ನೋಡಿ. "ಹಾಸ್ಯ ರಸಾಯನವಲ್ತೆ ನಮ್ಮ ಕನ್ನಡ ಪರೀಕ್ಷೆ" ಎಂಬುದು ಅಂತೂ ಸಿದ್ಧವಾಗಿಹೋಯ್ತು.

ಭಾಷಾ ಪ್ರಾವೀಣ್ಯತೆ ಇಲ್ಲದೆ ಪರದಾಟ ನಡೆಸಿದ್ದ ಹುಡುಗ ಹೇಳಬಯಸಿದ್ದು ಮಾತ್ರ ನನ್ನ ವಿನೋದಕ್ಕೆ ಕಾರಣವಾಯ್ತು, ಬೈಬೇಡಿ.

"ಸಾಕ್ರಾಂತಿ ಹಬ್ಬದ ದಿನ ಹೆಣ್ಣು ಮಕ್ಕಳು ಬೆಳಿಗ್ಗೆ ಬೇಗನೆ ಎದ್ದು, ಮೈಗೆ ಮತ್ತು ತಲೆಗೆ ಸ್ನಾನ ಮಾಡಿ, ಬಾಚಿ, ಹೂ ಮುಡಿದು, ಲಿಪ್ಸಿಕ್ ಹಚ್ಚಿ, ಕಾಜಲ್ ಹಚ್ಚಿ, ಟಿಕಲಿ ಹಚ್ಚಿ ರೆಡಿ ಆಗುತ್ತಾರೆ. ಮತ್ತೆ ಬಾಗಿಲಿಗೆ ಮ್ಯಾಂಗೋ ತೋರಣ ಕಟ್ಟಿ, ಬಾಗಿಲಿಗೆ ಬಣ್ಣಬಣ್ಣದ ರಂಗೋಲಿ ಹಾಕಿ, ಶ್ಯಾವಿಗೆ ಪಾಯಸ ಮಾಡಿ,  ದೇವರಿಗೆ ನೈವೇದ್ಯ ಮಾಡಿ ಊಟ ಮಾಡುತ್ತಾರೆ. ಮಕ್ಕಳು, ಹೆಂಗಸರು ಹೊಸ ಸೀರೆ, ಅಂಗಿ ಹಾಕಿಕೊಂಡು ಎಳ್ಳು ಬೆಲ್ಲ  ತೆಗೆದುಕೊಂಡು, ಬೀರಿಕೊಂಡು ಮನೆಮನೆಗೆ ಹೋಗಿ ಹಂಚುತ್ತಾರೆ. ನನಗೆ ಈ ಹಬ್ಬ ಬಹಳ ಇಷ್ಟ. ಅವ್ವ ಬೇಗ ಎಬ್ಬಿಸಿಹಾಕುವುದು ಮಾತ್ರ ಕಷ್ಟ" ಅನ್ನಬೇಕಿತ್ತಾ ಅವನಿಗೆ?

ಪ್ರಶ್ನೆ 2: ನಿಮ್ಮ  ಹವ್ಯಾಸದ ಬಗ್ಗೆ ಒಂದು ಪ್ರಬಂಧ ಬರೆಯಿರಿ.

ಉತ್ತರಕುಮಾರ: "ಎಲ್ರಿಗೂ ಹಾವಸೆ ಇರಬೆಕ್ಕು ಎಂದ ನಮ ಟಿಚರ್ ಅನತಾರೆ. ನನಗರ ಒಂದ್ ಹಾವಸೆ ಐತಿ. ಮಾತಾಡುದ್ ನನ್ ಹಾವಸೆ. ಟಿಚರ ಕಲಸಾಕ್ ಹತ್ರ ನಾ ಇ ಕಡಿ ಮಾತಾಡಕ್ ಹತ್ತತೇನಿ. ಅವರ ಬೊರ್ಡ್ ಕಡಿ ತಿರಗಿದ್ರ ನಾ ಮಾತಾಡಕೊಂದು ಕುಂಡರತೇನಿ. ನನ್ನ ಏನರ ಕೊಚ್ಚನ್ ಕೇಳದರಷ್ಟ ಸುಮ್ಮಗ ನಿಂದರತೇನಿ. ಕುಂತ್ನಿ ಅಂದ್ರ ವಟ್ಟ ಬಾಯ್ ಮುಚ್ಚಗಿಲ್ಲ ನಾ. ಇದೂ ಚಲೋ ಹಾವಸೆ ಅಲ್ಲ ಅಂದರ ನನ್ ಟಿಚಾರ್. ಅದಕ್ಕ ಹೆಚ್ ಬರಿಯಾಕ್ ಹೋಗಂಗಿಲ."

ನನ್ನಿಂದ ನಗು ತಡೆಯಲು ಸಾಧ್ಯವಾಗಲಿಲ್ಲ.

ಪ್ರಶ್ನೆ 3: "ಎಲ್ಲೈ ರಣಹೇಡಿಯೇ  ಎಲ್ಲಿ ಅಡಗಿರುವೆ?"

ಈ ಮಾತನ್ನು ಯಾರಿಗೆ ಯಾರು ಹೇಳಿದರು?

ಎಲ್ಲಾ ಳಕಾರಗಳ ಬದಲಿಗೆ ಲಕಾರ....

ಬಿಟ್ಟ ಸ್ಥಳ ತುಂಬಿಕೊಳ್ಳಿ.

ಉತ್ತರ ಕುಮಾರ 3:

"ಇ ಮಾತನು  ಭಿಮ್ ದ್ರುಯೊದನ್ಗೆ ಹೇ--ದನು. ಕುಗಿದರೆ ಕೇಲುವದಿಲ್ಲ ಎಂದು ಕಿವ್ವಿಯಲಿ ಹೇ--ದನು. ತಾನು ಹೇ--ದ್ದು ಕೇಲದೆ ಹೋದರೆ ಅಂತ ಚೆಂದಾಗಿ ಮತ್ ಮತ್  ಜೋರಗಿ ಹೇ---ದನು."

ಹೀಗೆ ಕನ್ನಡ ಪರೀಕ್ಷೆಗಳು ತೇಲಿಸುವ ನಗೆಗಡಲ ಆಳದಲ್ಲಿ ಮಾತೃಭಾಷೆಗೆ ಕುತ್ತು ತಂದ ಬಗ್ಗೆ ಕೂಡ ವಿಷಾದ ಹೆಪ್ಪುಗಟ್ಟಿರುವುದು ಸುಳ್ಳಲ್ಲ. ಎಷ್ಟು ಪ್ರಯತ್ನಪಟ್ಟರೂ ಅಲ್ಲೊಬ್ಬ ಇಲ್ಲೊಬ್ಬ ಇಂತಹ ಉತ್ತರಕುಮಾರರು ತಿದ್ದಿಕೊಳ್ಳುವುದೇ ಇಲ್ಲ. ಆದರೆ ಔಟ್ ಆಫ್ ಔಟ್ ಪಡೆದ ಜಾಣರ ಉತ್ತರ ಮರೆತು ಹೋದರೂ ಇಂತಹ ಉತ್ತರಗಳು ಮನದಲ್ಲಿ ಸದಾ ಹಸಿರು.

ಇಂತಹ ನೂರಾರು ಸ್ವಾರಸ್ಯಕರ ಸರಮಾಲೆತೊಡುವ ಭಾಗ್ಯ ಮಾತ್ರ ಅಧ್ಯಾಪಕರದು. ಚಿಕ್ಕ ಪುಟ್ಟ ಘಟನೆಗಳಲ್ಲಿ  ಖುಷಿಕಾಣುವ, ನಲಿಯುವ ಗುಣ ಬೆಳೆಸಿಕೊಂಡರೆ ಈ ವೃತ್ತಿಯಷ್ಟು ಸಂತೋಷಪಡಬಹುದಾದ ವೃತ್ತಿ ಇನ್ನೊಂದಿಲ್ಲ. ■



ನಂಗೆ ತಿನ್ನೋಕೆ ಹಾಗೂ ಮಾರ್ಕ್ಸ್ ಕಾರ್ಡಲ್ಲಿ
ಎರಡರಲ್ಲೂ ಬ್ಯಾಡ ಮ್ಯಾಮ್ 'ಮೊಟ್ಟೆ'...

# ಅನುಭವಗಳ ನೆನಪಿನಲ್ಲಿ

● ಡಾ. ಶ್ಯಾಮಲಾ ರವಿಶಂಕರ್

ಆಗಷ್ಟೇ ಎಂ.ಎಸ್ಸಿ ಪದವೀಧರಳಾದ ನನಗೆ ಬ್ಯಾಂಕ್ನಲ್ಲಿ ಆಫೀಸರ್ ಕೆಲಸ ಸಿಕ್ಕಿದಾಗ "ಅಯ್ಯಪ್ಪ, ಬೆಳಗಿಂದ ಸಾಯಂಕಾಲದ ವರೆಗೂ ಕುರ್ಚಿನ ಅಲಂಕರಿಸೊ ಛಾತಿ ನನಗಿಲ್ಲ" ಎಂದು ಭೀಷ್ಮ ಪ್ರತಿಜ್ಞೆ ಮಾಡೇಬಿಟ್ಟೆ. ಯಾಕೋ ಹುಡಿಗಿಗೆ ಸ್ವಲ್ಪ ಸರಿಯಾಗಿ ದೊಡ್ಡವರು ಬುದ್ಧಿ ಹೇಳಿಲ್ಲ ಎಂದು ಅಂದು ಕೊಂಡರು ಹಲ ಹಿತೈಷಿಗಳು. ನಾನು ತುಟಿಪಿಟಕ್ಕೆನ್ನಲಿಲ್ಲ. ಮಾಡಿದರೆ ಲೆಕ್ಚರರ್ ಕೆಲಸ, ಇಲ್ಲಾಂದ್ರೆ ಗೊತ್ತೇ ಇದೆಯಲ್ಲ, ಉಂಡಾಡಿ ಕೊಂಡಿರೋದು, ಇದು ನನ್ನ ನಿರ್ಧಾರ.

ಸರಿ ಹಾಗೆ, ಆರಾಮವಾಗಿ ಒಂದಷ್ಟು ಕಾಲೇಜಿಗಳಿಗೆ ಅರ್ಜಿ ಸಲ್ಲಿಸಿ ಬಂದಿದ್ದೆ.ನಾನೇನೂ ಕೆರಿಯರ್ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಮೈಸೂರಿನಲ್ಲಿ ಸಿಕ್ಕಿತು ಇಂಟರ್ವ್ಯೂ ಇಲ್ಲದೇನೆ. ಅಯ್ಯೋ , ಬೆಂಗಳೂರು ಬಿಡೋಲ್ಲ ಅಂತ ಏಕ್ ದಂ ನಿರಾಕರಿಸೆ ಬಿಟ್ಟೆ. ನಮ್ಮ ಬೆಂಗಳೂರಿನಲ್ಲಿ ಎರಡು ಕಾಲೇಜಿಗಳಲ್ಲಿ ಇಂಟೆರ್ ವ್ಯೂ ಆಗಿ ಕೆಲಸ ಸಿಕ್ಕಿತು. ನನ್ನ ಸೋಮಾರಿತನಕ್ಕೆ ಅನುಗುಣವಾಗಿ ಮನೆ ಹತ್ತಿರವಿದ್ದ ಕಾಲೇಜಿಗೆ ಹೋಗಿ ರಿಪೋರ್ಟ್ ಮಾಡಿ ಕೊಂಡೆ.ಹೀಗೆ ಶುರುವಾಯಿತು ನನ್ನ ಕೆರಿಯರ್.

ಇನ್ನು ನನ್ನ ಮೊದಲನೇ ಥಿಯರಿ ಕ್ಲಾಸಿನ ಅನುಭವ. ಅದೊಂದು ಅತಿ ದೊಡ್ಡ ಗ್ಯಾಲರಿ. ಸುಮಾರು 100 ಹುಡುಗರಿದ್ದರು. ಇದೇನು ಕ್ಲಾಸೊ ಸಾರ್ವಜನಿಕ ಸಭೆಯೂ ಅಂಥ ಸ್ವಲ್ಪ ಅನುಮಾನಿಸಿದೆ. ಅಲ್ಲಿಗೆ ಹುಡುಗರಿಗೆ ಮೇಲುಗೈ ಕೊಟ್ಟಂತಾಯಿತು. ಕಾಲಿಡುತ್ತಿದ್ದಂತೆ ಕೆಟ್ಟ ಕೋರಸ್ : ಭಾಗ್ಯಾದ ಲಕ್ಷ್ಮಿ ಬಾರಮ್ಮ. ಆಮೇಲೆ ಗೊತ್ತಾದದ್ದು ಅದು ನನ್ನ ಕೆರಿಯರ್ ಅನ್ನೋ ಭಾಗ್ಯಾದ ಲಕ್ಷ್ಮಿ ಅಂತ. ಇರಲಿ. 21 ವರ್ಷದವಳಿಗೆ ಅಷ್ಟೆಲ್ಲ ಬುದ್ಧಿ ಇರತ್ತಾ? ಹೇಗೂ ಅವರ ಬಾಯಿ ಬಿಟ್ಟಿತ್ತಲ್ಲ, ಚೆನ್ನಾಗಿ ಉಪಯೋಗಿಸಿಕೊಂಡರು ಶಿಖಾಮಣಿಗಳು. ನಾನ್ಸ್ಟಾಪ್ ಬೆಕ್ಕು, ಕುರಿ. ಕತ್ತೆ. ಹಸು ಇವುಗಳ ವಾಯ್ಸ್ ಓವರ್ಗಳು ಏಕಕಾಲದಲ್ಲಿ ! ದಿಗ್ಭ್ರಮೆ ಅಂದ್ರೆ ನನ್ನ ಭಾವನೆಗಳಿಗೆ ಅಂಡರ್ ಸ್ಟೇಟ್ಮೆಂಟು ನನ್ನ ತಯಾರಿ ಏನಿದ್ರೂ ಒಂದು ಘಂಟೆ ಕಾಲದಲ್ಲಿ ಎಷ್ಟು ಪೇಜ್ ಪಾಠ ಮಾಡಬಹುದು ಎಂದು. ಇಲ್ಲಿ ನಾನು ಸುಮ್ಮನೆ ನಿಂತಿದ್ದೆ. ಸದ್ಯ ಏನೂ ಹೇಳೋ ಸ್ಥಿತೀಲಿ ಇರಲಿಲ್ಲ ಅದು ನನ್ನ ಒಳಿತೇ ಆಯಿತು ಅಂತ ಇಟ್ಟು ಕೊಳ್ಳಿ. ಹಿರಿಯ ಸಹೋದ್ಯೋಗಿಗಳು ಹೇಳಿದ ಕೆಲವು ಸಲಹೆಗಳು: ಗೆಟ್ ಔಟ್ ಅನ್ನಬೇಡ. ನಾವು ದುಡ್ಡು ಕೊಟ್ಟಿದ್ದೀವಿ ಇಲ್ಲೇ ಇರ್ತೀವಿ ಅಂತಾರೆ. ಗಲಾಟೆ ನಿಲ್ಲಿಸಿ ಅಂದ್ರೆ ಇನ್ನೂ ಜಾಸ್ತಿ ಮಾಡತಾರೆ. ಸುಮ್ನೆ ಇರು. ತಮಗೆ ಸುಸ್ತಾದಾಗ ಅವ್ರೆ ಸುಮ್ಮನೆ ಆಗತಾರೆ. ವಗೈರೆ , ವಗೈರೆ. ಅದನ್ನೇ ಅನುಕರಿಸಿ ಸುಮ್ಮನೆ ನಿಂತೆ ಇದ್ದೆ. 10–15 ನಿಮಿಷ ಕಳೆದಿರಬಹುದು, ನಿಧಾನವಾಗಿ ಮಂದ್ರ ಸ್ಥಾಯಿಗೆ ಇಳಿಯಿತು. ಗಲಾಟೆ. ಆಗಲೂ ಸುಮ್ಮನೆ ನೇ ನಿಂತಿದ್ದೆ, ಸಂಪೂರ್ಣ ನಿಶ್ಯಬ್ಧ. ಈಗ ನೆನೆಸಿ ಕೊಂಡರೆ ಹೇಗೆ ಕಳೆದೆನಪ್ಪಾ ಆ ನಿಮಿಷಗಳನ್ನ ಅನ್ನಿಸತ್ತೆ. ನಂತರ ನನ್ನ ಪರಿಚಯ ಮಾಡೋಕೆ ಬಾಯಿ ತೆಗೆದೆ, ಮತ್ತೆ ಶುರು ಆಯಿತು ಸ್ವರಾಲಾಪ. ನಾನು ಮತ್ತೆ ನನ್ನ ಆಯುಧ ಧರಿಸಿದೆ – ಮೌನ. ಅವರಿಗೆ ಅನ್ನಿಸಿರಬೇಕು ಈ ಪ್ರಾಣಿ ಇಷ್ಟಕ್ಕೆಲ್ಲ ಜಗ್ಗೋಲ ಅಂತ. ಕೆಲವರು

ಹೊರಡೊಕ್ಕೆ ಸನ್ನದ್ಧರಾದರು, ಮತ್ತೆ ಕೆಲವರು ಅವರನ್ನು ಹಿಡಿದು ಕೂರಿಸಿದರು.ತಮಾಷೆ ಮಿಸ್ ಮಾಡ್ಕೋ ಬೇಡಿರೋ ಅನ್ನೋಹಾಗೆ ! 5 ನಿಮಿಷಃಳಲ್ಲಿ ಎಲ್ಲರು ಸುಸ್ತು, ನಾನು ಚೇತರಿಸ್ಕೊಂಡು ಬಿಟ್ಟಿದ್ದೆ ಅಷ್ಟು ಹೊತ್ತಿಗೆ. ಇನ್ನು ಮುಂದಿನದು ಇತಿಹಾಸ.ಅದೇ ಬ್ಯಾಚ್ ಹುಡುಗರು ನಾನು ಮದುವೆಯಾದೆ ಮೇಲೆ ರಾಜೀನಾಮೆ ನೀಡಿ ಹೈದರಾಬಾದಿಗೆ ಹೊರಟ ದಿನ ರೈಲ್ವೆ ಸ್ಟೇಷನ್ ನಲ್ಲಿ ನೆರೆದಿದ್ದನ್ನು ನೋಡಿ ನನ್ನ ಕಣ್ಣಲ್ಲಿ ಕಂಬನಿ ಮಿಡಿಯಿತು. ಮುಂದೆ ಅವರಲ್ಲಿ ಒಬ್ಬ ನನ್ನ ಕಸಿನ್ನ ಮದುವೆಯಾದಾಗ ಹಸೆ ಮಣೆ ಯಿಂದಲೇ ನನಗೆ ಇದನ್ನ ನೆನೆಪಿಸಿದ!

ಎಂಎಸ್ಸಿ ಆದ ಕೂಡಲೇ ಅಷ್ಟು ಸುಲಭವಾಗಿ ಕೆಲಸ ಸಿಕ್ಕಿದ ನನಗೆ ಪಿಹೆಚ್ಡಿ ನಂತರ ಕೆಲಸಕ್ಕೆ ಪರೆದಾಡಿದ್ದು ಅಷ್ಟಿಷ್ಟಲ್ಲ.ಯಾವ ಕಾಲೇಜಿಗೆ ಇಂಟರ್ ವ್ಯೂ ಗೆ ಹೋದರೂ "ನಿನಗೆ ತೆಲುಗಿನಲ್ಲಿ ಪಾಠ ಮಾಡೋಕೆ ಬರೋಲ್ಲ " ಅಂತ ನಿರಾಕರಣೆ! ಅಲ್ಲಿ ನೋಡಿದರೆ ತೆಲುಗು ಮಾಧ್ಯಮವೇ ಇರತಾ ಇರಲಿಲ್ಲ ! ಮತ್ತೆ ನನ್ನ ನಿರಾಕರಣೆಗೆ ಕಾರಣ? ಲೋಕಲ್ ವರ್ಸಸ್ ನಾನ್ ಲೋಕಲ್!

ಹಾಗೂ ಹೀಗೂ ಹೆಣ್ಣು ಮಕ್ಕಳ ಕಾಲೇಜೊಂದರಲ್ಲಿ ಪಾರ್ಟ್ ಟೈಮ್ ಕೆಲಸ ಸಿಕ್ಕಿತು. ಅದರಲ್ಲಿ ಹಾಸ್ಟೆಲ್ ಕೂಡ ಇದ್ದು ಪ್ರಿನ್ಸಿಪಾಲರು ನಾನು ಸೇರುವ ಹಿಂದಿನ ರಾತ್ರಿ ಹಾಸ್ಟೆಲ್ಗೆ ಹೋಗಿ ಬಿಎಸ್ಸಿ ಫೈನಲ್ ವಿದ್ಯಾರ್ಥಿಗಳಿಗೆ ಸದುದ್ದೇಶದಿಂದ "ನಾಳೆಯಿಂದ ನಿಮಗೆ ಡಾಕ್ಟೊರೇಟ್ ಮಾಡಿರೋ ಉಪನ್ಯಾಸಕಿ ಬರತಾರೆ , ಅವರಿಂದ ಚೆನ್ನಾಗಿ ಪಾಠ ಕಲಿತು ಒಳ್ಳೆ ಇಂಪ್ರೆಷನ್ ಗಳಿಸ ಬೇಕು " ಎಂದು ಹೇಳಿದ್ದರಂತೆ. ಅವರಿಗೆ ಅಷ್ಟೇ ಸಾಕು , ನನ್ನ ಕ್ಲಾಸಿಗೆ ನನಗಿಂತಲೂ ಜೋರಾಗಿ ತಯಾರಿ ನಡಸಿ ಹಾಜರಾದರು.ತಯಾರಿ? ಗಂಟೆ, ಜಾಗಟೆ, ಬಲೂನು ಟೇಪ್ ರೆಕಾರ್ಡರು ವಗೈರೆ. ನಾನು ಕಾಲಿಡುತ್ತಲೇ ಕಮಲದ ಹೂವಿನ ಕುಟುಂಬ Nymphaeaceae ಯ ಮುಖ್ಯ ಲಕ್ಷಣಗಳು ಅಂತ ಪಾಠ ಶುರು ಮಾಡಿದ್ದರಿಂದ ಆ ಕಮಂಗಿಗಳಿಗೆ ತಬ್ಬಿಬ್ಬಾಗಿ ಏನೂ ತೋಚಲಿಲ್ಲ ಅಂತ ಕಾಣತ್ತೆ, ಸರಸರ ಅಂತ ನೋಟ್ಸ್ ಬರ್ಕೊಳ್ಳೋಕೆ ಪ್ರಾರಂಭಿಸಿದರು. ಒಂದು ಗಂಟೆ ನಂತರ ಪಾಠ ಮುಗಿಸಿ ನಾನು ಹೊರನಡೆದಾಗ ಏನೂ ತೋಚದೆ ಇದ್ದಕ್ಕಿದ್ದಂತೆ ಗುಲ್ಲುಗುಲ್ಲು : ಹೇಗೂ ಹೊರಟು ಬಿಟ್ಟಿದ್ದೆನಲ್ಲ, ಕೆಲವರು ಓಡಿಬಂದು " ಪರಿಚಯ ಮಾಡಿಕೊಳ್ಳಿ ಮಾಮ್ " ಅಂಥ ಹಿಂದೆ ಬಿದ್ದವರನ್ನ ಮುಂದಿನ ದಿನ ಕ್ಲಾಸಿನಲ್ಲಿ ತಪ್ಪದೆ ಮಾಡಿಕೊಳ್ಳುತ್ತೇನೆ ಎಂದು ಮುನ್ನಡೆದೆ.ಅವರ ತಯಾರಿ ನಿಷ್ಫಲವಾದದ್ದು ನನಗೆ ತಿಳಿದಿದ್ದು ಅವರ ಕ್ಲಾಸ್ ಸೋಷಿಯಲ್ಸ್ ನಲ್ಲಿ! ರೆಕಾರ್ಡ್ ಮಾಡಿರೋದು ಕೊಡಿ ನನಗೆ ತಮಾಶಿಗಾದರೂ ನಿಮ್ಮ ಗುರುತಾಗಿ ಇಟ್ಟುಕೊಳ್ಳುತೀನಿ ಅಂದೆ. "ಎಲ್ಲಿ ಮಾಂ, ಕಮಲದ ಹೂವಿನ ಅಂದ ಚಂದ ದಲ್ಲಿ ಮುಳಿಗಿ ಹೋಗಿ ಆನ್ ಮಾಡೋದೇ ಮರೆತು ಹೋದ್ವಿ " ಅನ್ನಬೇಕಾ ? ಮಾತೆ ಕಮಲಾಂಬೆಯ ದಯೆ! ಇನ್ನು ವಿಶೇಷ ಏನಪ್ಪಾ ಅಂದರೆ ಅವರ ಲೀಡರು ಬಂದು ನನ್ನ ಸಂಬಂಧ ವಂತೆ ಬೆಂಗಳೂರು ಕನೆಕ್ಷನ್ ಹೇಳಿ ಕೊಂಡಳು.

ಇನ್ನು ಯೂನಿವರ್ಸಿಟಿಯಲ್ಲಿ ನನ್ನ ವಿದ್ಯಾರ್ಥಿಗಳು ಕೊಡುತ್ತಿದ್ದ ಹಲವು ಉತ್ತರಗಳು : ಯಾಕಪ್ಪ ಲೇಟು ಅಂದ್ರೆ "ಪನಿ ಉನ್ನಿಂದಿ ಮಾಂ." ಅದಕ್ಕೆ ನಾನು " ಪನಿ ಲೇಕಪೋತೇ ಕ್ಲಾಸ್ಕೊಸ್ತಾವ " ಅಂದೆ. ಅಂದಿನಿಂದ ಅವರು ಸಾಬೀತು

ಪಡಿಸಿಕೊಳ್ಳಲು ಬೇರೆ ಬೇರೆ ಕಾರಣಗಳನ್ನ ಹೇಳೋಕೆ ಶುರು ಮಾಡಿದರು ಹೆಚ್ಚು ವಿದ್ಯಾರ್ಥಿಗಳು ತೆಲುಗು ಮಾಧ್ಯಮದಲ್ಲಿ ಡಿಗ್ರಿ ಪಡೆದವರು. ಇಂಗ್ಲಿಷ್ ಅವರ ದುರ್ಬಲತೆ. ಡಿಗ್ರಿ ಇಂಗ್ಲಿಷ್ ಹೇಗೆ ಪಾಸ್ ಮಾಡಿದ್ರಿ ಅಂದ್ರೆ ಬರ್ತಿದ್ದ ಉತ್ತರ, ಉರು ಹೊಡೆದು, ಎಂದು. ಅಯ್ಯೋ ದೇವರೇ, ಪದ್ಯದಲ್ಲಾದರೂ ಪ್ರಾಸ ಇರತ್ತೆ. ಗದ್ಯ ಹೇಗೆ ಹೊಡೆದರಪ್ಪಅಂತಾ ಕೇಳಿದರೆ ಮುಂಜಾನೆ ಎದ್ದು. ಅಂತ ಕಥೆ ಹೇಳೊವ್ರು. ನನಗೆ ಇದುವರೆಗೂ ಇದು ತಲೆಗೆ ಹತ್ತಿಲ್ಲ.

ಇನ್ನು ರಾಗಿಂಗ್ ವಿಷಯಕ್ಕೆ ಬಂದರೆ ದಿನಕ್ಕೊಂದು ತರಲೆ ತಮಾಷೆಗಳು! ಒಮ್ಮೆ ಮಧ್ಯಾಹ್ನ ಪ್ರಿನ್ಸಿಪಾಲರ ಚೇಂಬರ್‌ನಿಂದ ವಾಪಸ್ ಬರ್ತಾ ಇದ್ದಾಗ ಜೋರು ಮಳೆ ಬಂದು ನಾನು ಅಲ್ಲೇ ಇದ್ದ ಕ್ಲಾಸ್ ರೂಮ್ನು ಹೊಕ್ಕೆ. ಅಲ್ಲಿ ಪ್ರಾಣಿ ಶಾಸ್ತ್ರದ ಹೊಸ ವಿದ್ಯಾರ್ಥಿನಿಯರನ್ನ ನನ್ನವಿದ್ಯಾರ್ಥಿನಿಯರು ರಾಗ್ ಮಾಡ್ತಿದ್ರು. ಹೊಸಬರಿಗೆ ನಾನು ಗೊತ್ತಿರಲಿಲ್ಲ, ಸೀನಿಯರ್ ಗಳು ನಾನು ಅಲ್ಲಿದ್ದಿದ್ದನ್ನು ನೋಡಿರಲಿಲ್ಲ. ಹಾಗಾಗಿ ನನಗೆ ಅವರ ಪೂರ್ತಿ ನಾಟಕ ನೋಡೋ ಅವಕಾಶ ಸಿಕ್ಕಿತು. ಸಂಭಾಷಣೆಯ ವಿಷಯ ಮದುವೆ ಮಾತು ಕಥೆ. ಜೂನಿಯರ್ ಹುಡುಗಿ ವಧು, ಸೀನಿಯರ್ ಹುಡುಗಿ ವರ ಮಿಕ್ಕವರೆಲ್ಲ ತಾಯಿ ತಂದೆ ಹಾಗೂ ಮಧ್ಯವರ್ತಿಗಳು. ಕನ್ನಡದ ಅನುವಾದ ಹೀಗೆ: ವರನ ತಂದೆ "ನನ್ನ ಮಗ ತುಂಬ ಬುದ್ಧಿವಂತ, ಸ್ಕಾಲರ್ಷಿಪ್ ನಲ್ಲೆ ಓದಿದ್ದಾನೆ. ಒಳ್ಳೆ ಕೆಲಸದಲ್ಲಿದ್ದಾನೆ ವರದಕ್ಷಿಣೆ ಎಷ್ಟು ಕೊಡತೀರಿ "ಅಷ್ಟರಲ್ಲಿ ಹುಡುಗಿಯ ತಾಯಿ" ಹಾಗಾದರೆ ಅವನಿಗೆ ನೀವು ಹೆಚ್ಚು ಖರ್ಚು ಮಾಡಿದ ಹಾಗೆ ಕಾಣೋಲ್ಲ.

ಅಂತ ರಾಗ ! ಅಷ್ಟರಲ್ಲಿ ಸೀನಿಯರ್ " ಮೈಂಡ್ ಯುವರ್ ಟಂಗ್. ಇದು ರಾಗಿಂಗ್‌ಉ." ಅಂತ ಗದರಿದಳು.. ಅಷ್ಟರಲ್ಲಿ ಇನ್ನೊಬ್ಬಳು "ಅಂತಸ್ಥಿಗೆ ತಕ್ಕಂತೆ. "ಅಂದಳು. ಮರು ಪ್ರಶ್ನೆ: "ಯಾರ ಅಂತಸ್ಥಿಗೆ ?" ಸಂಭಾಷಣೆ ಸ್ವಲ್ಪ ಖಾರದೆಡೆಗೆ ವಾಲುತ್ತಿತ್ತು.


' ಏತನ್ಮಧ್ಯೆ ಹುಡುಗ ಹುಡುಗಿ ಪಾತ್ರ ವಹಿಸಿದವರು ಮಧ್ಯೆ ಮಧ್ಯೆ ಕಳ್ಳ ನೋಟ ಹರಿಸ್ತಾ ಇದ್ದರು. ಅಲ್ಲಿವರೆಗೂ ಪೆಕ್ರ ಮುಖ ಹಾಕ್ಕೊಂಡಿದ್ದ ಹುಡುಗ ಚಕ್ಕನೆ ಎದ್ದು ಹೋಗಿ ಹುಡುಗಿನ ಎಬ್ಬಿಸಿ ಇಬ್ಬರೂ ಕ್ಲಾಸಿನಿಂದ ಹೊರಕ್ಕೆ ಮಳೇಲಿ ಓಡಿ ಹೋಗಿ ಬಿಟ್ಟರು. ಮಿಕ್ಕಿದ್ದವರಿಗೆಲ್ಲ ಇದು ಶಾಕ್.ಅವರು ಈ ನಾಟಕಕ್ಕೆ ತಯಾರಾಗಿರಲಿಲ್ಲ! ಆ ಇಬ್ಬರು ಹುಡುಗಿಯರು ಈ ರಾಗಿಂಗ್ ಅನ್ನೋ ನಾಟಕನ ಎಷ್ಟು ಚೆನ್ನಾಗಿ, ಸಮಯೋಚಿತವಾಗಿ spontaneous ಆಗಿ ನಟಿಸಿ ಎಲ್ಲರನ್ನೂ ನಗಿಸಿದ್ದರು! ನನ್ನನ್ನೂ ಸೇರಿಸಿ! ಎಲ್ಲರೂ ಬಿದ್ದೂ ಬಿದ್ದೂ ನಗುತ್ತಿದ್ದಾಗ ನನ್ನನ್ನ ನೋಡಿದವರೇ ಏನೇನೊ ಸಮಝಾಯಿಷಿ ಹೇಳೋಕೆ ಶುರು ಮಾಡಿದರು ನನ್ನ ಶಿಷ್ಯೆಯರು. "ನಾನು ಎಲ್ಲಾನೂ ಕೇಳಿ ನೋಡಿ ಆಗಿದೆ. ನಿಮಗೆ ಹೇಳುವುದಕ್ಕೇ ಏನೂ ಉಳಿದಿಲ್ಲ" ಎಂದು ನಗುತ್ತಾ ನನ್ನ ರೂಮಿಗೆ ಹೋದೆ. ■

---

3–4 ದಶಕಗಳ ಅವಧಿಯಲ್ಲಿ ಇಂಥ ತಮಾಷೆಗಳು ಎಷ್ಟೆಲ್ಲಾ ನಡೆದಿದೆಯೋ!
ಯಾರು ವಿದ್ಯಾರ್ಥಿಗಳ ಮಟ್ಟಕ್ಕೆ ಇಳಿದು ಅವರನ್ನು ತಮ್ಮ ಮಟ್ಟಕ್ಕೆ
ಏರಿಸುತ್ತಾರೋ ಅವರೇ ನಿಜವಾದ
ಮತ್ತು ಯಶಸ್ವೀ ಉಪಾಧ್ಯಾಯರು – **ಸುಕೇಶವ**

# ಟೀಚರ್

**● ಪಾಲಹಳ್ಳಿ ವಿಶ್ವನಾಥ್**




ಉತ್ಸಾಹೀ ವಿದ್ವಾಂಸರು ಕನ್ನಡದಲ್ಲಿ ಆಗಾಗ್ಗೆ ವೈಜ್ಞಾನಿಕ ನಿಯತಕಾಲಿಕೆಗಳನ್ನು ಹೊರತಂದಿದ್ದಾರೆ. ಆದರೆ ಸಾಮಾನ್ಯವಾಗಿ ಅವುಗಳನ್ನು ನಡೆಸಿಕೊಂಡು ಬರುವುದು ಸುಲಭವಲ್ಲ. ಅವು ಏನಾದರೂ ಅಡಚಣೆಗಳನ್ನು ಎದುರಿಸುತ್ತಲೇಇರುತ್ತವೆ. ಹಾಗೂ ಇದೆಲ್ಲದರ ಮಧ್ಯೆಒಂದು ನಿಯತಕಾಲಿಕೆ ಕಳೆದ 20ವರ್ಷಗಳಿಂದ ಸತತವಾಗಿ ಪ್ರಕಟವಾಗುತ್ತಿದೆ. ಅದೇ 'ಟೀಚರ್' ಮಾಸಪತ್ರಿಕೆ ! ಇದರ ವಿಶೇಷ ? ಮುಖ್ಯವಾಗಿ ಶಿಕ್ಷಕ ಸಮುದಾಯಕ್ಕೆ ಮೀಸಲಾದ ಪತ್ರಿಕೆ!

ಈ ಪತ್ರಿಕೆ ಪ್ರಾರಂಭವಾದ ರೀತಿ ಸ್ವಾರಸ್ಯಕರವಾಗಿದೆ. 1990ರ ದಶಕದಲ್ಲಿ ಇಡೀ ದೇಶದಲ್ಲಿ ನಡೆದ 'ಸಾಕ್ಷರತಾ ಆಂದೋಲನ' ಎಂಬ ಸಾಂಸ್ಕೃತಿಕ ಚಳುವಳಿಯ ಆದರ್ಶಗಳನ್ನು ಮುಂದಕ್ಕೊಯ್ಯಲು ಭಾರತಜ್ಞಾನ ವಿಜ್ಞಾನ ಸಮಿತಿ ಎಂಬ ಸಂಘಟನೆ ರೂಪುಗೊಂಡಿತು. ಮೂಢ ನಂಬಿಕೆಗಳ ವಿರುದ್ಧ ಹೋರಾಡುತ್ತ ವೈಜ್ಞಾನಿಕ ತಿಳುವಳಿಕೆ ಮತ್ತು ವೈಚಾರಿಕತೆಗಳ ಚಿಂತನೆ ಮತ್ತು ಸಂದೇಶಗಳನ್ನು ಪಸರಿಸುವುದು ಅದರ ಉದ್ದೇಶವಾಗಿತ್ತು. ಜೊತೆಗೆ ಅದು ಸಮಾಜದಲ್ಲಿ ಸಮಾನತೆ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಹರಡುವಒಂದು ಸಾಂಸ್ಕೃತಿಕ ಚಳುವಳಿಯ ರೂಪವನ್ನು ಪಡೆದಿದ್ದು ದೇಶಾದ್ಯಂತ ಹಲವಾರು ಪ್ರತಿಷ್ಠಿತ ವಿಜ್ಞಾನಿಗಳು, ಸಾಹಿತಿಗಳು, ಚಿಂತಕರು ಇತ್ಯಾದಿ ಭಾಗವಹಿಸಿದ್ದರು. ಈ ಆಂದೋಲನದಲ್ಲಿಕರ್ನಾಟಕದಲ್ಲಿ ವಿಶೇಷವಾಗಿ ಶಿಕ್ಷಕರು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದರು. ಶಿಕ್ಷಕರೆಲ್ಲರ ನಡುವೆ ವಿಚಾರವಿನಿಮಯಕ್ಕಾಗಿ ಮತ್ತು ಸಂಪರ್ಕ ಸೇತುವಾಗಿ ಕೆಲಸ ಮಾಡುವ ಮಾಧ್ಯಮವೊಂದರ ಅವಶ್ಯಕತೆ ಹುಟ್ಟಿದಾಗ 'ಟೀಚರ್' ಎಂಬ ಮಾಸಪತ್ರಿಕೆ ಜನ್ಮತಾಳಿತು. ಶಿಕ್ಷಕರಿಗೆ ಮಾತ್ರವಲ್ಲ, ಬೇರೆಬೇರೆ ಹಿನ್ನೆಲೆಗಳ ಮತ್ತು ಆಸಕ್ತಿಗಳ ಓದುಗರಿಗೂ ಆಕರ್ಷಕವಾಗಿರುವಂತೆ ಜನಪ್ರಿಯ ಬರಹಗಳೂ ಇರುವಂತೆ ನೋಡಿ ಕೊಳ್ಳಲಾಯಿತು. ಹೀಗೆ 2002 ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ಟೀಚರ್ ಪತ್ರಿಕೆ ಪ್ರಾರಂಭವಾಗಿ. ಪ್ರೊ.ಗಂಗಾಧರ ಮೂರ್ತಿಯವರು ಪ್ರಧಾನ ಸಂಪಾದಕರಾಗಿಯೂ, ಜಿ.ವಿನುತ ಅವರು ಸಂಪಾದಕಿಯಾಗಿಯೂ ಕೆಲಸ ಮಾಡಲು ಶುರುಮಾಡಿದರು.

ಕಳೆದ 20 ವರ್ಷಗಳಲ್ಲಿ ವಿಜ್ಞಾನಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲದೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಅನೇಕ ಲೇಖನಗಳು ಪ್ರಕಟವಾಗಿವೆ. ವಿಜ್ಞಾನದ ವಿಷಯಗಳನ್ನು ಬಹಳ ಸರಳವಾಗಿ ಶಿಕ್ಷಕರಿಗೆ ತಿಳಿಸುವುದಲ್ಲದೆ, ಅವರಿಗೆ ಇರಬಹುದಾದ ಸಾಮಾನ್ಯ ಅನುಮಾನಗಳ ಬಗ್ಗೆ ಕೇಂದ್ರೀಕರಿಸುವುದು ಪತ್ರಿಕೆಯ ಹೆಚ್ಚುಳಿಕೆ. ಕನ್ನಡ ಭಾಷೆಯ ಬಗ್ಗೆಯಲ್ಲದೆ ಆಗಾಗ್ಗೆ ಹೊರಬರುವ ವಿವಿಧ ವಿಷಯಗಳ ಸ್ವಾರಸ್ಯಕರ ಪುಸ್ತಕಗಳ ಪರಿಚಯ ಮತ್ತು ವಿಮರ್ಶೆಗಳೂ ಪ್ರಕಟವಾಗುತ್ತವೆ. ಕೃಷಿ ಕ್ಷೇತ್ರದಲ್ಲೂ ಒಳ್ಳೆಯ ಲೇಖನಗಳು ಪ್ರಕಟವಾಗುತ್ತವೆ. ಸಂವಿಧಾನ ಮತ್ತುಇತರ ವಿಷಯಗಳ

ಬಗ್ಗೆ ಪ್ರಶ್ನೋತ್ತರಗಳನ್ನು ನೋಡಬಹುದು. ಆಗಾಗ್ಗೆ ಓದುಗರಿಂದ ಸ್ವಾರಸ್ಯಕರ ಪ್ರತಿಕ್ರಿಯೆಗಳು ಕಾಣಬರುತ್ತವೆ. ಬೇರೆ ಬೇರೆ ವಿಷಯಗಳ ತಜ್ಞರಲ್ಲದೆ ವಿದ್ಯಾರ್ಥಿವರ್ಗಕ್ಕೂ ಪ್ರೋತ್ಸಾಹ ಕೊಟ್ಟು ಲೇಖನಗಳನ್ನು ಬರೆಯಲು ಉತ್ತೇಜನ ಕೊಡುತ್ತದೆ. ಹೀಗೆ ಕಳೆದ ಎರಡು ದಶಕಗಳಲ್ಲಿ ಪತ್ರಿಕೆ ಹಲವಾರು ಹೊಸ ಹೊಸ ಲೇಖಕರನ್ನು ಬೆಳೆಸಿದೆ. ಒಟ್ಟಿನಲ್ಲಿ ಇದು ಶಿಕ್ಷಕರಿಗೆ ಒಂದು ರೀತಿಯಲ್ಲಿ ತಮ್ಮದೇ ಆದ ಆತ್ಮೀಯ ಪತ್ರಿಕೆ.

ಹಲವಾರು ಖ್ಯಾತ ಲೇಖಕರು ಮತ್ತು ವಿಜ್ಞಾನಿಗಳು (ಬರಗೂರು ರಾಮಚಂದ್ರಪ್ಪ, ಬೊಳುವಾರ್ ಮೊಹಮದ್, ನಾಗೇಶ ಹೆಗ್ಡೆ, ಎಮ್.ಅರ್.ಎನ್.ಮೂರ್ತಿ, ಕೊಳ್ಳೆಗಾಲ ಶರ್ಮ, ಎಮ್.ಎಸ್.ಶೈಲ, ನಿರಂಜನ ಆರಾಧ್ಯ, ಇತ್ಯಾದಿ ) ಪತ್ರಿಕೆಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತ ಬರುತ್ತಿದ್ದಾರೆ. ಎರಡು ವರ್ಷಗಳ ತನಕ ಪತ್ರಿಕೆ ಚಿಕ್ಕ ಆಕಾರದಲ್ಲಿದ್ದು ಈಗ ದೊಡ್ಡದಾಗಿಆಕರ್ಷಕವಾಗಿ ಪ್ರಕಟವಾಗುತ್ತಿದೆ. ಸಾಧಾರಣ ರೇಖಾಚಿತ್ರಗಳಲ್ಲದೆ ವರ್ಣರಂಜಿತ ಚಿತ್ರಗಳೂ ಹೆಚ್ಚು ಕಾಣಬರುತ್ತಿವೆ. ಈ ಪತ್ರಿಕೆ ಕನ್ನಡನಾಡಿನ ನೂರಾರು ಶಿಕ್ಷಕರನ್ನು ತಲಪುವುದಲ್ಲದೆ ಶಾಲಾ ಗ್ರಂಥಾಲಯಗಳು, ಸಮುದಾಯ ಭವನಗಳಲ್ಲೂ ದೊರಕುತ್ತದೆ. ಹಲವಾರು ವರ್ಷಗಳಿಂದ ಶ್ರೀ ಆರ್.ರಾಮಕೃಷ್ಣ ಅವರು ಸಂಪಾದಕರಾಗಿ ಬಹಳ ಆಸಕ್ತಿ ತೆಗೆದುಕೊಂಡು ಪತ್ರಿಕೆಯನ್ನು ಹೊರತರುತ್ತಿದ್ದಾರೆ.

(ಪತ್ರಿಕೆಯ ವಿಳಾಸ teacherpatrike@gmail.com. ಹಾಗೂ ಮೊಬೈಲ್ ನಂಬರ್ : 7899179058) ■




ಎರಡು ವರ್ಷ ಕೋವಿಡ್ ಟೈಮಲ್ಲಿ ನಾವು ದಪ್ಪ ಆಗಿದ್ವಿ, ಸ್ಕೂಲ್ ಬ್ಯಾಗ್ ತೆಳ್ಳಗಾಗಿತ್ತು...ಈಗ ಬ್ಯಾಗ್ ದಪ್ಪಗಾಗಿದೆ, ನಾವು ತೆಳ್ಳಗಾಗಿದ್ದೇವೆ...ಅಲ್ವಾ?